ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 2


ರೂ. 5/-

ಜನವರಿ 09, 2011

ಪುಟ 16

ಕನ್ನಡ ವಾರಪತ್ರಿಕೆ

Blog :janashakthi.wordpress.com
e-mail : js_weekly@yahoo.com









ಬಯಲಾದ 'ದೇಶಭಕ್ತ'ರ ಕರಾಳ ಮುಖಗಳು

ರಾಡಿಯಾ ಜೊತೆಗಿನ ಭ್ರಷ್ಟ ನಂಟು



ಕೃಷ್ಣ ನೀರು ಹಂಚಿಕೆ ಕಾರ್ಯಯೋಜನೆ ಜಾರಿಗೆ ಇನ್ನೂ ವಿಳಂಬವೇಕೆ?



ವಿಶ್ವ ಯುವಜನ ಉತ್ಸವ ಸಾಮ್ರಾಜ್ಯಶಾಹಿ ವಿರುದ್ಧ ಸೌಹಾರ್ದತೆಯ ಸಮರ



ಆಂಧ್ರ: ರಾಜಕೀಯ ಸಂಚಲನಗಳು

ಆಂಧ್ರಪ್ರದೇಶದಲ್ಲಿ ರಾಜಕೀಯ ಸಂಚಲನಗಳು
ಜನಪರ ರಾಜಕೀಯ ಬಲಗೊಂಡೀತೆ?

ಕೃಷಿರಂಗದ ಹಾಗೂ ಕೃಷಿಕ ಸಮುದಾಯದ ಪ್ರಶ್ನೆಗಳ ಆಧಾರದಲ್ಲಿ ಟಿಡಿಪಿ ಮುಖಂಡರಾದ ಚಂದ್ರಬಾಬು ನಾಯ್ಡುರವರು ಉಪವಾಸ ಸತ್ಯಾಗ್ರಹ ಆರಂಭಿಸಿದ್ದು ಆಂಧ್ರಪ್ರದೇಶದಲ್ಲಿ ಹೊಸ ರಾಜಕೀಯ ಸಂಚಲನೆಯನ್ನು ಸೃಷ್ಟಿಸಿತು. ಟಿಡಿಪಿ ಮತ್ತು ಎಡಪಕ್ಷಗಳು ಸೇರಿ ಹೊಸ ಆಂದೋಲನವನ್ನು ಆರಂಭಿಸಿವೆ. ಈಗ ಆಂಧ್ರದ ರಾಜಕೀಯದೊಳಗೆ ನಿಜಕ್ಕೂ ಏನು ನಡೆಯುತ್ತಿದೆ. ಒಂದು ಒಳ ನೋಟ ನೀಡುವ ಪಿ.ಸಾಯಿನಾಥರ ಲೇಖನ ಕೃಪೆ : 'ದಿ ಹಿಂದೂ'

ಪಿ.ಸಾಯಿನಾಥ್

ಸೈಕ್ಲೋನ್ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಹೆಚ್ಚು ಪರಿಹಾರ ನೀಡಬೇಕೆಂದು ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಯಾವಾಗ ಉಪವಾಸ ಸತ್ಯಾಗ್ರಹ ಆರಂಭಿಸಿದರೋ, ಆಗ ಆಂಧ್ರ ರಾಜಕಾರಣದಲ್ಲಿ ವಿಶೇಷ ಬೆಳವಣಿಗೆಗಳು ಕಾಣಲಿವೆ ಎಂಬುದು ಎಲ್ಲರಿಗೂ ತಿಳಿಯಿತು. ಭಾರಿ ಪ್ರಮಾಣದಲ್ಲಿ ಸುರಿದ ಮಳೆಗಳು ಆಂಧ್ರಪ್ರದೇಶದಲ್ಲಿ ಬೆಳೆಗಳನ್ನು ನಾಶ ಮಾಡಿತು. ಇದರಿಂದ ಆದ ನಷ್ಟ ಅಗಾಧವಾದದ್ದು. ಆದ್ರೆ ಒಂದು ಎಕರೆಯಲ್ಲಿ ಭತ್ತ ಬೆಳೆಯಲು 15 ಸಾವಿರ ನಷ್ಟ ಮಾಡಿಕೊಂಡ ರೈತನಿಗೆ ಸರ್ಕಾರ ನೀಡಿದ್ದು ಕೇವಲ 2,500 ರೂ. ಮಾತ್ರ. ಆದರೆ ಆಂಧ್ರದಲ್ಲಿರುವ ಭೂಮಿ ಸಂಬಂಧಗಳನ್ನು ನೋಡಿದರೆ ನಷ್ಟಕ್ಕೆ ಒಳಗಾದ ಎಲ್ಲ ಕೃಷಿಕರು ಈ ಅಲ್ಪ ಪರಿಹಾರವನ್ನೂ ಪಡೆಯಲು ಸಾಧ್ಯವಿಲ್ಲ.

ಇವೆಲ್ಲ ಏನೇ ಇರಲಿ, ಆದರೆ ಇದುವರೆಗೂ ಆಂಧ್ರದಲ್ಲಿನ ಬೆಳವಣಿಗೆಗಳನ್ನು ಗಮನಿಸಿದರೆ, ಈಗಿನ ರಾಜಕೀಯ ಬೆಳವಣಿಗೆಗಳು ಇನ್ನಷ್ಟು ತೀವ್ರಗೊಂಡರೆ ಇನ್ನೊಂದು ವರ್ಷದಲ್ಲಿ ಮತ್ತೊಂದು ಚುನಾವಣೆ ನಡೆಯುವುದಂತೂ ಗ್ಯಾರಂಟಿ. ಕೇವಲ ತೆಲಂಗಾಣ ವಿಷಯವಾಗಿಯಷ್ಟೆ ಅಲ್ಲ, ಈ ಚುನಾವಣೆ ಅಲ್ಲಿನ ರಾಜಕಾರಣಿಗಳಿಗೆ ಪ್ರಾದೇಶಿಕವಾಗಿ ತಮ್ಮ ಪ್ರಾಬಲ್ಯವನ್ನು ತೋರಿಸುವ ವೇದಿಕೆಯೂ ಆಗಲಿದೆ.

ಕಾಂಗ್ರೆಸ್ ಪಕ್ಷ ಈಗಾಗಲೇ ತನ್ನಿಂತಾನೆ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಇತರ ಹಲವಾರು ಸಮಸ್ಯೆಗಳೊಂದಿಗೆ ಜಗನ್ ಮೋಹನ್ ರೆಡ್ಡಿಯವರನ್ನು ಎದುರಿಸಬೇಕಾದ ಪರಿಸ್ಥಿತಿಯೂ ಕಾಂಗ್ರೆಸ್ ಮುಂದಿದೆ. ಕಾಂಗ್ರೆಸ್ ಪಕ್ಷಕ್ಕೆ ತೆಲಂಗಾಣ ಬಿಕ್ಕಟ್ಟನ್ನು ನಿರ್ವಹಣೆ ಮಾಡುವುದೆಂದರೆ ಅಲ್ಲಿನ ಸಮಸ್ಯೆಯನ್ನು ಪರಿಹರಿಸುವುದು ಎಂದಲ್ಲ. ಆದರೆ ಜಗನ್‌ಮೋಹನ್ ರೆಡ್ಡಿಯವರನ್ನು ತೆಲಂಗಾಣದಲ್ಲಿ ಪ್ರಚಾರ ಮಾಡಲು ಅವಕಾಶ ನೀಡದಿರುವುದಾಗಿದೆ. ಸರಿಯೋ ತಪ್ಪೊ ಸಾರ್ವಜನಿಕರ ಗ್ರಹಿಕೆಯಲ್ಲಿ ಏನಿದೆಯೆಂದರೆ, ತೆಲಂಗಾಣವನ್ನು ತೆಲಂಗಾಣ ರಾಷ್ಟ್ರಸಮಿತಿಗೆ ಬಿಟ್ಟುಕೊಡುವಂತಾಗಿದೆ. ತೆಲಂಗಾಣ ಪ್ರತ್ಯೇಕ ರಾಜ್ಯ ರಚನೆಯನ್ನು ವಿರೋಧಿಸುವವರಿಗೆ ಇದೊಂದು ವಂಚನೆಯಂತೆ ಕಾಣುತ್ತಿದೆ. ಯುಪಿಎ-1 ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕೆಸಿಆರ್ ಹಿಂಪಡೆದಾಗ ಹೇಗೆ ಬಹುಮತ ಕಡಿಮೆಯಾಯಿತು ಎಂಬುದನ್ನು ವೈಎಸ್‌ಆರ್ ಕಂಡಿದ್ದನ್ನು ಈಗ ಹಲವರು ಸ್ಮರಿಸಿಕೊಳ್ಳುತ್ತಾರೆ. ಪ್ರಸಕ್ತ ವರ್ಷವೂ ಸಹ ಟಿಆರ್‌ಎಸ್ ತೆಲಂಗಾಣದಲ್ಲಿ ಗೆಲುವನ್ನು ಬಾಚಿಕೊಂಡಿತು. ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟ ಮಾಡುವವರಿಗೆ ಕಾಂಗ್ರೆಸ್ ಏನೇನೂ ಭರವಸೆ ನೀಡಲಿಲ್ಲ. ಅಭಿವೃದ್ಧಿ ಕಾರ್ಯವನ್ನೂ ಸಾಕಷ್ಟು ಮಟ್ಟಿಗೆ ಕೈಗೊಳ್ಳಲಿಲ್ಲ. ನಿಜ ಹೇಳಬೇಕೆಂದರೆ ತೆಲಂಗಾಣದಲ್ಲಿನ ಯಾವುದೇ ಜ್ವಲಂತ ಸಮಸ್ಯೆಯನ್ನು ಪರಿಹರಿಸಲಿಲ್ಲ.

ತೆಲಂಗಾಣ ಹೊಸ ರಾಜ್ಯವನ್ನು ರಚಿಸುವುದೂ ಸೇರಿದಂತೆ ಆ ಪ್ರದೇಶದಲ್ಲಿ ಬೆಳೆಯುತ್ತಿರುವ ತೀವ್ರತರವಾದ ಹಲವಾರು ಸಮಸ್ಯೆಗಳನ್ನು ಬಗೆಹರಿಸುವ ಅಗತ್ಯವಿದೆ. ಕೆ.ರೋಸಯ್ಯ ಅವರ ಅಧಿಕಾರ ಅವಧಿಯಲ್ಲಿ ಮಾತ್ರವೇ ಇವೆಲ್ಲ ನಡೆದಿಲ್ಲ. ಆದರೆ ಆಗಿನ ಕೃಷಿ ಸಚಿವರು ಕೇಂದ್ರದ ನಿರ್ದೇಶನದ ಮೇರೆಗೆ ಹಲವು ನೀತಿಗಳನ್ನು ತಿರುವುಮುರುವು ಗೊಳಿಸಲು ಪ್ರಯತ್ನಿಸಿದರು. ಅಂತಿಮವಾಗಿ ಕೇಂದ್ರ ಸರ್ಕಾರದ ಕೃಷಿ ನೀತಿಗಳು ಆಂಧ್ರ ಪ್ರದೇಶ ಮಾತ್ರವಲ್ಲದೆ ಇಡೀ ದೇಶಾದ್ಯಂತ ಸಣ್ಣ ರೈತರನ್ನು ಇನ್ನಷ್ಟು ಬಿಕ್ಕಟ್ಟಿಗೆ ಸಿಲುಕಿಸಿತು.

ಆಂಧ್ರಪ್ರದೇಶದಲ್ಲಿ ಸಮರ್ಪಕವಾಗಿ ಭೂಮಿ ಹಂಚಿಕೆಯಾಗದಿರುವುದರಿಂದ ಗೇಣಿದಾರರ ಸಮಸ್ಯೆ ತೀವ್ರತರವಾಗಿದೆ. ಆಂಧ್ರಪ್ರದೇಶದಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿರುವವರಲ್ಲಿ ಶೇಕಡ 30ರಷ್ಟು ಗೇಣಿದಾರರಾಗಿದ್ದಾರೆ. ಈ ಗೇಣಿದಾರಿಕೆ ದಿನೇ ದಿನೇ ಏರಿಕೆಯಾಗುತ್ತಿದ್ದು, ಆಂಧ್ರಪ್ರದೇಶದ ಕಿಸಾನ್‌ಸಭಾ ಅಂದಾಜಿನ ಪ್ರಕಾರ ಇಂತಹ 40 ಲಕ್ಷ ರೈತರಿದ್ದಾರೆ. ಇವರಲ್ಲಿ ಬಹುತೇಕರು ಸದಾ ಆತಂಕ, ಸಾಲದ ಒತ್ತಡದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಗೇಣಿದಾರರು ಹೊಂದಿರುವ ಕೆಲವೇ ಹಕ್ಕುಗಳು ಲೋಪಗಳಿಂದ ಕೂಡಿವೆ. ಇದರೊಂದಿಗೆ ಅವರು ಹೊಂದಿರುವ ಭೂಮಿ ಪ್ರಕೃತಿ ವಿಕೋಪಗಳು ಇಲ್ಲದಿದ್ದರೂ ಈ ಭೂಮಿಯಲ್ಲಿ ಉತ್ತಮ ಬೆಳೆ ಕಾಣುವುದು ಕಷ್ಟ. ಇಂತಹ ಕೃಷಿಕರಲ್ಲೇ ಅತಿ ಹೆಚ್ಚಿನ ಆತ್ಮಹತ್ಯೆ ಪ್ರಕರಣಗಳು ನಡೆಯುವುದು. ಒಂದು ವೇಳೆ ಸರ್ಕಾರ ಪರಿಹಾರ ನೀಡಿದರೂ ಭೂಮಿ ಮಾಲೀಕನ ಹೆಸರಿನಲ್ಲಿ ಇರುವುದರಿಂದ ಆ ಹಣ ಭೂಮಾಲಿಕನಿಗೆ ಸೇರುತ್ತದೆ. ಬ್ಯಾಂಕ್‌ಗಳಿಂದ ಸಾಲ ಪಡೆಯುವುದೆಂದರೆ ಎಲ್ಲಿಲ್ಲದ ಕಿರುಕುಳ. ಕೆಲವು ಸಂದರ್ಭದಲ್ಲಿ ರೈತರಿಗೆ ಸಾಲ ನೀಡುವಂತೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರೂ ಪಡೆಯುವುದು ಕಷ್ಟ. ಕೆಲವೊಮ್ಮೆ ನೀಡಿದರೂ ಬ್ಯಾಂಕ್‌ಗಳು ರೈತನಿಗೆ ಅಗತ್ಯವಾದಷ್ಟು ಸಾಲವನ್ನು ನೀಡುವುದಿಲ್ಲ.


ಹಾಗಾಗಿ ಗೇಣಿದಾರರಿಗೆ ಎಂದೂ ರಕ್ಷಣೆ ಎಂಬುದೆ ಸಿಕ್ಕಿಲ್ಲ. ಅದರ ಬದಲಿಗೆ ಅವರನ್ನು ಶೋಷಣೆಗೆ ಒಳಪಡಿಸಲಾಗುತ್ತದೆ. ಇಂತಹ ರೈತ ಸಮುದಾಯಕ್ಕೆ ಸಂಬಂಧಿಸಿದಂತೆ ಜಯತಿಘೋಶ್, ಸ್ವಾಮಿನಾಥನ್ ಮತ್ತು ಕೋನೇರು ರಂಗರಾವ್ ಆಯೋಗಗಳು ಅತ್ಯಂತ ಪ್ರಮುಖವಾದ ಅಂಶಗಳನ್ನು ಗಮನಿಸಿವೆ. ವಾಸ್ತವವಾಗಿ ಹೇಳುವುದಾದರೆ ಸರ್ಕಾರಗಳು ಇವರಿಗಾಗಿ ಏನೇನೂ ಮಾಡಿಲ್ಲ. ಇದಕ್ಕೆ ಬದಲಾಗಿ ಇಡೀ ರೈತ ಸಮುದಾಯವೇ ಸಂಕಷ್ಟಕ್ಕೆ ಸಿಲುಕಿದಾಗ ಗೇಣೀದಾರರು ಇನ್ನಷ್ಟು ಹೆಚ್ಚು ಬಿಕ್ಕಟ್ಟಿಗೆ ಸಿಲುಕುತ್ತಾರೆ.


ಇನ್ನೊಂದು ವರ್ಷದಲ್ಲಿ ಮತ್ತೊಂದು ಚುನಾವಣೆ ನಡೆಯುವುದಂತೂ ಗ್ಯಾರಂಟಿ. ಕೇವಲ ತೆಲಂಗಾಣ ವಿಷಯವಾಗಿಯಷ್ಟೆ ಅಲ್ಲ, ಈ ಚುನಾವಣೆ ಅಲ್ಲಿನ ರಾಜಕಾರಣಿಗಳಿಗೆ ಪ್ರಾದೇಶಿಕವಾಗಿ ತಮ್ಮ ಪ್ರಾಬಲ್ಯವನ್ನು ತೋರಿಸುವ ವೇದಿಕೆಯೂ ಆಗಲಿದೆ.

ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಒಂದು ಅವಧಿಯಲ್ಲಿ ಉತ್ತಮವಾಗಿ ಅನುಷ್ಠಾನಕ್ಕೆ ತಂದಿದ್ದ ಆಂಧ್ರಪ್ರದೇಶದಲ್ಲಿ ಈಗ ಸಮಸ್ಯೆಗಳು ಶುರುವಾಗಿವೆ. ಕಳೆದ ವರ್ಷ ಏಕಕಾಲಕ್ಕೆ ಉದ್ಯೋಗ ಕಾರ್ಯಕ್ರಮವನ್ನು ಪೂರ್ಣಗೊಳಿಸಿಲ್ಲ. ಎನ್‌ಆರ್‌ಇಜಿ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನಕ್ಕೆ ಬಂದಂತಹ ಸಮಯದಲ್ಲಿ ಮಹಬೂಬ್‌ನಗರದಂತಹ ಜಿಲ್ಲೆಗಳಿಂದ ಉದ್ಯೋಗ ಇಲ್ಲದೆ ವಲಸೆ ಹೋಗುವುದು ಗಣನೀಯವಾಗಿ ಇಳಿಮುಖ ಕಂಡಿತ್ತು. ಆ ಸಂದರ್ಭದಲ್ಲಿ ಸ್ವಯ… ಅಧಿಕಾರ ಅವಧಿಯಲ್ಲಿ ರದ್ದುಗೊಳಿಸಿದ್ದ ಬಿಪಿಎಲ… ಕಾರ್ಡ್‌ಗಳನ್ನು ವೈಎಸ್‌ಆರ್ ಅವಧಿಯ… ಉಳಿಸಿಕೊಳ್ಳಲಾಯಿತು.

ಕೆಲವು ಬೃಹತ್ ಯೋಜನೆಗಳಿಗಾಗಿ ಲಕ್ಷಾಂತ… ಜನ ಸ್ಥಳಾಂತರಿಸಿರುವ ಘಟನೆಗಳ… ಆಂಧ್ರಪ್ರದೇಶದಲ್ಲಿ ಜರುಗಿವೆ. ಮುಂದಾಲೋಚ… ಇಲ್ಲದ ನೀರಾವರಿ ಯೋಜನೆಗಳು, ಪಕ್ಷಪಾತದಿಂ… ಕೂಡಿದ ಭೂ ಒಪ್ಪಂದಗಳ… ಮತ್ತು ವಿಲಕ್ಷಣವಾದ ವಿಶೇ… ಆರ್ಥಿಕ ಯೋಜನೆಗಳಿಂದ್ಲೂ… ಜನರನ್ನು ಸ್ಥಳಾಂತರಗೊಳಿ… ಲಾಗಿದೆ. ಇಂತಹ ಯೋಜನೆಗ… ಪರಿಣಾಮವಾಗಿ ವೈಎಸ್‌ಆರ… ಆಡಳಿತದಲ್ಲಿಯೂ ಕೋಟ್ಯಂತ… ರೂ.ಗಳ ಭೂ ಅವ್ಯವಹಾರಗಳ… ಜರುಗಿವೆ. ಆದರೆ ಈ ಎ… ಹಗರಣಗಳು ನಿಧಾನವಾ… ಒಂದೊಂದಾಗಿ ಬಯಲಿಗ… ಬರುತ್ತಿವೆ. ಹಾಗಾಗಿ 2009… ಚುನಾವಣೆಯಲ್ಲಿ ಕಾಂಗ್ರೆಸ್ ಪ… ಜಯಗಳಿಸಲು ಸಾಧ್ಯವಾಯಿತು… ಹಲವಾರು ಭೂಹಗರಣಗಳು ನಂತರವಷ್ಟೆ ಬೆಳಕಿ… ಬರಲಾರಂಭಿಸಿದವು. ಹಾಗಾಗಿ ಈಗಿ… ಸರ್ಕಾರಕ್ಕಿಂತಲೂ ವೈಎಸ್‌ಆರ್ ಆಡಳಿತ… ಉತ್ತಮವಾಗಿತ್ತು ಎಂಬ ಭಾವನೆಗಳು ಜನರ… ಮೂಡಿವೆ. ಈ ಎಲ್ಲ ಬೆಳವಣಿಗೆಗಳಿಂದಾ… ಜಗನ್‌ಮೋಹನ್ ರೆಡ್ಡಿ ಪರವಾಗಿ ಸಾಕಷ… ಅನುಕಂಪ ಬಂದಿದೆ. ಇದೇ ಪರಿಸ್ಥಿತಿ ಮುಂದುವರೆದ… ಜಗನ್‌ಮೋಹನ್ ರೆಡ್ಡಿ ಮಾಡಿರುವ ಹಗರಣಗಳ… ಬೆಳಕಿಗೆ ಬಂದರೂ ಅವರ ಮೇಲಿನ ಅನುಕಂಪ… ಅಡಿಯಲ್ಲಿ ಕೊಚ್ಚಿಹೋಗುವ ಸಾಧ್ಯತೆಗಳೂ ಇವ… ಈ ಸಮಸ್ಯೆಗಳು ಅವರನ್ನು ಕಾಡದೆ ಬಿಡುವುದಿಲ್ಲ… ಆದರೆ ಸದ್ಯದ ಸ್ಥಿತಿಯಲ್ಲಂತೂ ಅವರ…

ಪುಟ 14





ಉಪವಾಸ ಕೊನೆಗೊಳಿಸುತ್ತಿರುವ ಚಂದ್ರಬಾಬು ನಾಯ್ಡುರವರು

ಸಂಪಾದಕೀಯ

ಕೃಷ್ಣ ನೀರು ಹಂಚಿಕೆ: ಇನ್ನಾದರೂ ಕಾರ್ಯಕ್ಕಿಳಿಯಬೇಕು

ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ಈ ಮೂರು ರಾಜ್ಯಗಳ ನಡುವಿನಲ್ಲಿದ್ದ ಕೃಷ್ಣಾ ಕಣಿವೆ ನೀರು ಹಂಚಿಕೆಯ ವಿವಾದವು ಅಂತಿಮಗೊಳ್ಳುವಂತಹ ತೀರ್ಪನ್ನು 'ಕೃಷ್ಣಾ ನದಿ ನೀರು ಹಂಚಿಕೆ ನ್ಯಾಯಮಂಡಳಿ' ಯು ನೀಡಿದೆ. 43 ವರ್ಷಗಳ ದೀರ್ಘ ವಾದ-ವಿವಾದಗಳ ನಂತರ ಹೊರಬಂದ ಈ ತೀರ್ಪಿನ ಬಗ್ಗೆ ಆಕ್ಷೇಪ, ಅತೃಪ್ತಿ ಇರಬಹುದಾದರೂ ಮುಂದಿನ ಪ್ರಗತಿ, ರಾಷ್ಟ್ರದ ಹಿತ ದೃಷ್ಟಿಯಲ್ಲಿ ಇದು ಸಮಾಧಾನಕರವಾದ ಸ್ವಾಗತಾರ್ಹ ತೀರ್ಪಾಗಿದೆ.


'ಎ'ಸ್ಕೀಮ್ ಹಾಗೂ ವಿಶೇಷವಾಗಿ 'ಬಿ' ಸ್ಕೀಮ್‌ನಲ್ಲಿ ಒಳಗೊಂಡು ಮಹಾರಾಷ್ಟ್ರಕ್ಕೆ 666 ಟಿ.ಎಂ.ಸಿ. ಕರ್ನಾಟಕಕ್ಕೆ 911 ಟಿ.ಎಂ.ಸಿ.ಹಾಗೂ ಆಂಧ್ರಕ್ಕೆ 1001 ಟಿ.ಎಂ.ಸಿ. ನೀರು ಈ ತೀರ್ಪಿನಿಂದಾಗಿ ಲಭ್ಯವಾಗಲಿದೆ. ಅಂದರೆ ಬಿ ಸ್ಕೀಮಿನ ಹಂಚಿಕೆಯಿಂದಾಗಿ ಕರ್ನಾಟಕಕ್ಕೆ 734 ಟಿ.ಎಂ.ಸಿ. ಜೊತೆಗೆ 177 ಟಿಎಂಸಿ ನೀರು ದೊರೆಯಲಿದೆ. ಆಂಧ್ರಕ್ಕೆ 811ರ ಬದಲಾಗಿ 1001, ಮಹಾರಾಷ್ಟ್ರ 585 ಟಿಎಂಸಿಗೆ ಭಾಗವಾಗಿ 666 ಪಡೆಯಲಿದೆ. ಇನ್ನೂ ಇದರೊಂದಿಗೆ ಕರ್ನಾಟಕದ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 524.252 ಮೀಟರ್‌ಗಳಿಗೆ ಹೆಚ್ಚಿಸಲು ನ್ಯಾಯಮಂಡಳಿ ತೀರ್ಪು ನೀಡಿರುವುದೂ ಸಹ ಅತ್ಯಂತ ಗಮನಾರ್ಹ. ಹಾಗಾದಲ್ಲಿ ಅಧಿಕ ನೀರು ಸಂಗ್ರಹವಾಗುವ ಅವಕಾಶ ಹೆಚ್ಚಲಿದೆ. ಇದನ್ನೇ ಕರ್ನಾಟಕವು ಹಿಂದಿನಿಂದಲೂ ಮಂಡಳಿಯ ಮುಂದೆ ವಾದಿಸುತ್ತಿತ್ತು. ಆಂಧ್ರಪ್ರದೇಶವು ಸುಪ್ರಿಂಕೋರ್ಟ್‌ನ ಮುಂದೆ ಆಕ್ಷೇಪಿಸಿದ ಕಾರಣ. ಆಲಮಟ್ಟಿ ಎತ್ತರವನ್ನು 519 ಮೀಟರ್‌ಗಳಿಗೆ ತಗ್ಗಿಸಲಾಗಿತ್ತು. ಆದರೀಗ ಹೊಸ ಅವಕಾಶ ತೆರೆದಿವೆ. ಈಗಲೂ ಎತ್ತರದಿಂದ ಲಭ್ಯವಾಗುವ ನೀರು ಕರ್ನಾಟಕವನ್ನು ಒಳಗೊಂಡು ಅಣೆಕಟ್ಟಿನ ಈಗಿನ ರಾಜ್ಯಗಳು ಪ್ರಯೋಜನ ಪಡೆಯುವಂತಾಗಬೇಕು.

1969ರ ಏಪ್ರಿಲ್ 10 ರಂದು ನ್ಯಾಯಮೂರ್ತಿ ಬಚಾವತ್‌ರವರ ನೇತೃತ್ವದಲ್ಲಿ ನ್ಯಾಯಾಧೀಕರಣ ಮೊದಲನೆಯದಾಗಿ ರಚನೆಯಾದುದ್ದು, ಅದು 1973 ಡಿಸೆಂಬರ್ 24 ರಂದು ಮೊದಲ ವರದಿ ನೀಡಿದುದು, ನಂತರ 1976 ಮೇ 27ಕ್ಕೆ ಎರಡನೇ ವರದಿ ನೀಡಿದುದು ಈ ಪ್ರಕ್ರಿಯೆಯಲ್ಲಿ ಪ್ರಮುಖವಾಗಿದೆ. ಈ ವರದಿಗಳಂತೆ ಹೆಚ್ಚುವರಿ ನೀರನ್ನು ('ಬಿ' ಸ್ಕೀಂ) ಕರ್ನಾಟಕ, ಮಹಾರಾಷ್ಟ್ರ, ಆಂಧ್ರಗಳಿಗೆ ಕ್ರಮವಾಗಿ 25:50:25 ರ ಅನುಪಾತದಲ್ಲಿ ನೀರು ಹಂಚಿಕೆ ಮಾಡಬೇಕೆಂಬ ಬಚಾವತ್ ನಿರ್ದೇಶನದಂತೆಯೇ ಮಾಡಿಲ್ಲವಾದರೂ ಕರ್ನಾಟಕದ ಪಾಲು ಶೇ.40 ರಷ್ಟಿದೆ. ಇದು ಸಹ ಅಂತಹ ತೀವ್ರ ನಿರಾಶೆ ತರುವ ಸಂಗತಿಯಲ್ಲ.

ಈ ಹಂಚಿಕೆಗೆ ಮುಖ್ಯಾಗಿ ಆಯಾ ರಾಜ್ಯಗಳು ಈಗಾಗಲೇ ನೀರಿನ ಬಳಕೆಗೆ ಮಾಡಿದ ಹಣ, ಅಗತ್ಯತೆಗಳನ್ನು ಮಾನದಂಡವಾಗಿ ಪರಿಗಣಿಸಲಾಗಿದೆ. ಇದೆಲ್ಲಾ ರಾಷ್ಟ್ರದ ಹಣ, ದೇಶದ ಜನತೆಗೆ ಸೇರಿದ್ದು, ಎಂಬ ನಿಲುವು ಅಗತ್ಯವಿದೆ.

ಈಗಿನ ಪ್ರಮುಖ ಸಂಗತಿಯೆಂದರೆ, ಹಂಚಿಕೆಯಾದ ನೀರನ್ನು ಸಮರ್ಥವಾಗಿ, ಸದ್ವಿನಿಯೋಗ ಮಾಡಿ ಪ್ರಗತಿ ಸಾಧಿಸುವುದೇ ಮುಖ್ಯವಾಗಿದೆ. ಈಗಾಗಲೇ ಆಂಧ್ರಪ್ರದೇಶ ಮುಂದೆ ದೊರೆಯಬಹುದಾದ ನೀರನ್ನು ಗಮನದಲ್ಲಿರಿಸಿ ಬಹುತೇಕವಾಗಿ ಕೃಷಿ,ಕುಡಿವ ನೀರು ಇತ್ಯಾದಿಗಳಿಗೆ ಅಗತ್ಯವಾದ ಎಲ್ಲಾ ನಾಲೆ, ಅಣೆಕಟ್ಟು ಇತ್ಯಾದಿ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. ಆದರೆ ಮಹಾರಾಷ್ಟ್ರ, ಕರ್ನಾಟಕದಲ್ಲಿ ಅಂತಹ ಸ್ಥಿತಿಯಿಲ್ಲ. .ಬಚಾವತ್ ತೀರ್ಪಿನಂತೆ 2000ಇಸ್ವಿಯೊಳಗೆ ಲಭ್ಯ ನೀರಿನ ಬಳಕೆ ಮಾಡಿಕೊಳ್ಳ ಬೇಕೆಂಬುದನ್ನು ಕರ್ನಾಟಕ ಗಂಭೀರವಾಗಿ ಪರಿಗಣಿಸಿ ಕಾರ್ಯರೂಪಕ್ಕೆ ಇಳಿಯಲೇ ಇಲ್ಲ. ನೀರಿನ ಮೇಲಿನ ಹಕ್ಕು

ಪುಟ 12 ಕ್ಕೆ



ಹೊಸ ವರುಷ : ಅಭಯ ಆತಂಕ

ಮುಂಬೈ ಮತ್ತು ಮಹಾರಾಷ್ಟ್ರದಾದ್ಯಂತ ಕಟ್ಟೆಚ್ಚರ ವಹಿಸಲಾಗಿದೆ. ಸಮುದ್ರದ ಮೂಲಕ ಕರ್ನಾಟಕದೊಳಗೆ '13 ಲಷ್ಕರ್ ಎ ತೋಯ್ಬಾ ಉಗ್ರರು ನುಸುಳಿರುವ ಶಂಕೆ ಇದೆ' ಈ ಹಿನ್ನೆಲೆಯಲ್ಲಿ ವಿಶೇಷ ತರಬೇತು ಪಡೆದ ಕಮ್ಯಾಂಡೋ ಪಡೆ, ಕೇಂದ್ರ ಮೀಸಲು ಪಡೆಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ'. ಇಂತಹ ಸುದ್ದಿ ಟಿ.ವಿ.ಗಳಲ್ಲಿ ಬಿತ್ತರಗೊಂಡಂತೆ ಆತಂಕವೆಂಬುದು ಜನರ ಎದೆಯಲ್ಲಿ ನಾಟಿತು. ಮರುದಿನ ದಿನಪತ್ರಿಕೆಗಳಲ್ಲಿ ಇನ್ನಷ್ಟು ವಿವರಗಳು ಪ್ರಕಟವಾದ ಮೇಲೆ ಆತಂಕ ಹೆಚ್ಚಿಸಿತು.

ಟಿ.ವಿ. ಚಾನೆಲ್‌ನ ಸುದ್ದಿ ಕೇಳಿದ ನನ್ನ ಮಗಳದ್ದು ಒಂದು ಪ್ರಶ್ನೆ. 'ಟೆರರಿಸ್ಟ್‌ಗಳು ಎಲ್ಲಾ ಕಡೆ ಬಂದು ಗಲಾಟೆ ಮಾಡುತ್ತಾರಾ? ಬಾಂಬ್ ಹಾಕುತ್ತಾರಾ? ಈ ಟೆರರಿಸ್ಟ್‌ಗಳು ಬಂದಿರುವುದು ಇವರಿಗೆ ಹೇಗೆ ಗೊತ್ತಾಯಿತು? ಈ ಸೆಕ್ಯುರಿಟಿ ಎಂದರೆ ಎಲ್ಲೆಲ್ಲಿ ಮಾಡುತ್ತಾರೆ'. ಪ್ರಶ್ನೆಗಳು ನಿಲ್ಲುವ ಸಂಭವವಿರಲಿಲ್ಲ. ನಾನು ಹೇಳಿದೆ. 'ಮುಂಬೈಗೆ ಬಂದಿರುವ ಶಂಕೆ ಇದೆ ಎನ್ನುತ್ತಿದ್ದಾರೆ. ಬೆಂಗಳೂರಿಗೂ ಬರಬಹುದು ಎನ್ನುತ್ತಾರೆ. ಭದ್ರತೆಯನ್ನು ಪ್ರಮುಖ ಸ್ಥಳಗಳಲ್ಲಿ ಪ್ರಮುಖ ವ್ಯಕ್ತಿಗಳಿಗೆ ಮಾತ್ರ ನೀಡಲಾಗುತ್ತಿದೆ' ಎಂದೆ. 'ಅಂದರೆ ಪರ್ಸನಲ್ ಸೆಕ್ಯುರಿಟಿ ಇಲ್ವಾ'. ಅವಳ ಆತಂಕ ಹೆಚ್ಚಿತ್ತು. ಈ ಉಗ್ರರು ಬೆಂಗಳೂರಿನಲ್ಲಿಯೂ ಕರ್ನಾಟಕದ ಕರಾವಳಿಯಲ್ಲಿಯೂ ನುಸುಳಿ ಹೊಸ ವರ್ಷದ ಸಂತಸ ಸಂಭ್ರಮವನ್ನು ಹಾಳುಗೆಡಹಲು ಸಂಚು ರೂಪಿಸಿದ್ದಾರೆಂಬ ಸುದ್ದಿಯಂತೂ ರಾಜ್ಯದ ಬೆಂಗಳೂರು, ಕರಾವಳಿಯ ಜನರನ್ನು ನಿದ್ದೆಗೆಡಿಸುತ್ತಿದೆ. ಮುಖ್ಯಮಮತ್ರಿಗಳು ನಡೆಸಿದ ಪೊಲೀಸ್ ಅಧಿಕಾರಿಗಳ ಭದ್ರತಾ ಸಭೆ ಮತ್ತು ಆತಂಕಪಡುವ ಅಗತ್ಯವಿಲ್ಲ ಎಂಬ ಅವರ 'ಅಭಯ' ಭಯವನ್ನು ಹೆಚ್ಚಿಸಿದೆ.

ಅಂತಹದ್ದೊಂದು ಅವಘಡಗಳು ನಡೆಯುತ್ತವೆಯೋ, ಇಲ್ಲವೋ ಆದರೆ ಸಂತಸ, ಸಂಭ್ರಮ ಹೊಸ ಸಂಕಲ್ಪಗಳನ್ನು ಕೈಗೊಳ್ಳುವ ಹಳಿಯದರಿಂದ ಅನುಭವಗಳ ಪಾಠ ಕಲಿಯಬೇಕಾದ ಸಂದರ್ಭ. ಸಂತಸದಿಂದಲೇ ಹೊಸ ವರುಷ ಸ್ವಾಗತಿಸುವ ಸನ್ನಿವೇಶ. ಆದರೆ, ಆರಂಭದಲ್ಲೇ ಆತಂಕ, ಭಯ, ಅತಂತ್ರದ ಕರಾಳ ಛಾಯೆ.

ಬಹಳಷ್ಟು ಸಲ ಹೀಗೂ ಆಗುತ್ತದೆ. ಹೊರಗೆ ಹೇಳಿಕೊಂಡಷ್ಟು ಪ್ರಚಾರಿಸಿದಷ್ಟು ಗೊಂದಲ, ಗದ್ದಲ ಆಗದೇ ಇರಬಹುದು. ಆದರೆ ಇಂತಹ ಅಬ್ಬರ ಆತಂಕಗಳಿಂದ ಆಳುವವರು ಲಾಭ ಹೊಡೆಯುವ ಸಂಭವವೇ ಇದೆ. ಯಾಕೆಂದರೆ ಪ್ರೀತಿ, ಪ್ರೇಮ, ಮದುವೆ ಆತಂಕ, ಭಯ, ಹುಟ್ಟು, ಸಾವು ವ್ಯಕ್ತಿಗತ ಸಂಬಂಧಗಳು ಏನೆಲ್ಲಾ ಹೀಗೆ ವ್ಯಾಪಾರದ, ರಾಜಕೀಯದ, ಸಾರ್ವಜನಿಕ ಜೀವನದಲ್ಲಿ ವ್ಯಾಪಾರದ ಸರಕಾಗುತ್ತಿರುವಾಗ ಜನರ ತಲ್ಲಣ, ಭಯಗಳನ್ನು ಹೆಚ್ಚಿಸಿ, ಒಬ್ಬ ಶತ್ರುವನ್ನು ಸೃಷ್ಟಿಸಿ, ಅದರತ್ತ ಎಲ್ಲರ ಗಮನ ಹೊರಳುವಂತೆ ಮಾಡುವವರು ಅಧಿಕಾರದ ಚುಕ್ಕಾಣಿ ಹಿಡಿದಿರುವಾಗ-'ಭಯವೆಂಬುದು ತೋರುಂಬ ಲಾಭವೇ ಆದಾಗ?...

ಮಾನವನ ಇತಿಹಾಸದಲ್ಲಿ, ನಿಸರ್ಗದಲ್ಲಿ ಪ್ರತಿಯೊಂದು ಕ್ಷಣವು ಹೊಸತೇ. ಇಂದು ಎಂಬುದು ನಿನ್ನೆಯ ಒಡಲೊಳಗೆ ಚಿಗುರಿ ಹೊರಬಿದ್ದ ಹುಟ್ಟು. ನಾಳೆಯೆಂಬುದು ಇಂದಿನ ಒಡಲಲ್ಲಿ ಬೆಳೆವ ಬಸಿರು. ಈ ಸ್ಫೋಟಗಳ ನಡುವೆ ಸೂರ್ಯನ ಸುತ್ತ ಭೂಮಿಯು ಒಂದು ಸುತ್ತು ಮುಗಿಸುವುದು ಒಂದು ವರುಷ ಎನ್ನುವುದು. ಇದನ್ನೇ ನಮ್ಮ ಮೊಬೈಲ್‌ನ ಎಸ್.ಎಂ.ಎಸ್. ಪಾರಂಗತರು 365 ದಿನಗಳು, 12 ತಿಂಗಳು, 52 ವಾರಗಳು, 8760 ತಾಸುಗಳು, 52,5600 ನಿಮಿಷಗಳು, 31,536000 ಸೆಕೆಂಡುಗಳು... ಎನ್ನುವುದು. ಇದರಲ್ಲಿ ಯಾವ ಗಳಿಗೆ ಹೊಸತಲ್ಲ? - ಹೇಳ ಬಲ್ಲಿರಾ?

ಇಂದು ಬೆಳಿಗ್ಗೆ ಮೊಬೈಲ್‌ನ ಪೆಟ್ಟಿಗೆಯೊಳಗೆ ಸದ್ದು ಮಾಡುತ್ತಾ ಸಂದೇಶ ಸೇರಿತು - '2010 ಕ್ಕೆ ವಿದಾಯ ಹೇಳುವಾಗ 2011 ನ್ನು ಸ್ವಾಗತಿಸುವಾಗ... ನಾವು ನೀವೆಲ್ಲಾ ಭ್ರಷ್ಟತೆಯ ವಿರುದ್ಧ ದನಿಯೆತ್ತುವ ಬನ್ನಿ' ಎಂಬುದು. 31 ರ ಸಂಜೆ ಬೈಕ್ ರ್‍ಯಾಲಿಗೆ ಮುಂದಾಗುತ್ತಿರುವುದು ಯುವಜನರು, ಡಿವೈಎಫ್ಐ ನೇತೃತ್ವ...

ಹೊಸ ವರುಷದಲ್ಲಿ ಸಂಕಲ್ಪಿಸಬೇಕಾದ ಹಲವು ಸಂಗತಿಗಳಿವೆ. ಹೋರಾಡಬೇಕಾದ ವಿಷಯಗಳಿವೆ. ಬನ್ನಿ ಅಸಮಾನತೆ, ಅನ್ಯಾಯ ದಬ್ಬಾಳಿಕೆಗಳೆದುರು ಧ್ವನಿಯೆತ್ತೋಣ, ಬಿಗಿಮುಷ್ಠಿ ಹಿಡಿದು ಕೆಂಪು ಸೂರ್ಯನನ್ನು ಸ್ವಾಗತಿಸೋಣ. ಈ ಸಂಕಲ್ಪಗಳ ಮಾನವ ಸರಪಳಿಯು ಭಯ, ಭ್ರಷ್ಟತೆ, ಹಸಿವು ಅನ್ಯಾಯಗಳೆದುರು ರಕ್ಷಿಸುವ ಕೊಂಡಿ. ನೀವು ನಾವು, ಅದರಲ್ಲಿ ನಮ್ಮೆಲ್ಲ ಓದುಗರಿಗೆ ಹೊಸ ವರುಷದ ಹಾರ್ದಿಕ ಶುಭಾಶಯಗಳು.

ರಾಜ್ಯಪಾಲರು ಸರ್ಕಾರದ ನಡುವೆ

ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಮತ್ತು ಬಿಜೆಪಿ ಸರ್ಕಾರದ ನಡುವಿನ ಗುದ್ದಾಟ ಪುನರಾರಂಭಗೊಂಡಿದೆ. ಪ್ರಸಕ್ತ ಸರ್ಕಾರದಲ್ಲಿನ ಕೆಲವು ಸಚಿವರು, ಮುಖ್ಯಮಂತ್ರಿಗಳು ನಡೆಸಿರುವ ಹಗರಣ, ಅಕ್ರಮಗಳೇ ಈಗಲೂ ವಸ್ತು! ಈ ಹಿಂದೆ ಕೆಲವು ಶಾಸಕರು ನೀಡಿದ್ದ ದೂರನ್ನು ಅನುಸರಿಸಿ ರಾಜ್ಯಪಾಲರು ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ನಿರ್ದಿಷ್ಟವಾದ ಮಾಹಿತಿ ಖಚಿತ ಅಭಿಪ್ರಾಯವನ್ನು ಕೇಳಿದ್ದಾರೆ. ಅದಕ್ಕೆ ಸೂಕ್ತ ಉತ್ತರಿಸದೇ ಎರಡೆರಡು ಸಾಲಿನ ಉತ್ತರ ಬರೆದು ಮುಖ್ಯಮಂತ್ರಿಗಳು ನಿರಾಕರಿಸಿದ್ದಾರೆ. ಆದರೆ ಇದೇ ಮುಖ್ಯಮಂತ್ರಿಗಳು ಈ ಹಿಂದೆ ಆಂತರಿಕವಾಗಿ, ಬಹಿರಂಗವಾಗಿಯೂ ಭೂಮಿ ಹಾಗೂ ಗಣಿ ಹಗರಣಗಳು ನಡೆದ ಬಗ್ಗೆ ಒಪ್ಪಿಕೊಂಡೂ ಆಗಿತ್ತು. ರಾಜ್ಯಪಾಲರಿಗೂ ಇದರ ಮಾಹಿತಿ ಇತ್ತು. ಆದರೆ ಈಗ ನಿರಾಕರಿಸುವ ಮುಖ್ಯಮಂತ್ರಿಗಳ ಅಸಲಿಯತ್ತು ಏನು? ಏನನ್ನು ಬಚ್ಚಿಡಲು, ಮುಚ್ಚಿಡಲು ಅವರು ಯತ್ನಿಸುತ್ತಿದ್ದಾರೆ? ಯಾರನ್ನು ರಕ್ಷಿಸಬಯಸಿದ್ದಾರೆ? ಇದು ರಾಜ್ಯಪಾಲರ ಪ್ರಶ್ನೆ. ಹಾಗೆಯೇ ಸಾರ್ವಜನಿಕರದ್ದು. ಈ ಪ್ರಶ್ನೆ ಖುಲ್ಲಾಖುಲ್ಲಾ! ಯಾಕೆಂದರೆ ಮಾಹಿತಿ ಬಯಸಿದ ರಾಜ್ಯಪಾಲರ ಮೇಲೆ ಮುಖ್ಯಮಂತ್ರಿಯಾದಿಯಾಗಿ, ಬಿಜೆಪಿ ರಾಜ್ಯ ಅಧ್ಯಕ್ಷ ಹಾಗೂ ರಾಷ್ಟ್ರೀಯ ನಾಯಕರು ಕೆಂಡಾಮಂಡಲವಾಗಿ, ಮಾತಿನ ಧಾಳಿ ನಡೆಸಿದ ರೀತಿಯೇ ಈ ಪ್ರಶ್ನೆಗಳನ್ನು ಸಹಜವಾಗಿ ಹುಟ್ಟುಹಾಕಿದೆ. ದುರುದ್ದೇಶಗಳನ್ನೂ ತೋರಿಸಿದೆ.

ಈ ಸಂದರ್ಭದಲ್ಲಿ ಬಿಜೆಪಿ ನಾಯಕರು ರಾಜ್ಯಪಾಲರ ಬಗ್ಗೆ ಬಳಸಿದ ಭಾಷೆ, ಬೆದರಿಕೆ ಅನಾಗರೀಕವಾದದ್ದು, ಸಂವಿಧಾನಾತ್ಮಕ ಸಂಸ್ಥೆಗಳ ಮೇಲೆ ಅವರ ಧಾಳಿ ಈ ಮೊದಲಿನಿಂದಲೇ ಇದ್ದೇ ಇದೆ. ಅದರಲ್ಲಿಯೂ ಗಡ್ಕರಿ ಅವರನ್ನು ವಿರೋಧಪಕ್ಷ ಎಂದು ಹೇಳಿದ ಮೇಲೆ ಅದು ಇಮ್ಮಡಿಗೊಂಡಿದೆ. ಈ ಒಟ್ಟು ವಿದ್ಯಾಮಾನಗಳಲ್ಲಿ ಒಂದು ವಿಷಯವನ್ನು ನಾವು ಗಮನಿಸಲೇಬೇಕು. ರಾಜ್ಯಪಾಲರಿಗೆ ಹೀಗೆ ಸರ್ಕಾರವನ್ನು

ಪುಟ 12 ಕ್ಕೆ

ಅಂಬೇಡ್ಕರ್ ಸ್ಮರಣೆ

ದಲಿತರಿಗೆ ಕಾನೂನಿನ ಅರಿವು ಅಗತ್ಯ - ಗೌರಮ್ಮ

ಕಾನೂನು ಹೆಚ್ಚಾಗಿ ಶ್ರೀಮಂತರ ಮತ್ತು ಪ್ರಭಾವಿಗಳ ಪರವಾಗಿರುತ್ತದೆ ಎಂದು ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಗೌರಮ್ಮ ವಿಷಾದ ವ್ಯಕ್ತಪಡಿಸಿದರು.

ಅಂಬೇಡ್ಕರ್ ಸ್ಮರಣೆ ಅಂಗವಾಗಿ ಡಿಸೆಂಬರ್ 26ರಂದು ಬೆಂಗಳೂರು ನಗರದ ಬಾಬಾ ಸಾಹೇಬ್ ಅಂಬೇಡ್ಕರ್ ಕಲ್ಯಾಣ ಕ್ಷೇಮಾಭಿವೃದ್ಧಿ


ವೇದಿಕೆಯಲ್ಲಿ ಚಂದ್ರು, ಮಹಂತೇಶ್, ಗೌರಮ್ಮ ಎಸ್‌ಐ ರಮೇಶ್, ರಾಜಶೇಖರಮೂರ್ತಿ

ಸಂಘವು ಸಂಪಂಗಿರಾಮನಗರದ ಕಲ್ಯಾಣಿ ಅಪಾರ್ಟ್‌ಮೆಂಟ್‌ನಲ್ಲಿಂದು ಏರ್ಪಡಿಸಿದ 'ನಾಗರೀಕರು ಮತ್ತು ಕಾನೂನು ಅರಿವು ಶಿಬಿರ' ದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಕಾನೂನಿನ ಅರವಿದ್ದ ಸುಶಿಕ್ಷಿತರು ಕೂಡಾ ಪೋಲೀಸ್ ಠಾಣೆ ಪ್ರವೇಶಿಸುವಂತಹ ಮುಕ್ತ ವಾತಾವರಣ ಹೆಚ್ಚಿನ ಠಾಣೆಗಳಲ್ಲಿಲ್ಲ. ಅದೇ ಶ್ರೀಮಂತರು ಅಪರಾಧಿಗಳಾಗಿದ್ದರೆ ಅವರ ಬಂಧನವಾಗುವ ಮುಂಚೆಯ ಅವರಿಗೆ ಜಾಮೀನು ಸಿಕ್ಕಿರುತ್ತದೆ. ತಮ್ಮ ಪ್ರಭಾವ ಮತ್ತು ಹಣ ಬಳಸಿ ಹೊರಬರುವ ಅಪರಾಧಿಗಳು ತಮ್ಮನ್ನು ಜೈಲಿಗೆ ಹೊರಬರುವ ಅಪರಾಧಿಗಳು ತಮ್ಮನ್ನು ಜೈಲಿಗೆ ಕಳುಹಿಸಿದವರ ಮೇಲೆ ಸೇಡು ತೀರಿಸಿಕೊಳ್ಳಲು ಯತ್ನಿಸುತ್ತಾರೆ. ಮೊದಲಿನಿಕ್ಕಿಂತಲೂ ಹೆಚ್ಚಾಗಿ ಅಪರಾಧಗಳಲ್ಲಿ ಅವರು ಧೈರ್ಯದಿಂದ ತೊಡಗಿಸಿಕೊಳ್ಳುತ್ತಾರೆ. ಹೀಗಾಗಿ ದೂರು ನೀಡಲು ಸಾಮಾನ್ಯ ಜನ ಹೆದರುತ್ತಾರೆ ಎಂದು ಅವರು ಹೇಳಿದರು.

ಒಂದು ವೇಳೆ ಅಪರಾಧ ಸಾಬೀತಾದರೆ ಕಾನೂನು ಜಾರಿಯಾಗುವುದು ವಿಳಂಬವಾಗುತ್ತದೆ. ಇಲ್ಲವೆ ಅವರ ಅಪರಾಧಕ್ಕೆ ಅಮಾಯಕರನ್ನು ಜೈಲಿಗೆ ತಳ್ಳಲಾಗುತ್ತಿದೆ. ಬಡವರು ದೂರು ನೀಡಲು ಠಾಣೆಗಳಿಗೆ ತೆರಳಿದರೆ ಅವರಿಂದ ದೂರು ಸ್ವೀಕರಿಸಲು ಕೂಡ ಹಲವಾರು ಬಾರಿ ವಿಳಂಬವಾಗುತ್ತದೆ ಎಂದು ಅವರು ಟೀಕಿಸಿದರು.

ಕೆಲ ಸ್ಲಂಗಳಲ್ಲಿ ವಾಸಿಸುವ ಬಡವರಿಗೆ ರೇಷನ್ ಕಾರ್ಡ್ ವಿತರಣೆಯಲ್ಲಿ ಅನ್ಯಾಯವಾಗುತ್ತಿದೆ. ದಿನನಿತ್ಯ ಬಳಕೆಯ ತರಕಾರಿಗಳ ಬೆಲೆ ಗಗನಕ್ಕೇರುತ್ತಿದ್ದು, ಸಾಮಾನ್ಯರು ಬದುಕುವುದು ದುಸ್ತರವಾಗಿದೆ. ಇಂಥವುಗಳ ವಿರುದ್ಧ ಸಂಘಟಿತರಾಗಿ ಹೋರಾಟ ರೂಪಿಸುವ ಅವಶ್ಯಕತೆ ಇದೆ ಎಂದು ಅವರು ಅಭಿಪ್ರಾಯಪಟ್ಟರು.


ಸಭೆಯನ್ನುದ್ದೇಶಿಸಿ ಗೌರಮ್ಮ

ಕ್ಷೇಭಾಭಿವೃದ್ಧಿ ಸಂಘದ ಕಾರ್ಯದರ್ಶಿಗಳಾದ ಜಿ.ಚಂದ್ರಶೇಖರ್‌ರವರು ಈ ಸಂದರ್ಭದಲ್ಲಿ ಮಾತನಾಡಿ, ಬಡ ಸ್ಲಂ ನಿವಾಸಿಗಳಿಗೆ ವಸತಿ ಒದಗಿಸುವ ಸಂಬಂಧದ 'ನರ್ಮ್'ನ ಐದು ಪೈಲಟ್ ಯೋಜನೆಗಳಲ್ಲಿ ಸಂಪಂಗಿರಾಮ ನಗರದ ಇದೊಂದೇ ಯೋಜನೆ ಜಾರಿಗೆ ಬಂದಿದೆ. ಜಾರಿಯಾಗಿದೆ ಮಾತ್ರವಲ್ಲ ಫಲಾನುಭವಿಗಳಿಗೆ ಮನೆಯ ಸ್ವಾಧೀನ ಪತ್ರವೂ ಸಿಕ್ಕಿದೆ. ಜನಗಳ ಒಗ್ಗಟ್ಟಿನಿಂದ ಇದು ಸಾಧ್ಯವಾಗಿದೆ ಎಂದರು.

ಅವರು ಮುಂದುವರಿದು ಮಾತನಾಡಿ ಬಡವರಿಗೆ ರಾಜಕೀಯ ಬೇಡ, ವಿದ್ಯಾರ್ಥಿಗಳಿಗೆ ರಾಜಕೀಯ ಬೇಡ... ಎಂಬಂತಹ ವಾದಗಳಿವೆ. ಬಡವರು, ವಿದ್ಯಾರ್ಥಿಗಳು ಎಲ್ಲರೂ ರಾಜಕೀಯ ತಿಳಿದುಕೊಂಡು ಜಾಗ್ರತರಾಗಿ ಅದರಲ್ಲಿ ಪಾಲ್ಗೊಳ್ಳಬೇಕು ಎಂದರು. ಜೀವನದಲ್ಲಿ ತಾತ್ಕಾಲಿಕ ಸುಖ ಸೌಲಭ್ಯಗಳ ದೃಷ್ಟಿಗಿಂತ ದೂರದೃಷ್ಟಿಯನ್ನಿಟ್ಟುಕೊಂಡು ಅದನ್ನು ಸಾಧಿಸುವುದು ಮುಖ್ಯ ಎಂಬ ಅಂಬೇಡ್ಕರ್ ಮಾತಿನ ಆಶಯವನ್ನು ಚಂದ್ರಶೇಖರ್‌ರವರು ನೆನಪಿಸಿದರು.

ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ ಮಾತನಾಡಿ, ಟಿ.ವಿ. ಮೊಬೈಲ್‌ಗಳ ಅನಗತ್ಯ ಬಳಕೆಯಲ್ಲಿ ಯುವಕರು ಕಾಲಹರಣ ಮಾಡುವುದನ್ನು ಬಿಟ್ಟು ಕಾನೂನಿನ ಜ್ಞಾನ ಹೊಂದಿ, ಕಾನೂನನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಸ್ಲಂಗಳಲ್ಲಿ ಅರ್ಧಕ್ಕೆ ವಿದ್ಯಾಭ್ಯಾಸ ಕೈಬಿಟ್ಟು ಯುವಕರು ಮಾಡಲು ಏನೂ ಕೆಲಸವಿಲ್ಲದೆ ಖಿನ್ನತೆಗೊಳಗಾಗಿ ಯುವತಿಯರನ್ನು ಚುಡಾಯಿಸುವುದು, ಧೂಮಪಾನ, ಮದ್ಯಪಾನದಂತಹ ದುಶ್ಚಟಗಳಿಗೆ ಒಳಗಾಗುವುದು, ಕಳ್ಳತನ, ದರೋಡೆಗಳನ್ನು ಮಾಡುವಂತಹ ದುಷ್ಕೃತ್ಯಗಳಲ್ಲಿ ತೊಡಗುತ್ತಾರೆ.


ಸಭೆಯಲ್ಲಿ ಕಲ್ಯಾಣಿ ಅಪಾರ್ಟ್‌ಮೆಂಟ್‌ನ ನಿವಾಸಿಗಳು

ಯುವಜನರನ್ನು ಸರಿಯಾದ ದಾರಿಗೆ ತಂದು ಕಾನೂನಿನ ಮಹತ್ವದ ಬಗ್ಗೆ ಅರಿವು ಮೂಡಿಸಿದರೆ ಅವರು ಕಾನೂನಿನ ಬಲವನ್ನು ಬಳಸಿಕೊಳ್ಳಲು ಸಹಾಯವಾಗುತ್ತದೆ. ಮಾನವ ಹಕ್ಕುಗಳು, ಮಹಿಳೆ, ಮಕ್ಕಳು, ದಲಿತರು, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯದ ವಿರುದ್ಧದ ಕಾನೂನುಗಳು ಮತ್ತು ದುರ್ಬಲರನ್ನು ಮುಖ್ಯವಾಹಿನಿಗೆ ತರಲು ಸಹಾಯಕವಾಗುವಂತಹ ಕಾನೂನುಗಳು ಬಗ್ಗೆ ಯುವಕರಿಗೆ ತಿಳುವಳಿಕೆ ನೀಡಿದರೆ, ಅವುಗಳನ್ನು ಸಮರ್ಥವಾಗಿ ಬಳಸಿಕೊಂಡು ತಮ್ಮ ಬಡಾವಣೆಗಳಿಗೆ ಅನುಕೂಲವಾಗುವಂತಹ ಚಟುವಟಿಕೆಗಳಲ್ಲಿ ಯುವಕರು ತೊಡಗಿಸಿಕೊಳ್ಳಬಹುದು ಎಂದು ಅವರು ಹೇಳಿದರು.

ಸಂಪಂಗಿರಾಮನಗರದ ಇನ್ಸ್‌ಪೆಕ್ಟರ್ ಎನ್.ರಮೇಶ್ ಮಾತನಾಡಿ, ಎಲ್ಲಾ ಬಡಾವಣೆಗಳಲ್ಲಿಯೂ ಯುವಕರ ಕಾನೂನು ಪಡೆಯೊಂದನ್ನು ರಚಿಸುವ ಅಗತ್ಯವಿದೆ. ಈ ಪಡೆಯ ಸದಸ್ಯರು ಆ ಬಡಾವಣೆಯ ಪೋಲೀಸ್ ಠಾಣೆ, ಸಂಘಟನೆಗಳು ಸೇರಿದಂತೆ ಎಲ್ಲ ಸಾರ್ವಜನಿಕರೊಂದಿಗೆ ಸಂಪರ್ಕವಿಟ್ಟು ಕೊಂಡು ಎಲ್ಲರ ಕಾನೂನು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಕೆಲಸಮಾಡಬೇಕು ಎಂದರು.

ಕಾರ್ಮಿಕ ಮುಖಂಡ ಹಾಗೂ ವಕೀಲ ಕೆ.ಮಹಾಂತೇಶ್ ಮಾತನಾಡಿ, ಶೋಷಿತ ಸಮುದಾಯದ ದೇವರು ಎನಿಸಿಕೊಂಡಿರುವ ಡಾ:ಅಂಬೇಡ್ಕರ್ ಬಹಳ ಕಷ್ಟಕರ ಬದುಕಿನಿಂದ ಮೇಲೆ ಬಂದವರು. ಅಂಬೇಡ್ಕರ್ ಅವರನ್ನು ಮಾದರಿಯನ್ನಾಗಿ ಇಟ್ಟುಕೊಂಡು ದಲಿತರು ಮೇಲೆ ಬರಬೇಕು. ತಮಗೆ ಸಿಗಬೇಕಾದ ಹಕ್ಕುಗಳನ್ನು ಹೋರಾಟ ಮಾಡಿಯಾದರೂ ಪಡೆಯಬೇಕು ಎಂದು ಅವರು ಆಶಿಸಿದರು.

ಇಷ್ಟೊಂದು ಅಂಕಾರ ಇರ್ಬಾರ್ದು

ಕ್ವಾಟ್ಲೆ
ಈ. ಬಸವರಾಜು

ಯಣ್ಣ ಈ ಯಡಿಯೂರಪ್ಪಂಗೆ ಇಷ್ಟೊಂದ್ ದುರಾಂಕಾರ ಬರ್ಬಾರ್ದಾಗಿತ್ತು.

ಯಾಕೆ? ಅಂತದೇನ್ ಮಾಡ್ದ?

ಪಂಚಾತಿ ಯಲೆಕ್ಷನ್ನಲಿ ನೀವು ನಮ್ ಪಾರ್ಟಿನ ಗೆಲ್ಲುಸ್ದೇ ಓದ್ರೆ ನಿಮ್ಮೂರ್ರಿಗ್ ಕಾಲಿಡದಿಲ್ಲ ಅಂತವ ಶಿವಮೊಗ್ಗದಲ್ಲಿ ಏಳವ್ನೆ!

ಅವ್ನ ಊರಿಗ್ ಬರ್ದೆ ಇದ್ರೆ ನಮ್ದೇನ್ ಓಯ್ತದೆ? ಅವ್ನೇನ್ ಅಂತಾ ಮಾತ್ಮ ಏನಲ್ಲ ಓಗಣ್ಣ. ಸದ್ಯ ಆದಿಲೋಗೋ ಮಾರಿ ನಮ್ ಮನಿಗೆ ಬರ್ದೆ ಇದ್ರೆ ಒಳ್ಳೆದೆ ಅಲ್ವೆ?

ಊರಿಗೆ ಕಾಲಿಡದಿಲ್ಲ ಅಂದ್ರೆ ಅಂಗಲ್ಲ ಕಣಣ್ಣ, ನಿಮ್ ಊರಿಗೆ ಏನೂ ಕೆಲ್ಸ ಮಾಡಿಕೊಡದಿಲ್ಲ ಅಂತವ.

ಅಲ್ಲ! ಸರ್ಕಾರಕ್ಕೆ ದುಡ್ ಕೊಡರು ನಾವು, ಸರ್ಕಾರದ್ ಸೌಲಭ್ಯ ಯಲ್ಲಾ ಊರಿಗೂ ಕೊಡ್ಲೇಬೇಕು. ಅಂತದ್ರಲ್ಲಿ ಕೊಡದಿಲ್ಲ ಅನ್ನಕೆ ದುಡ್ಡೇನ್ ಅವರಪ್ಪಂದೆ?

ಯಾರಪ್ಪಂದೂ ಅಲ್ಲ. ಜನಗಳ ದುಡ್ಡು ಅಂತ ಅವರಿಗೂ ಗೊತ್ತು. ಆದ್ರೂ ದುರಂಕಾರ ಅನ್ನದು ಅಂಗಾಡುಸ್ತದೆ. ಎಲ್ಲಿ ಕೆಲ್ಸ ಮಾಡಿಕೊಡದಿಲ್ವೊ ಅಂತವ ಎದಿರ್ಕಂಡು ಓಟಾಕ್ಲಿ ಅಂತ ಏಳ್ಯವ್ನೆ. ಧೈರ್ಯ ಇರೋರಾದ್ರೆ ನೀನ್ ಬರ್ದಿದ್ರೆ ಅಲ್ಲೇ ಇರಯ್ಯ ಅಂತ ಏಳ್ತರೆ.

ಕ್ವನೆ ಪಕ್ಷ ಓಟ್ ಕೇಳ್ವಾಗ್ಲಾದ್ರು ನಯ, ವಿನಯ ಇರ್‌ಬಾರ್ದೆ. ಇಂಗೇ ಆದ್ರೆ ಜನ ಮನಿಗೆ ಕಳುಸ್ತರೆ ಅಂತ ಗೊತ್ತಿಲ್ವೆ?

ಅದೂ ಗೊತ್ತು. ಆದ್ರೆ ಅವ್ನ ಅದ್ಯಲ್ಲಾನೂ ಯೋಚ್ನೆ ಮಾಡೊ ಬುದ್ದೀನೆ ಕಳ್ಕಂಡು ಈದ್ ನಾಯ್ ತರ ಯಲ್ಲಾರ್ ಮ್ಯಾಲೂ ಬೀಳ್ತಾ ಅವ್ನೆ. ಜನ ಒಂದ್ಸತಿ ಒದ್ದು ಏನಾರ ಮಾಡಿ ಮನಿಗ್ ಕಳುಸ್ಬೇಕು. ಆಗ ಸರಿಯಾಯ್ತದೆ.

ಆದ್ರೆ ಆ ಕರೆಂಟ್ ಮಂತ್ರಿ ಕಂಡ್ರೆ ಯದಿರ್ಕಂತನಂತೆ?

ಎಲ್ಲಿ ಕರೆಂಟ್ ವಡಿತದೋ, ಇಲ್ಲ ಕರೆಂಟ್ ಬಿಲ್ಲು ಜಾಸ್ತಿ ಬತ್ತದೋ ಅಂತ ಯದುರ್‌ಬೌದು! ಇವ್ನ ಕಾಲಿಡದಿಲ್ಲ ಅಂದಾಗ ಜನ ಸುಮ್ಕಿದ್ರೆ?

ಇಲ್ಲ, ಮದ್ಲು ಪೆಪ್ರಿನೋರ್ಯ್ಲಲ್ಲ ಬೋದ್ರು. ಆಮ್ಯಾಲೆ ವಿರೋದ್ ಪಕ್ಷದೋರು ಬೋದ್ರು. ಆಮ್ಯಾಲೆ ಕ್ಯಲವು ಹಳ್ಳೀಲಿ ಜನ ನೀನ್ ಬಂದು ಇನ್ನೇನಾದಳು ಓಗಯ್ಯ ಮುಚ್ಕಂಡು ಅಂದ್ರಂತೆ!

ಅದ್ಕೆ ಇವ್ನ ಏನೇಳಿದ್ನಂತೆ?

ಇನ್ನೇನೇಳ್ತನೆ, ಅವ್ರು ಏಳ್ದಂಗೆ ಮುಚ್ಕಂಡು ಬಂದ್ನಂತೆ.

ಆದ ಮೊದ್ಲೆ ಮಾಡಕೇನಾಗಿತ್ತಂತೆ?

ಅಷ್ಟೊಂದ್ ವಳ್ಳೆ ಬುದ್ದಿಯ ಅವ್ರ ಮೇಷ್ಟ್ರು ಏಳಿಕೊಟ್ಟಿತ್ತಿಲ್ವಂತೆ. ಅದ್ಕೆ ಜನ ಪಾಟ ಕಲುಸ್‌ಬೇಕು. ಅವ್ರ ಮೇಷ್ಟ್ರು ಯಾರಂತೆ?

ಅದೆ, ಸಂಘ ಪರಿವಾರಾಂತ ಅದಂತಲ್ಲ, ಅದು. ಅವ್ರು ಏಳಿಕೊಟ್ಟಿಲ್ಲ. ಅಂದ್ರೆ ಅವ್ರಿಗೂ ದುರಾಂಕಾರ ಇರ್ಬೇಕು!

ಅವ್ರು ಇಂಗೆಯಂತೆ. ಒಂದ್ಸತಿ ಅಧಿಕಾರಕ್ಕೆ ಬಂದ್ ಮ್ಯಾಲೆ ಜನಗಳ್ನ ಕಸ ಕಂಡಂಗೆ ಕಾಣ್ತರಂತೆ. ಅವ್ರಿಗೆ ಆಗ್ದೇ ಇರೋರ್ನ ಯಂಗ್ ಬೇಕು ಅಂಗೆ ನಡಿಸ್ಕತರಂತೆ.

ಇನ್ನ ಅಂತೋರತ್ರ ಪಾಟ ಏಳಿಸ್ಕಂಡ್‌ಮ್ಯಾಲೆ ಇವ್ನ ಅಂಗೇ ಆಡ್ತಾ ಇರ್ಬೇಕು. ಜನ ಸರ್ಯಾಗಿ ಪಾಠ ಕಲಿಸ್ಬೇಕು ಅಷ್ಟೆಯ. ಯಲೆಕ್ಷನ್ ಆಗಿ ರಿಸರ್ಟ್ ಬರ್ಲಿ ನೋಡನ ನಡಿ.

ಜನಶಕ್ತಿ
ಕನ್ನಡ ವಾರಪತ್ರಿಕೆ


ಮಾಧ್ಯಮ ಮಂಥನ

ವಿ. ಭಟ್ಟರು ವಿ.ಕ. ಯಾಕೆ ಬಿಟ್ಟರು ?



ಇದು ತಡವಾದರೂ ಗಮನಿಸಲೇಬೇಕಾದ ಸಂಗತಿ. ವಿಜಯಕರ್ನಾಟಕದ ಭಟ್ಟರು, ಜಾಗ ಬಿಟ್ಟರು. 'ಬಿಟ್ಟರು' ಎನ್ನುವುದಕ್ಕಿಂತ ಆಡಳಿತ ಮಂಡಳಿಯವರು ಅವರನ್ನು ಓಡಿಸಿದರು ಎಂಬುದೇ ನಿಜವಾದದ್ದು, ಅಲ್ಲಿಂದ ನಿರ್ಗಮಿಸಿದ ಭಟ್ಟರು ಅಮೇರಿಕಾಕ್ಕೆ ಹಾರಿಬಿಟ್ಟರು!

ನಿಜ, ಸಂಪಾದಕರಾಗಿದ್ದ ವಿಶ್ವೇಶ್ವರ ಭಟ್ಟರು ಬಹಳ ಕ್ರಿಯಾಶೀಲ ಪತ್ರಕರ್ತ ಎಂಬುದರಲ್ಲಿ ಅನುಮಾನವಿಲ್ಲ. ಪತ್ರಿಕಾರಂಗದಲ್ಲಿ ವಿನೂತನ ಪ್ರಯೋಗಗಳನ್ನು ನಡೆಸಿದವರು ಎಂಬುದೂ ಸುಳ್ಳಲ್ಲ. ಹೀಗೆ ಅವರ ವಿದ್ವತ್‌ಪ್ರಯೋಗಗಳನ್ನು ಪೂರ್ಣವಾಗಿ ಆರ್.ಎಸ್.ಎಸ್. ಗೆ ಮುಡುಪಾಗಿಟ್ಟರು. ಬಿಜೆಪಿಯ ರಾಜಕೀಯ ಬೆಳವಣಿಗೆಗೆ, ಅದು ರೂಪಿಸಿದ ತಂತ್ರಗಳಿಗೆ ದನಿಯಾಗಿ, ಹೊಂದಿಸಿದ ಅಭಿವ್ಯಕ್ತಿಯಾಗಿ, ಅವುಗಳನ್ನು ಸಾಕಾರಗೊಳಿಸುವಲ್ಲಿ ತಮ್ಮ ನಿಷ್ಠತೆಯನ್ನೇಲ್ಲಾ ಧಾರೆ ಎರೆದರು. ಆರಂಭದಲ್ಲಿ ಅದು ಹೊರಗೆ ಅಷ್ಟು ಗೊತ್ತಾಗುತ್ತಿರಲಿಲ್ಲ. ಆದರೆ ಬರಬರುತ್ತಾ ವಾಕರಿಕೆ ತರುವಷ್ಟು ಹೆಚ್ಚಾಯಿತು. ಹಂತ ಹಂತವಾಗಿ ಬೃಹತ್ತಾಗಿ ಬೆಳೆದ ವಿಜಯ ಕರ್ನಾಟಕವನ್ನು ಎಲ್ಲಾ ರೀತಿಯಿಂದಲೂ ಬಳಸಿಕೊಂಡ ಭಟ್ಟರು ಹಾಗೂ ಸಂಘಪರಿವಾರ, ಕಾಲಂತರದಲ್ಲಿ ಪಕ್ಕಲಾಭ ನಷ್ಟಗಳನ್ನೇ ನೋಡುತ್ತಿದ್ದ ವ್ಯಾಪಾರಿ ವಿಆರ್‌ಎಲ್ ವಿಜಯಸಂಕೇಶ್ವರ್‌ರವರು ಮುಂದೊಂದು ದಿನ ಜನಪ್ರಿಯ ಈ ಪತ್ರಿಕೆಯನ್ನು 'ಟೈಮ್ಸ್ ಆಫ್ ಇಂಡಿಯಾ' ಗ್ರೂಪ್‌ಗೆ ಮಾರಿದ ನಂತರವೂ ಅದರ ಕೋಮುವಾದದ ನೀತಿಯ ಅವತಾರ ಬದಲಾಗಲಿಲ್ಲ. ಇಂತಹ ಬದಲಾವಣೆಯನ್ನು ರಾಜ್ಯದ ಜನ ನಿರೀಕ್ಷಿಸಿದ್ದು ಹುಸಿಯಾಯಿತು. 'ಟೈಮ್ಸ್' ಸಹ ಪಕ್ಕಾ ವ್ಯಾಪಾರಿಯೇ. ಲಾಭ ತರುವುದಾದರೆ ಫ್ಯಾಶಿಸ್ಟ್ ಆದರೇನು. ಕ್ಯಾಸಿಸ್ಟ್ ಆದರೇನು? ಸೆಕ್ಯುಲರ್ ಎಂಬುದು ಸಹ ಅದಕ್ಕೆ ವ್ಯಾಪಾರದ ಸರಕೇ. ಇಂತಹ ಮಾಲೀಕತ್ವ ಬದಲಾವಣೆಯ ಸಂದರ್ಭ ಹಾಗೂ ನಂತರದಲ್ಲಿಯೂ ಸಂಪಾದಕನ ಹುದ್ದೆಯಲ್ಲೇ . ಉಳಿಸಿಕೊಳ್ಳಲು ಭಟ್ಟರು ನಡೆಸಿದ ತಂತ್ರಗಾರಿಕೆ ಗಮನಿಸಬೇಕಾದದ್ದೇ. ಈಗಾಗಲೇ ಗಳಿಸಿದ್ದ ಸಂಪರ್ಕ, ಸಂಘ ಪರಿವಾರದ ಶಕ್ತಿ, ಪ್ರಭಾವ... ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಹಿಡಿದು ಅತಿಥಿ ಸಂಪಾದಕ ಎಂದೆಲ್ಲಾ ಇತರೆಲ್ಲರನ್ನು ಬಳಸಿ ಸ್ಥಾನ ಉಳಿದುಕೊಳ್ಳುವಲ್ಲಿ ಯಶಸ್ವಿಯೂ ಆದರು. ಹಾಗೆಯೇ ಚೆಡ್ಡಿಪಡೆಯೇ ಪತ್ರಿಕೆ ತುಂಬೆಲ್ಲಾ ಆವರಿಸುವಂತೆ ನೋಡಿಕೋಂಡರು ಆದರೆ...



ಬಿಟ್ಟ ಭಟ್ಟರು

ಪತ್ರಿಕೆ ಚೆಡ್ಡಿ ಪಡೆಯ ಕರಪತ್ರವಾಗಿ, ಮಾಜಿ ಸಚಿವ ಅನಂತರಕುಮಾರ್‌ರ ರಾಜಕೀಯ ತಂತ್ರ ಈಡೇರಿಸುವ ವಾಹಕವಾಗಿ ಕೆಲಸ ಮಾಡುತ್ತಾ ಹೋದಂತೆ ಚಿತೋಹಾರಿಯಾಗಿ ಉಳಿದರು. ಪ್ರಸಾರ ಕುಸಿಯಿತು. ಕುಸಿದದ್ದು ಪ್ರಸಾರ ಮಾತ್ರವೇ, ಸ್ವತಃ ವಿಶ್ವೇಶ್ವರ ಭಟ್ಟರ ಸ್ಥಾನ, ಮಾನ, ವಿ.ಕ.ಪತ್ರಿಕೆ, ಮಾಧ್ಯಮ ಲೋಕದಲ್ಲಿ ಶಕ್ತಿ ಅದರ ಪ್ರಭಾವಗಳನ್ನು ಸ್ವಯಂ ಸೇವೆಗೆ ಬಳಸಿಕೊಂಡು, ಕೋಟ್ಯಾಂತರ ರೂಪಾಯಿಗಳ ಆಸ್ತಿ ಗಂಟು ಕಟ್ಟಿಕೊಂಡ ಕಥೆಯೀಗ ಜಗಜ್ಜಾಹೀರಾಗಿದೆ. ವಿ.ಭಟ್ಟರ ಮನೆಯೊಂದೇ ನಾಲ್ಕು ಕೋಟಿಯಂತೆ. ಇವರ ಪ್ರಕರಣಗಳು ಲೋಕಾಯುಕ್ತರ ಟೇಬಲ್ ಹತ್ತಿ ಕುಳಿತಿದೆ. ಇವರೊಂದಿಗೆ ವಿವಿಧ ಪತ್ರಿಕೆ ಹಾಗೂ ಟಿ.ವಿ. ಮಾಧ್ಯಮಗಳಲ್ಲಿ ಮೇಯ್ದ ಒಟ್ಟು 20 ಸುದ್ದಿಕರ್ತರ ಬಗ್ಗೆ ದೂರಗಳೇ ನ್ಯಾ. ಹೆಗಡೆಯವರ ಮುಂದಿವೆ.

ಇಂತಹ ಎಲ್ಲಾ ಹಿನ್ನೆಲೆಯಲ್ಲಿ ವಿಷಾದದ, ಪಾಪನಿವೇದನೆಯ ನೋಟ್ ಬರೆದಿರುವ ಭಟ್ಟರ ಜೀವದ ಗೆಳೆಯ ರವಿಬೆಳಗೆರೆ ಜಗತ್ತಿನ ಸಂಗತಿಗಳನ್ನೆಲ್ಲಾ ಓಲಾಡಿಸಿದ್ದರೂ ಆಸ್ತಿ -ಅಂತಸ್ತಿನ ಅರಮನೆ, ಲಾಭಿ ಇತ್ಯಾದಿಗಳ ಬಗ್ಗೆ ಬರೆಯದೇ ಹೋಗಿರುವುದು ಆಶ್ಚರ್ಯವೂ ಅಲ್ಲ! ಯಾಕೆಂದರೆ ಅವರಿಬ್ಬರ ಆತ್ಮಗಳೂ ಸಂಸದ ಅನಂತಕುಮಾರರ ಮೂರನೇ ಆತ್ಮದೊಂದಿಗೆ ಬೆಸೆದುಕೊಂಡು ಒಂದೇ ಟೇಬಲ್ಲಿನ ಗುಟುಕುಗಳಾಗಿಯೂ ಬಿಕ್ಕಿದ ಪ್ರಸಂಗಗಳಿವೆ. ಹೀಗಿದ್ದಾಗಲೇ ಭಟ್ಟರಿಗೂ ಸಂಘಕ್ಕೂ ಸಂಬಂಧ ಕಲ್ಪಿಸುವಂತಾಯಿತಲ್ಲಾ ಎಂದು ಬೆಳಗೆರೆ ತ್ಯಾಪೆ ಹಚ್ಚಿದ್ದು ನಾಚಿಕೆಗೇಡು.

ಆದರೆ ಗೆಳೆಯ ಭಟ್ಟನ ನಿರ್ಗಮನವನ್ನು ಪ್ರಶ್ನಾರ್ಥಕವಾಗಿಯೇ, ಸಾಂತ್ವನದ ರೂಪದಲ್ಲಿಯೂ ಬರೆದ ಬೆಳಗೆರೆ ವಿ.ಕರ್ನಾಟಕದಲ್ಲಿನ ಇನ್ನಿತರೆ ಭಯಾನಕ ಕ್ರೌರ್ಯ, ದುಷ್ಟ ಮುಖಗಳನ್ನು-ಜರೆದಿರುವುದು ವಾರಧ ಅಚ್ಚರಿಯೇ! ಸದಾ ಹಿಂದುತ್ವದ ಉಗ್ರ ಪ್ರತಿಪಾದಕನಾಗಿ ಕೋಮುದ್ವೇಷದ 'ಹಿಟ್ಲರ್'ನ ತುಂಡಾಗಿರುವ ಪ್ರತಾಪ ಸಿಂಹನೆಂಬ ಕಾಲಂಯಿಷ್ಟನ ಭ್ರಷ್ಟತೆ ಭಾನಗಡಿಗಳನ್ನು ಹೊರಗೆ ಹಾಕಿದ್ದಾರೆ. ಹಾಗೆಯೇ ಇನ್ನೊಬ್ಬ 'ಚೆಡ್ಡಿ' ವೀರ, ಮಾತಿನ ಚತುರ 'ಚಕ್ರವರ್ತಿ ಸೂಲಿಬೆಲೆ' ಎಂಬ ಹರಿಕಥೆ ದಾಸನ ಬಗ್ಗೆಯೂ. ಪ್ರತಾಪಸಿಂಹ ಗಂಟು ಮಾಡಿದ್ದು, ಹೆಂಡತಿಯನ್ನು ಸಹೋದರಿ ಎಂದು ತೋರಿಸಿ ಕೋಟ್ಯಾಂತರ ಬೆಲೆ ಬಾಳುವ ಬಿ.ಡಿ.ಎ. ಸೈಟ್ ಹೊಡೆದದ್ದು, ಶೋಭಾ ಕರಾಂದ್ಲಾಜೆಯ ಕೊಡುಗೆ ಇತ್ಯಾದಿಗಳನ್ನು ಹಿಂದುತ್ವದ ಆದರ್ಶ, ಭ್ರಷ್ಟತೆಯನ್ನು ಬೆಳಗೆರೆಗಿಂತ ಸೊಗಸಾಗಿ ಇನ್ಯಾರು ಬರೆಯಲು ಸಾಧ್ಯ.



'ಪ್ರತಾಪ'ಗಳ ಸಿಂಹ!

ನಾವು ನೀರಾ ರಾಡಿಯಾ, ನಂತರ ಕಾರ್ಪೊರೇಟ್ ಕಂಪನಿಗಳ ತಲೆ ಹಿಡಿವ ಮಾಧ್ಯಮ ಮಾಫಿಯಾಗಳ ತೀರದ ದೊಡ್ಡ ತಿಮಿಂಗಲಗಳ ಬಗ್ಗೆ ಓದುತ್ತಿದ್ದೇವೆ. ಕರ್ನಾಟಕದಲ್ಲಿಯೂ ಇಂತಹ ಚಮಚಾ ಸಂತತಿ ಇಲ್ಲವೆಂದಾಗಲೀ, ಇರಲಾರದು ಎಂದಾಗಲಿ ಭಾವಿಸಬೇಕಿಲ್ಲ ಎಂಬ ಸತ್ಯ ಭಟ್ಟರ ಕಥೆಯಿಂದ ರಟ್ಟಾಗಿದೆ.

ಬಾಲಂಗೋಚಿ : ಭಟ್ಟರು ಬಿಟ್ಟ ಮೇಲೆ ವಿಜಯಕರ್ನಾಟಕ ಧೋರಣೆಯಲ್ಲಿ ಕೇಶವಕೃಪಾದ ಘಂಟೆ ಮೊಳಗಿಸುವುದರಿಂದ ಹೊರಬಂದೀತೆ? ಬದಲಾಯಿತೆ ಎಂಬುದು ಹಲವರ ಪೆಂಡಿಂಗ್ ಪ್ರಶ್ನೆ.

ಕೊನೆಯ ಸುದ್ದಿ-ಗುದ್ದು: ಹಾಗೆಯೇ ಅಮೇರಿಕಾಕ್ಕೆ ಅದ್ಯಾವುದೋ ಸ್ಕಾಲರ್‌ಶಿಪ್ ಮೇಲೆ ಹೋಗಿರುವ ಭಟ್ಟರು ವಾಪಸ್ಸು ಬರುತ್ತಲೇ ಒಂದು ಹೊಸ ದಿನಪತ್ರಿಕೆ, ಇಲ್ಲ ಚಾನಲ್ ಇತ್ಯಾದಿಗಳನ್ನು ಆರಂಭಿಸಲಿದ್ದಾರೆ ಅಥವಾ ಸೇರಲಿದ್ದಾರೆ ಎಂಬ ಸುದ್ದಿ ಇದೆ. ಇದು ಬರೀ ಸುದ್ದಿಯೇ ಇರಬಹುದೇ?

ಜಾ

ತಳಗವಾದಿ ಗ್ರಾಮ ಪಂಚಾಯ್ತಿ ಅಧ್ಯಕ್ಷ ಕಾಂ: ಆನಂದ್ ಮೇಲೆ ಹಲ್ಲೆ ಸಿಪಿಐ(ಎಂ) ತೀವ್ರ ಖಂಡನೆ

ಡಿಸೆಂಬರ್ 31 ರಂದು ಪಂಚಾಯ್ತಿ ಚುನಾವಣೆಗಳ ಸಂದರ್ಭದಲ್ಲಿ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ತಳಗವಾದಿ ಗ್ರಾಮ ಪಂಚಾಯ್ತಿಯ ಚುನಾಯಿತ ಅಧ್ಯಕ್ಷರೂ ಸಿಪಿಐ(ಎಂ)ನ ಮುಖಂಡರು ಆದ ಕಾಂ: ಆನಂದ್ ಅವರ ಮೇಲೆ ಅದೇ ಪಂಚಾಯ್ತಿಯ ಸದಸ್ಯರುದ ಜೆಡಿ(ಎಸ್)ನ ಚಲುವೇಗೌಡ, ಕುಮಾರ್, ಮಹೇಶ್ ಸೇರಿಕೊಂಡು ಹಲ್ಲೆ ನಡೆಸಿದ್ದಾರೆ.

ಸಿಪಿಐ(ಎಂ)ಪಕ್ಷ ಸ್ಪರ್ಧೆಯ ಬಗೆಗೆ ಕಡು ವಿರೋಧ. ಹಗೇತನದಲ್ಲಿ ಮಾತನಾಡಿದ ಅವರುಗಳು ಆನಂದ ಅವರನ್ನು ನೆಲಕ್ಕೆ ಬೀಳಿಸಿ ತುಳಿದಿದ್ದಾರೆ. ಪ್ರಜ್ಞಾಹೀನರಾಗಿದ್ದ ಆನಂದ್ ಇದೀಗ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಈ ದಾಳಿಯನ್ನು ಸಿಪಿಐ(ಎಂ0 ಮಂಡ್ಯ ಜಿಲ್ಲಾ ಸಂಘಟನಾ ಸಮಿತಿಯು ತೀವ್ರವಾಗಿ ಖಂಡಿಸಿದೆ.

ಟ್ಯಾಗೋರ್ ಚಲನಚಿತ್ರೋತ್ಸವ ಮತ್ತು ಇತರೆ ಚಟುವಟಿಕೆಗಳು....



ವಾ.ಉ.

ಸಮುದಾಯದ ಕುಂದಾಪುರ ಮತ್ತು ಮಂಗಳೂರು ಘಟಕಗಳು ಡಿಸೆಂಬರ್ ತಿಂಗಳಲ್ಲಿ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರ ಮಧ್ಯೆಯೇ ಎಲ್ಐಸಿ ಪ್ರತಿನಿಧಿಗಳ ಧರಣಿ, ದಲಿತ ಹಕ್ಕುಗಳ ಹೋರಾಟ ಸಮಿತಿ ಕಾರ್ಯಕರ್ತರಿಗೆ ಕಾರ್ಯಾಗಾರಗಳು ಮಂಗಳೂರಿನಲ್ಲಿ ನಡೆದವು.

ಎಲ್ಐಸಿ ಪ್ರತಿನಿಧಿಗಳ ಬೃಹತ್ ಧರಣಿ :

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ



ಭಾರತೀಯ ಜೀವವಿಮಾ ನಿಗಮದ ಉಡುಪಿ ಮತ್ತು ಮಂಗಳೂರು ವಿಭಾಗದ ಸುಮಾರು 400 ಏಜೆಂಟರು ಡಿಸೆಂಬರ್ 22 ರಂದು ಮಂಗಳೂರಿನ ಪ್ರಧಾನ ಅಂಚೆಕಚೇರಿಯೆದುರು ಪ್ರತಿಭಟನಾ ಧರಣಿ ನಡೆಸಿದರು. ಅದಕ್ಕೂ ಮೊದಲು ನಗರದ ಆರ್‌ಟಿಒ ಕಚೇರಿಯಿಂದ ತೊಡಗಿ ಜಿಲ್ಲಾಧಿಕಾರಿ ಕಚೇರಿಯಿಂದಲಾಗಿ ಪ್ರಧಾನ ಅಂಚೆಕಚೇರಿವರೆಗೆ ನಡೆದು ರ್ಯಾಲಿಯಲ್ಲಿ ಏಜೆಂಟರೊಂದಿಗೆ ಕಾರ್ಮಿಕ ಸಂಘಗಳ ಹಲವು ಮುಖಂಡರೂ ಪಾಲ್ಗೊಂಡಿದ್ದರು.


ಧರಣಿಯನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್, ಭಾರತೀಯ ಜೀವ ವಿಮಾ ನಿಗಮವು ಇವತ್ತು ಆರ್ಥಿಕವಾಗಿ ಬಲಿಷ್ಟವಾದ ಒಂದು ಸಾರ್ವಜನಿಕ ಸಂಸ್ಥೆಯಾಗಿ ಮೂಡಿಬರುವುದಕ್ಕೆ ಲಕ್ಷಕ್ಕೂ ಮೀರಿದ ಸಂಖ್ಯೆಯಲ್ಲಿ ಕಾರ್ಯ ನಿರ್ವಹಿಸಿರುತ್ತಿರುವ ಏಜೆಂಟರುಗಳೇ ಕಾರಣ. ಬೇರೆಲ್ಲಾ ವಿಮಾ ಸಂಸ್ಥೆಗಳಿಗಿಂತಲೂ ಎಲ್ಐಸಿಯೇ ಜನರ ನಂಬಿಗಸ್ಥ ವಿಮಾ ಸಂಸ್ಥೆಯಾಗಿದ್ದರೆ, ಇದರಲ್ಲಿ ವಿಶ್ವಾಸಾರ್ಹರಾದ ಏಜೆಂಟ್ಗರ ಪಾತ್ರವು ಮಹತ್ವದ್ದು. ಭಾರತ ಸರ್ಕಾರದ ಜಾಗತೀಕರಣದ ನೀತಿಯಿಂದಾಗಿ ಎಲ್ಐಸಿಯನ್ನು ದುರ್ಬಲಗೊಳಿಸಲು ಸರ್ಕಾರವೇ ಕೆಲವು ಕಾರ್ಯ ಯೋಜನೆಗಳು ಸಿದ್ಧಪಡಿಸುತ್ತಿದೆ. ಏಜೆಂಟರ ಸೇವೆಯನ್ನು ಹಂತಹಂತವಾಗಿ ಕಿತ್ತುಹಾಕಲು ಇಲ್ಲದ ಸುತ್ತೋಲೆ ಹೊರಡಿಸುತ್ತಿದೆ ಎಂದು ಟೀಕಿಸಿದರು.

ಎಲ್ಐಸಿ ಏಜೆಂಟರ ರಾಷ್ಟ್ರೀಯ ಸಂಘದ ವಲಯ ಪ್ರಧಾನ ಕಾರ್ಯದರ್ಶಿ ಎಲ್.ಮಂಜುನಾಥ್, ರಾಜ್ಯ ಕಾರ್ಯಾಧ್ಯಕ್ಷರಾದ ಎಫ್ಎಸ್ ಸಿಂಧು ಉಡುಪಿ ವಿಭಾಗ ಅಖಿಲ ಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಗುರುದತ್ತ ಧರಣಿನಿರತನ್ನುದ್ದೇಶಿಸಿ ಮಾತನಾಡಿದರು. ಎಲ್ಐಸಿ ಏಜೆಂಟರ ಸಂಘದ ಉಡುಪಿ ವಿಭಾಗೀಯ ಅಧ್ಯಕ್ಷ ರಾಜನ್ ಎಮ್. ಡಿ ಕೊಸ್ತಾ ಪ್ರಾಸ್ತಾವಿಕ ಮಾತನಾಡಿದರು. ಲಾಜರಿಸು ಡಿಕೋಸ್ತಾ ಸ್ವಾಗತಿಸಿ ಮೋಲಿ ಪಿಂಟೋ ವಂದಿಸಿದರು. ಏಜೆಂಟರ ಸಂಘದ ಮುಖಂಡರಾದ ಷರೀಫ್ ಪುತ್ತೂರು ಸುಮನ್‌ರಾವ್, ಗುರುಚರಣರಾವ್, ದೇವದಾಸ್ ಅಲ್ಲದೆ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಕಾರ್ಮಿಕ ಮುಖಂಡ ಸುನಿಲ್ ಕುಮಾರ್ ಬಜಾಲ್, ಡಿವೈಎಫ್ಐ ಮುಖಂಡರಾದ ಬಿ.ಕೆ. ಇಮ್ತಿಯಾಜ್, ಪ್ರಮಿಳಾ ಮೊದಲಾದವರು ರ್ಯಾಲಿಯಲ್ಲಿ ಭಾಗವಹಿಸಿದ್ದರು.

★★★

ಶಿಕ್ಷಣದಲ್ಲಿ ರಂಗಕಲೆ ಕುಂದಾಪುರ ಸಮುದಾಯದ ಕಾರ್ಯಾಗಾರ

ಬಹುತೇಕ ಜನರ ಬದುಕು ಜೀವಂತಿಕೆ ಇಲ್ಲದೆ ಯಾಂತ್ರಿಕವಾಗಿ ಸಾಗುತ್ತಿದೆ. ಸಮಾಜದೊಂದಿಗೆ ಜೀವಂತಿಕೆ ಬೆಸೆಯುವ ಕಾರ್ಯ ಶಿಕ್ಷಣದಿಂದ ಆಗಬೇಕು. ನಾವು ಇತರರೊಂದಿಗೆ ಸಂವಹನ ಮಾಡುವ, ವಿಚಾರ ಮನದಟ್ಟು ಮಾಡುವ ಮತ್ತು ಆಕರ್ಷಿಸುವ ಸಾಮರ್ಥ್ಯವನ್ನು ರಂಗಕಲೆ ಮೂಲಕ ಬೆಳೆಸಿಕೊಳ್ಳಬಹುದು ಎಂದು ಕುಂದಾಪುರ ಭಂಡಾರ್ಕರ್ಸ್ ಕಾಲೇಜಿನ ಪ್ರಾಂಶುಪಾಲ ಪ್ರೊ. ದೋಮ ಚಂದ್ರಶೇಖರ್ ಹೇಳಿದರು. ಅವರು ಕುಂದಾಪುರದ "ಸಮುದಾಯ 30"



ಕಾರ್ಯಕ್ರಮದಡಿಯಲ್ಲಿ ಉಡುಪಿ ಜಿಲ್ಲಾ ಶಿಕ್ಷಕರ ತರಬೇತಿ ಕೇಂದ್ರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಡಿಸೆಂಬರ್ 11, 12, 13 ರಂದು ನಡೆದ 'ಶಿಕ್ಷಣದಲ್ಲಿ ರಂಗಕಲೆ' ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ಶಂಕರ ಖಾವಿಸ್ತಾ, ಗೋಪಾಲಶೆಟ್ಟಿ, ಚಂದ್ರಶೇಖರ್ ಅಲ್ಲದೆ ಸಮುದಾಯ ಸಂಘಟನೆಯ ವಲಯ ಸಂಚಾಲಕರಾದ ವಾಸುದೇವ ಉಚ್ಚಿಲ್, ಕುಂದಾಪುರ ಸಮುದಾಯದ ಅಧ್ಯಕ್ಷರಾದ ಕೆ.ಪ್ರಭಾಕರನ್ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಉಡುಪಿ ಜಿಲ್ಲೆಯ ಮೂರು ತಾಲ್ಲೂಕುಗಳಿಂದ 42 ಮಂದಿ ಪ್ರಾಥಮಿಕ ಶಾಲಾ ಶಿಕ್ಷಕರು ಭಾಗವಹಿಸಿದ್ದು, ರಾಜ್ಯದ ಪ್ರಮುಖ ರಂಗ ನಿರ್ದೇಶಕರಲ್ಲೊಬ್ಬರಾದ ಡಾ.ಶ್ರೀಪಾದಭಟ್ ಕಾರ್ಯಾಗಾರದ ನಿರ್ದೇಶಕರಾಗಿದ್ದರು. ಕುಂದಾಪುರ ತಾಲ್ಲೂಕಿನವರೂ ನೀನಾಸಮ್ ಪದವೀಧರರೂ ಶಿಕ್ಷಕರೂ ಆಗಿರುವ ಸದಾನಂದ ಬೈಂದೂರು, ಎಚ್.ಸಂತೋಷ ಗುಡ್ಡೆಯಂಗಡಿ, ವಾಸುದೇವ ಗಂಗೇರಾ ಸತ್ಯನಾ ಕೊಡೇರಿ ಹಾಗೂ ಕುಂದಾಪುರ ಸಮುದಾಯದ ಕಾರ್ಯದರ್ಶಿ ಜಿ.ವಿ.ಕಾರಂತ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದರು. 3 ದಿನಗಳ ಈ ಶಿಬಿರವು ಕುಂದಾಪುರದ ಕಾರ್ಮಿಕ ಭವನದಲ್ಲಿ ನಡೆಯಿತು.



★★★

ಮಂಗಳೂರಿನಲ್ಲಿ ಟಾಗೋರ್ ಚಲನಚಿತ್ರೋತ್ಸವ :

ರವೀಂದ್ರನಾಥ ಟಾಗೋರರ 150ನೇ ವರ್ಷಾಚರಣೆಯನ್ನು ರಾಜ್ಯದ ಸಮುದಾಯ ಘಟಕಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಮಂಗಳೂರು ಸಮುದಾಯವು ಸ್ಥಳೀಯ ಸಹಮತ್ ಫಿಲ್ಮಾ ಸೊಸೈಟಿ ಸಹಭಾಗಿತ್ವದಲ್ಲಿ ಡಿಸೆಂಬರ್ 25 ಮತ್ತು 26 ರಂದು ಟಾಗೋರ್ ಚಲನಚಿತ್ರೋತ್ಸವ 2010 ನ್ನು ಮಂಗಳೂರಿನ ಶ್ರೀನಿವಾಸ್ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಏರ್ಪಡಿಸಿತ್ತು.

ಚಲನ ಚಿತ್ರೋತ್ಸವವನ್ನು ಉದ್ಘಾಟಿಸಿದ ಖ್ಯಾತ ಸಾಹಿತಿ ಸಾರಾ ಅಬೂಬಕರ್ ಟಾಗೋರ್ ತಮ್ಮ ಕೃತಿಗಳಲ್ಲಿ ಮಾನವೀಯತೆ ಮತ್ತು ವೈಚಾರಿಕೆಯನ್ನು ಪ್ರತಿಪಾದಿಸಿದ್ದಾರೆ. ಇದೀಗ ಅವರ 150ನೇ ಜನ್ಮ ದಿನಾಚರಣೆ ಸಂದರ್ಭದಲ್ಲೂ ಮೂಢನಂಬಿಕೆ, ಮತಾಂಧತೆ, ಮೋಸ, ವಂಚನೆ ಹಾಗೆಯೇ ಇದೆ. ಟಾಗೋರರ ಆಶಯ ಆಶಯವಾಗಿಯೇ ಉಳಿದಿದೆ. ಟಾಗೋರರ ಕಥೆಗಳು ಮಾನವೀಯ ಸೂಕ್ಷ್ಮ ಸಂಬಂಧ,

ಪುಟ 14 ಕ್ಕೆ

'ಸಂವಿಧಾನ ರಚನೆಯಾಗಿ 50 ವರ್ಷ ಕಳೆದರೂ ಸಿಗದ ಸಮಾನತೆ'

"ಭಾರತದ ಸಂವಿಧಾನ ರಚನೆಯಾಗಿ 50 ವರ್ಷಗಳೂ ಕಳೆದರೂ ಇನ್ನೂ ಸರಿಯಾಗಿ ಆರ್ಥಿಕ, ಸಾಮಾಜಿಕ ಸಮಾನತೆ ದೊರೆತಿಲ್ಲ ಅಂತಹ / ಶೋಚನೀಯ ಪರಿಸ್ಥಿತಿಯಲ್ಲಿ ನಾವಿಂದು ಜೀವಿಸುತ್ತಾ ಇದ್ದೇವೆ" ಎಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಸುಕುಮಾರ್ ಹೇಳಿದರು.

ದಲಿತ ಹಕ್ಕುಗಳ ಹೋರಾಟ ಸಮಿತಿ ಮಂಗಳೂರು, ಸಿಪಿಐ(ಎಂ) ಮಂಗಳೂರು ಇದರ ಆಶ್ರಯದಲ್ಲಿ ಕಾಮ್ರೇಡ್ ರಮೇಶ್‌ಕುಮಾರ್ ಅವರ ಸ್ಮರಣಾರ್ಥ ರವಿವಾರ ಮಂಗಳೂರಿನ ಎನ್‌ಜಿಒ ಹಾಲ್‌ನಲ್ಲಿ ನಡೆದ ನಗರ ಮಟ್ಟದ ಸಂಘಟನಾ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. "ಜಾತಿಯಲ್ಲಿ ಯಾವುದೇ ಮೇಲುಕೀಳು ಎಂಬುವುದು ಇಲ್ಲ, ನಾವು ಇವುಗಳನ್ನು ಸಮರ್ಥಿಸಿ ಸಮಾಜದ ಮುಂದಿಡಬೇಕಾಗುತ್ತದೆ" ಎಂದು ಸಂಘಟನೆಯ ಕಾರ್ಯಕರ್ತರಿಗೆ ಕರೆನೀಡಿದರು.

"ಜಾಗತೀಕರಣದಿಂದಾಗಿ ಯಾವುದೇ ಮೀಸಲಾತಿಯು ಆಧುನಿಕ ಯುಗದಲ್ಲಿ ಸಿಗುತ್ತಿಲ್ಲ. ಸರಕಾರದಲ್ಲಿ ಮೀಸಲಾತಿಗಾಗಿರಿಸಿದ ಹಣ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಇಂದಿನ ಸಮಾಜದಲ್ಲಿ ಅಸ್ಪೃಶ್ಯ ಎನ್ನುವ ಪರಿಕಲ್ಪನೆಯೇ ಕಿತ್ತೊಗೆಯಬೇಕು" ಎಂದವರು ಹೇಳಿದರು.

ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್ ಮಾತನಾಡಿ, "ಈಗಾಗಲೇ ಸಮಾಜದ ಅಭಿವೃದ್ಧಿಗಾಗಿ ಸಂಘಟನೆಯ ಕಾರ್ಯಕರ್ತರೆಲ್ಲ ಸಕ್ರಿಯವಾಗಿ ತೊಡಗಿಸಿ ಕೊಂಡಿದ್ದು, ಮುಂಬರುವ ವರ್ಷದಲ್ಲಿಯೂ ಕೂಡಾ ಬಲಿಷ್ಟಗೊಂಡು ಸಮಾಜದ ಶ್ರೇಯಸ್ಸಿಗಾಗಿ ಹೋರಾಡಬೇಕು" ಎಂದು ಕರೆ ನೀಡಿದರು.



ಸುನೀಲ್ ಕುಮಾರ್ ಬಜಾಲ್ ಮಾತನಾಡುತ್ತಿರುವುದು

ದಲಿತ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ಸಂಜೀವ ಬಳ್ಕೂರು, ಕಾರ್ಯದರ್ಶಿ ಲಿಂಗಪ್ಪ ನಂತೂರ ಉಪಸ್ಥಿತರಿದ್ದರು. ○

ಪಿಡಿ ಸಂಪಾದಕೀಯ

2010 ಆರಂಭವಾಗಿದ್ದದ್ದು ಸಕ್ಕರೆ ಮತ್ತು ತೊಗರಿ ಬೇಳೆಯ ಅಸಾಮಾನ್ಯ ಬೆಲೆಯೇರಿಕೆಗಳೊಂದಿಗೆ. ಅದು ಮುಗಿಯುತ್ತಿರುವುದು ಈರುಳ್ಳಿ ಬೆಲೆಗಳ ನಾಗಾಲೋಟದೊಂದಿಗೆ. ಈ ನಡುವೆ ಸಾಲು-ಸಾಲು ಹಗರಣಗಳಲ್ಲಿ ದೇಶದ ಸಂಪನ್ಮೂಲಗಳ ಲೂಟಿ, ಕೇಂದ್ರೀಯ ಸಂಸ್ಥೆಗಳ ಮೇಲೆ ಕರಿಮೋಡಗಳು. ಇವೆಲ್ಲದರಿಂದಾಗಿ ಮುಂಬರುವ ವರ್ಷದಲ್ಲಿ ರಾಜಕೀಯ ಅನಿಶ್ಚಿತತೆಯ ಊಹಾಪೋಹಗಳು. 2011ರಲ್ಲಿ ಜನತೆಯ ಅಜೆಂಡಾವನ್ನು ನಿರೂಪಿಸುವ ಬೆಳವಣಿಗೆಗಳಿವು. ಜನಸಮೂಹಗಳ ಹೋರಾಟಗಳ ಮೂಲಕ ಸರಕಾರದ ಮೇಲೆ ಬಲವಾದ ಒತ್ತಡಗಳನ್ನು ತರದೇ ಹೋದರೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಆಶಯ ಈಡೇರದು.

ಜನತೆಗಾಗಿ ಒಂದು ಉತ್ತಮ ಭಾರತ ನಿರ್ಮಾಣಕ್ಕಾಗಿ

ಹೊಸ ವರ್ಷದಲ್ಲಿ ಹೆಚ್ಚೆಚ್ಚು ಬಲಿಷ್ಟ ಹೋರಾಟಗಳು

ಓದುಗರಿಗೆ ಹೊಸ ವರ್ಷದ ಶುಭಾಶಯಗಳು.

ದುರದೃಷ್ಟವಶಾತ್, ಅವಿರತವಾಗಿ ಹೊರಿಸುತ್ತಿರುವ ಆರ್ಥಿಕ ಹೊರೆಗಳಿಂದ ನರಳುತ್ತಿರುವವರಿಗೆ ಆಳವಾದ ಸಹಾನುಭೂತಿ ಯೊಂದಿಗೆ ಈ ಶುಭಾಶಯವನ್ನು ಕೋರಬೇಕಾಗಿದೆ. ಯುಪಿಎ ಅಧಿಕಾರಕ್ಕೆ ಮರಳಿದಂದಿನಿಂದ ಎಲ್ಲ ಜೀವನಾವಶ್ಯಕ ಸರಕುಗಳ ಬೆಲೆಗಳು ಸತತವಾಗಿ ಏರುತ್ತಿರುವುದರಿಂದ ನಮ್ಮ ಬಹುಪಾಲು ಜನಸಮೂಹಗಳ ಜೀವನ ಮಟ್ಟ ವಿಪರೀತವಾಗಿ ಕುಸಿದಿದೆ. ನಮ್ಮ ಜನಸಂಖ್ಯೆಯ 77 ಶೇ. ಮಂದಿ ದಿನಕ್ಕೆ ಕೇವಲ 20ರೂ.ಗಳಲ್ಲಿ ಹೇಗೋ ಬದುಕು ಸಾಗಿಸುತ್ತಿರುವಾಗ ಈ ರೀತಿಯ ಕ್ರೂರ ಬೆಲೆಯೇರಿಕೆಗಳ ಅಲೆ ಇನ್ನೂ ಹಲವಾರು ಮಂದಿಯನ್ನು ಕಡು ಬಡತನಕ್ಕೆ ನೂಕುತ್ತಿದೆ ಎಂಬುದಂತೂ ಸ್ಪಷ್ಟ.

2010 ಆರಂಭವಾದದ್ದು ಸಕ್ಕರೆ ಮತ್ತು ತೊಗರಿ ಬೇಳೆಯ ಅಸಾಮಾನ್ಯ ಏರುಬೆಲೆಗಳೊಂದಿಗೆ-ಸಕ್ಕರೆಗೆ ಕೆ.ಜಿ.ಗೆ 50ರೂ. ಮತ್ತು ತೊಗರಿ ಬೇಳೆಗೆ ಕೆ.ಜಿ.ಗೆ 100ರೂ. ಅದೇ ರೀತಿ ಇತರ ದೈನಂದಿನ ಬಳಕೆ ಸಾಮಗ್ರಿಗಳೂ ತುಟ್ಟಿಯಾದವು. ಈಗ ಈ ವರ್ಷ ಮುಗಿಯುತ್ತಿರುವುದು ಈರುಳ್ಳಿ ಬೆಲೆಗಳ ನಾಗಾಲೋಟದೊಂದಿಗೆ- ಅದು ಎಲ್ಲಾ ಮಹಾನಗರಗಳಲ್ಲಿ ಕೆ.ಜಿ.ಗೆ 70ರೂ. ತಲುಪಿದೆ. ಸಹಜವಾಗಿಯೇ ಇದರ ಪ್ರಭಾವ ಇತರ ತರಕಾರಿಗಳು ಮತ್ತು ಖಾದ್ಯ ಪದಾರ್ಥಗಳ ಮೇಲೂ ಬಿದ್ದಿದೆ.

ಪೂರೈಕೆ ಮತ್ತು ಬೇಡಿಕೆಯ ನಡುವೆ ಹೊಂದಾಣಿಕೆಯಿಲ್ಲದೆ ಹೀಗಾಗಿದೆ ಎಂಬುದು ಸರಕಾರದ ತರ್ಕ. ಇದು ಒಂದು ಟೊಳ್ಳು ಸಮಜಾಯಿಷಿಯಷ್ಟೇ. ದಿಲ್ಲಿಯಲ್ಲಿ 2008ರಿಂದ ಈರುಳ್ಳಿ ಪೂರೈಕೆ 60ಶೇ. ಹೆಚ್ಚಿತು. ಆದರೂ ಸಗಟು ಬೆಲೆಗಳಲ್ಲಿ 300ಶೇ. ನಾಗಾಲೋಟವಾಗಿದೆ. ಕಳೆದ ವರ್ಷ ಸಕ್ಕರೆಯ ವಿಷಯದಲ್ಲಿ ಮಾಡಿದಂತೆ, ಕೊರತೆಗಳು ಉಂಟಾಗಿ ಬೆಲೆಗಳು ಏರಬಹುದು ಎಂಬ ಸೂಚನೆಗಳಿದ್ದರೂ ಈರುಳ್ಳಿ ರಫ್ತನ್ನು ಉದಾರಗೊಳಿಸಲಾಯಿತು. ಇಂತಹ ರಫ್ತುಗಳಿಗೆ ಉತ್ತೇಜಕಗಳನ್ನೂ ಕೊಡಲಾಯಿತು. ಭಾರತದ ಈರುಳ್ಳಿ ರಫ್ತು 2005-06ರಲ್ಲಿ 7.8ಲಕ್ಷ ಮೆಟ್ರಿಕ್ ಟನ್‌ಗಳಿಂದ 2009-10ರಲ್ಲಿ 19ಲಕ್ಷ ಟನ್‌ಗೇರಿತು. ಈಗ ಬೆಲೆಯೇರಿಕೆಗೆ ಸಾರ್ವಜನಿಕ ಆಕ್ರೋಶ ಕಂಡು ಈ ರಫ್ತುಗಳನ್ನು ನಿಷೇಧಿಸಲಾಗಿದೆ. ಈಗ ಯಾವುದೇ ಸುಂಕಗಳಿಲ್ಲದೆ ಆಮದಿಗೆ ಅವಕಾಶ ಕೊಟ್ಟಿದೆ, ಅಂದರೆ ಬೆಲೆ ಹತೋಟಿಗಾಗಿ ಆಮದಿಗೆ ಸಬ್ಸಿಡಿ ಕೊಡುತ್ತಿದೆ. ರಫ್ತಿಗೆ ಉತ್ತೇಜಕ, ಆಮದಿಗೆ ಸಬ್ಸಿಡಿ. ಅಂದರೆ ಎರಡೂ ರೀತಿಗಳಲ್ಲಿ ಅವೇ ವ್ಯಾಪಾರೀ ಕಂಪನಿಗಳಿಗೆ ಲಾಭಗಳ ಬಕ್ಷೀಸು! ಈ ಹಿಂದೆ ಹೇಳಿರುವಂತೆ ಈ ವರ್ಷ ಎಪ್ರಿಲ್ 1ರಿಂದ ನವಂಬರ್ 30 ರವರೆಗೆ ಕೃಷಿ ಸರಕುಗಳಲ್ಲಿ ವ್ಯವಹಾರದ ಒಟ್ಟು ಮೊತ್ತ ರೂ. 8,39,605.53. ಕಳೆದ ವರ್ಷ ಇದೇ ಅವಧಿಯಲ್ಲಿ ಇದು 7,66,133.46ರೂ. ಇಷ್ಟೊಂದು ಏರಿಕೆ, ಈ ಸರಕುಗಳಲ್ಲಿ ಸಟ್ಟಾ ವ್ಯಾಪಾರದಿಂದ ಸೂಪರ್ ಲಾಭಗಳನ್ನು ಗಿಟ್ಟಿಸಬಹುದು ಎಂಬುದರ ಸ್ಪಷ್ಟ ಸೂಚನೆ. ಇದೀಗ ಜನಗಳ ಜೀವನಾಧಾರಗಳನ್ನೇ ಬಲಿಗೊಟ್ಟು ನಡೆಸಿರುವ ಮತ್ತೊಂದು ಹಗರಣದ ಸೂಚನೆಯಲ್ಲವೇ?

ಹಗರಣಗಳ ವರ್ಷ

ಹಗರಣಗಳ ವಿಷಯಕ್ಕೆ ಬಂದರೆ, 2010 ಸ್ವತಂತ್ರ ಭಾರತದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಅಕ್ರಮ ಗಣಿಗಾರಿಕೆ, ಅಕ್ರಮ ಭೂಮಿ ನೀಡಿಕೆ, ಐಪಿಎಲ್ ಕ್ರಿಕೆಟ್ ಪಂದ್ಯ, ಕಾಮನ್ವೆಲ್ತ್ ಕ್ರೀಡಾಕೂಟ, ಆದರ್ಶ ಹೌಸಿಂಗ್ ಸೊಸೈಟಿ ಮುಂತಾದ ಹಗರಣಗಳು ಮತ್ತು ಇವೆಲ್ಲ ಹಗರಣಗಳ ಮಾತೃ ಹಗರಣವಾಗಿ 2ಜಿ ತರಂಗಾಂತರ ಹಗರಣ. 2ಜಿ ಹಗರಣವೊಂದರಲ್ಲೇ ಸರಕಾರೀ ಖಜಾನೆಗೆ 1.76ಲಕ್ಷ ಕೋಟಿ ರೂ.ಗಳ ನಷ್ಟವಾಗಿದೆ ಎಂದು ಮಹಾ ಲೆಕ್ಕ ಪರಿಶೋಧಕರು ಅಂದಾಜು ಮಾಡಿದ್ದಾರೆ. ಇಂತಹ ದೊಡ್ಡ ಪ್ರಮಾಣದ ಭ್ರಷ್ಟಾಚಾರದ ಮೂಲಕ ಲೂಟಿ ಹೊಡೆದಿರುವ ಲಕ್ಷ ಕೋಟಿ ರೂ.ಗಳು ನಮ್ಮ ಕೋಟ್ಯಂತರ ಜನಸಾಮಾನ್ಯರಿಗೆ ಒಂದು ಉತ್ತಮ ಜೀವನ ಮಟ್ಟ ಸಿಗದಂತೆ ವಂಚಿಸಿವೆ. ಸರಕಾರಕ್ಕೆ ನ್ಯಾಯಬದ್ಧವಾಗಿ ಬರಬೇಕಾಗಿದ್ದ ಈ ಆದಾಯವನ್ನು ಅಕ್ರಮವಾಗಿ ಬೇರೆಡೆಗೆ ಸೆಳೆದುಕೊಳ್ಳಲು ಬಿಡದೆ, ಅದನ್ನು ಸಂಗ್ರಹಿಸುವುದು ಸರಕಾರಕ್ಕೆ ಸಾಧ್ಯವಾಗಿದ್ದರೆ, ಅದನ್ನು ಸಾಮಾಜಿಕ ವಲಯದ ಸ್ಕೀಮುಗಳಲ್ಲಿ ಖರ್ಚು ಮಾಡಿದ್ದರೆ, ನಮ್ಮ ಜನಗಳ, 'ಆಮ್ ಆದ್ಮಿ'ಯ ಬದುಕಿನ ಮಟ್ಟ ಖಂಡಿತವಾಗಿಯೂ ಏರುತ್ತಿತ್ತು.



ಆದರೆ, ಈ ಯುಪಿಎ-2 ಸರಕಾರಕ್ಕೆ ಈ ವಿಷಯದಲ್ಲಿ ಎಳ್ಳಷ್ಟೂ ಕಾಳಜಿಯಿದ್ದಂತಿಲ್ಲ. ಅದು ಪ್ರದರ್ಶಿಸುತ್ತಿರುವ ದಿವ್ಯ ನಿರ್ಲಕ್ಷ್ಯ ನಮ್ಮ ಸಂಪನ್ಮೂಲಗಳ ಇಂತಹ ಬೃಹತ್ ಲೂಟಿಗೆ ಅನುಮತಿ ನೀಡುವಲ್ಲಿ ಈ ಸರಕಾರವೂ ಶಾಮೀಲಾಗಿರಬಹುದೇ ಎಂಬ ಬಲವಾದ ಮತ್ತು ಸಹಜವಾದ ಸಂದೇಹವನ್ನು ಎಬ್ಬಿಸುತ್ತದೆ. 2ಜಿ ತರಂಗಾಂತರ ಹಗರಣದ ತನಿಖೆಗೆ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ರಚಿಸಬೇಕು ಎಂದು ಸಮಸ್ತ ಪ್ರತಿಪಕ್ಷಗಳೂ ಬೇಡಿಕೆಯಿಟ್ಟರೂ ಅದನ್ನು ಒಪ್ಪುವುದಿಲ್ಲ ಎಂದು ಸರಕಾರ ಹಠ ಹಿಡಿದು ಕೂತಿದ್ದರಿಂದ ಸಂಸತ್ತಿನ ಚಳಿಗಾಲದ ಅಧಿವೇಶನ ಹಿಂದೆಂದೂ ಕಾಣದ ರೀತಿಯಲ್ಲಿ ವ್ಯರ್ಥವಾಗಿದೆ.

ಜೆಪಿಸಿಯ ಅಜೆಂಡಾ

ಅಧಿವೇಶನವನ್ನು ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಿದ ಮೇಲೆ ಪ್ರಧಾನ ಮಂತ್ರಿಗಳು ತಾನು ಬಚ್ಚಿಡುವಂತದ್ದೇನೂ ಇಲ್ಲ, ಬೇಕಾದರೆ ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ)ಯ ಮುಂದೆ ನಿಲ್ಲಲು ಸಿದ್ಧ ಎಂದು ಪ್ರಕಟಿಸಿದರು. ಈ ಹೇಳಿಕೆಯನ್ನು ಅಧಿವೇಶನದ ಆರಂಭದಲ್ಲೇ ಕೊಟ್ಟಿದ್ದರೆ ವಿಷಯ ಬೇರೆಯೇ ಆಗುತ್ತಿತ್ತು. ಇನ್ನು, ಪ್ರಧಾನ ಮಂತ್ರಿಗಳು ಪಿಎಸಿ ಮುಂದೆ ಬರಲು ಸಿದ್ಧರಿದ್ದರೆ, ಜೆಪಿಸಿಯ ಮುಂದೆ ಯಾಕಿಲ್ಲ? ಪಿಎಸಿ, ಜೆಪಿಸಿ ಎರಡೂ ಜಂಟಿ ಸಂಸದೀಯ ಸಮಿತಿಗಳೇ ತಾನೇ? ಆದರೆ ಪಿಎಸಿ, ಅದರ ಹೆಸರೇ ನಿರೂಪಿಸುವಂತೆ, ಕೇವಲ ಲೆಕ್ಕಪತ್ರಗಳನ್ನು ಪರೀಕ್ಷಿಸಬಹುದಷ್ಟೇ.

ಆದರೆ, ಈ ವಿಷಯದಲ್ಲಿ ಹೊಸ ನಿಯಮಾವಳಿಗಳನ್ನು ವಿಕಾಸಗೊಳಿಸಬೇಕಾಗಿದೆ, ಭವಿಷ್ಯದಲ್ಲಿ ಇಂತಹ ಅಗಾಧ ಪ್ರಮಾಣದ ಲೂಟಿಗಳಿಗೆ ಅವಕಾಶ ಮಾಡಿಕೊಳ್ಳಲು ನಮ್ಮ ವ್ಯವಸ್ಥೆಯನ್ನು ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ತಿರುಚುವುದನ್ನು ತಡೆಯಲು, ಅಗತ್ಯವೆನಿಸಿದರೆ ಹೊಸ ಕಾನೂನುಗಳನ್ನು ಕೂಡ ರೂಪಿಸಬೇಕಾಗಬಹುದು. ಇದು ಜೆಪಿಸಿಯ ಮುಖ್ಯ ಅಜೆಂಡಾವಾಗಿರುತ್ತದೆ. ಹರ್ಷದ್ ಮೆಹ್ತಾ ಶೇರು ಮಾರುಕಟ್ಟೆ ಹಗರಣದಲ್ಲಿ ಜೆಪಿಸಿ ಶಿಫಾರಸುಗಳ ಮೇಲೆಯೇ ನಮ್ಮ ಹಣಕಾಸು ವಲಯದ ನಿರ್ವಹಣೆಗಳನ್ನು ಬಲಪಡಿಸುವ ನಿಯಂತ್ರಣಗಳು ಜಾರಿಗೆ ಬಂದದ್ದು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇಷ್ಟೇ ಅಲ್ಲ, ಈ ವರ್ಷ ಸಂಸತ್ತು ಮತ್ತು ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳ ಮೇಲೆ ಒಂದು ಗಂಭೀರ ದಾಳಿಯನ್ನು ಕಂಡ ವರ್ಷವಾಗಿರುವುದೂ ಇನ್ನೊಂದು ವೈಶಿಷ್ಟ್ಯ. ಸಂಸತ್ತಿನ ಚಳಿಗಾಲದ ಅಧಿವೇಶನವನ್ನು ಸುಮಾರಾಗಿ ರದ್ದು ಮಾಡಿದ್ದಷ್ಟೇ ಅಲ್ಲ, ಸಿಬಿಐ, ಸಿವಿಸಿ(ಕೇಂದ್ರೀಯ ವಿಚಕ್ಷಣಾ ಆಯೋಗ) ಮುಂತಾದ ಕೇಂದ್ರೀಯ ಸಂಸ್ಥೆಗಳ ನಿರ್ವಹಣೆಯ ಮೇಲೂ ಮೋಡ ಕವಿದಿದೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಬಂದಿರುವ ವರದಿಗಳ ಪ್ರಕಾರ 2ಜಿ ತರಂಗಾಂತರ ಮತ್ತು ಕಾಮನ್ವೆಲ್ತ್ ಕ್ರೀಡಾ ಕೂಟ ಹಗರಣಗಳಲ್ಲಿ ಸಂದೇಹಾಸ್ಪದರಾಗಿರುವ ಪ್ರಮುಖರ ನಿವಾಸಗಳ ಮೇಲೆ ಈ ಸಂಸ್ಥೆಗಳು ದಾಳಿ ನಡೆಸಿವೆ. ಆದರೆ ಬಹಳಷ್ಟು ಸಮಯ ಕಳೆದ ಮೇಲೆ ನಡೆದಿರುವ ಈ ದಾಳಿಗಳಿಂದ ಸಿಗಬಹುದಾದ ಫಲ ಅಷ್ಟರಲ್ಲೇ ಇದೆ. ಇವು ಸರಕಾರದ ಮಟ್ಟಿಗೆ ಒಂದು ಸಾರ್ವಜನಿಕ ಸಂಬಂಧಗಳ ಕಸರತ್ತು ಆಗಬಹುದಷ್ಟೇ.

ದಿಕ್ಕೇಡಿತನ ಬಲಗೊಂಡಿದೆ

ಇವೆಲ್ಲ ಬೆಳವಣಿಗೆಗಳು ಯುಪಿಎ-2 ಸರಕಾರದ ದಿಕ್ಕೇಡಿತನವನ್ನು ಇನ್ನಷ್ಟು ಗಟ್ಟಿಗೊಳಿಸಿವೆ. ಇದು ಮುಂಬರುವ ವರ್ಷದಲ್ಲಿ ರಾಜಕೀಯ ಅನಿಶ್ಚಿತತೆ ಎದುರಾಗಬಹುದೆಂಬ ಊಹಾಪೋಹಗಳಿಗೆ ಆಹಾರವಾಗುತ್ತಿದೆ. ಒಂದು ಸರಕಾರ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಅದು ಲೋಕಸಭೆಯಲ್ಲಿ ಬಹುಮತದ ಪ್ರಶ್ನೆಯಷ್ಟೇ ಅಲ್ಲ. ಅದಕ್ಕಿಂತ ಹೆಚ್ಚಾಗಿ ಇದು ನಮ್ಮ ಜನಗಳ ಜೀವನ ಮಟ್ಟವನ್ನು ಉತ್ತಮ ಪಡಿಸುವ, ಆಮೂಲಕ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಕಣ್ಣೋಟವನ್ನು ಆಧರಿಸಿದ ಒಂದು ಸ್ಪಷ್ಟ ಅಜೆಂಡಾದ ಪ್ರಶ್ನೆಯಾಗಿದೆ. ತನ್ನಿಂದಾಗಿ ಭಾರತ ಜಿ-20 ರ ದೇಶಗಳ ಹೆಗಲೆಣೆಯಾಗಿ ನಿಂತಿದೆ, ಭದ್ರತಾ ಸಮಿತಿಯ ಎಲ್ಲಾ ಐದು ಖಾಯಂ ಸದಸ್ಯದೇಶಗಳ ಮುಖಂಡರು ಭೇಟಿ ನೀಡಿ ಹೋಗಿದ್ದಾರೆ ಎಂಬ ಯುಪಿಎ ಹೆಗ್ಗಳಿಕೆ ಏನೇ ಇದ್ದರೂ, ಈ ನಿಟ್ಟಿನಲ್ಲಂತೂ ಈ ಸರಕಾರದ ಕೊರತೆ ಎದ್ದು ಕಾಣುತ್ತದೆ.

ಈ ಬೆಳವಣಿಗೆಗಳು ಮುಂಬರುವ ವರ್ಷದಲ್ಲಿ ನಮ್ಮ ಜನತೆಯ ಅಜೆಂಡಾವನ್ನು ನಿರೂಪಿಸುವಂತವು. ಜನಸಮೂಹಗಳ ಹೋರಾಟಗಳ ಮೂಲಕ ಸರಕಾರದ ಮೇಲೆ ಬಲವಾದ ಒತ್ತಡಗಳನ್ನು ತರದೇ ಹೋದರೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಆಶಯ ಈಡೇರದು. ನಮಗೆ ಒಂದು ಜನತೆಯಾಗಿ, ಒಂದು ದೇಶವಾಗಿ ಆರ್ಥಿಕ ಅಭಿವೃದ್ಧಿಯಲ್ಲೂ, ಸಾಮಾಜಿಕ ಸಮತ್ವದಲ್ಲೂ ಉನ್ನತ ಮಟ್ಟಕ್ಕೇರುವ ಸಾಮರ್ಥ್ಯವಿದೆ. ಆದರೆ ಇದನ್ನು ಸಾಧಿಸಬೇಕಾದರೆ, ಅದು ಸರಕಾರದ ಧೋರಣೆಗಳು ನಮ್ಮ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಮತ್ತು ನಮ್ಮ ದೇಶದ ಸಂಪನ್ಮೂಲಗಳ ಲೂಟಿಯನ್ನು ತಡೆಯುವ ಒಂದು ಕಣ್ಣೋಟದ ಮೇಲೆ ಆಧರಿಸಿದರೆ ಮಾತ್ರ ಸಾಧ್ಯ. ಸರಕಾರ ಹಾಗೆ ಮಾಡುವಂತೆ ಮಾಡಬೇಕಾಗಿದೆ. 2011ರಲ್ಲಿ, ನಮ್ಮ ಜನತೆಗಾಗಿ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಇನ್ನಷ್ಟು ಬಲಿಷ್ಠ ಹೋರಾಟಗಳಿಗೆ ಶುಭಾಶಯಗಳು. ○

2 ಜಿ ಸ್ಪೆಕ್ಟ್ರಂ ಮತ್ತಿತರ ಹಗರಣಗಳ ಸ್ಫೋಟ

ಬಯಲಾದ ದೇಶಭಕ್ಷಕ ಆರೆಸ್ಸೆಸ್ ಮತ್ತು ಬಿಜೆಪಿ ನಾಯಕರ ವಿಕಾರಮುಖಗಳು

ದೈತ್ಯ ಭ್ರಷ್ಟಾಚಾರ ಕಾಂಡವಾದ 2 ಜಿ ಸ್ಪೆಕ್ಟ್ರಂ ಮತ್ತಿತರ ಹಗರಣಗಳ ಒಂದೊಂದೇ ಸುರಳಿಗಳು ಬಿಚ್ಚಿಕೊಳ್ಳುತ್ತಾ ಹೋದಂತೆ ಅದರಲ್ಲಿ ಅಧಿಕಾರಸ್ಥ ಕಾಂಗ್ರೆಸ್ ಪಕ್ಷದ ಮತ್ತು ಯುಪಿಎ ಪಾಲುದಾರ ಪಕ್ಷಗಳ ಮುಖಂಡರಷ್ಟೇ ಅಲ್ಲ ಪ್ರಮುಖ 'ವಿರೋಧ ಪಕ್ಷ' ಎನಿಸಿಕೊಂಡಿರುವ ಬಿಜೆಪಿ -ಆರೆಸ್ಸೆಸ್ ರಾಷ್ಟ್ರೀಯ ಮುಖಂಡರ ವಿಕಾರ ಮುಖಗಳು ಸ್ಪಷ್ಟವಾಗಿ ಅನಾವರಣಗೊಳ್ಳುತ್ತಾ ಹೊರಟಿವೆ. ರಾಜಕಾರಣ - ಬಂಡವಾಳಶಾಹಿ ಸಮೂಹ ಮಾಧ್ಯಮ ಮತ್ತು ದೊಡ್ಡ ಬಂಡವಾಳಿಗರ ನಡುವಿನ ಅಪವಿತ್ರ, ಅನೈತಿಕವಾದ ಮೈತ್ರಿ ಪ್ರಜ್ಞಾವಂತರನ್ನು ಬೆಚ್ಚಿ ಬೀಳಿಸಿದೆ.

ಜಯ

ರೂ. 1,76,000 ಕೋಟಿ ಮೌಲ್ಯದ ತರಂಗಾಂತರ ಹಂಚಿಕೆ ಹಗರಣದ ಅಪರಾಧಿಗಳನ್ನು ಬಂಧಿಸಲು ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ ಎಂದು ಜನತೆ ಕಾತರಿಸುತ್ತಿದ್ದರೆ, ಇಂತಹ ಬೃಹತ್ ಹಗರಣಗಳ ರೂವಾರಿಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳೆರಡೂ ಪರಸ್ಪರ ಕೆಸರೆರಚಾಟದಲ್ಲಿ ತೊಡಗಿ ಜನತೆಯನ್ನು ದಿಕ್ಕುತಪ್ಪಿಸಲು ಯತ್ನಿಸುತ್ತಿವೆ. ಇದಕ್ಕೆ ಉದಾಹರಣೆಯೆಂದರೆ, ಈ ಹಗರಣದ ತನಿಖೆಯನ್ನು ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸುವವರೆಗೆ ತಾನು ಸಂಸತ್ ಅಧಿವೇಶನದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಒಂದೆಡೆ ಹೇಳುವ ಬಿಜೆಪಿ ಮತ್ತೊಂದೆಡೆ, ತನ್ನ ಪಕ್ಷದ ಮುರಳಿ ಮನೋಹರ ಜೋಷಿ ಅಧ್ಯಕ್ಷರಿರುವ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಈಗಾಗಲೇ ಕೇಂದ್ರ ಸರ್ಕಾರ ಬಯಸುವಂತೆಯೇ ಈ ಹಗರಣದ ತನಿಖೆಯನ್ನು ಆರಂಭಿಸಿದೆ.



ಜನತೆ ದಿಕ್ಕುತಪ್ಪಿಸಲು ಕಾಂಗ್ರೆಸ್-ಬಿಜೆಪಿ ಯತ್ನ

ಬಲಾಢ್ಯ ಬಂಡವಾಳಿಗರಾದ ರತನ್ ಟಾಟಾ, ಅಂಬಾನಿಗಳು, ರಾಜಕಾರಣಿಗಳಾದ ಮಾಜಿ ಸಚಿವ ಎ. ರಾಜಾ, ಕರುಣಾನಿಧಿ ಮಗಳು ಕನ್ನಿಮೋಳಿ, ಮತ್ತು ಮಾಧ್ಯಮಲೋಕದ ಪ್ರತಿಷ್ಠಿತ ಪತ್ರಕರ್ತರು ಟೆಲಿಕಾಂ ತರಂಗಾಂತರ ಹಗರಣದಲ್ಲಿ ಪ್ರಮುಖ ವ್ಯಕ್ತಿಯಾಗಿರುವ ನೀರಾ ರಾಡಿಯಾಳ ಜೊತೆ ಸಂಬಂಧ ಹೊಂದಿ ಹಗರಣದಲ್ಲಿ ಭಾಗಿಯಾಗಿರುವುದು ದೇಶದೆಲ್ಲೆಡೆ ಮನೆ ಮಾತಾಗಿದೆ.

ದೇಶ ರಕ್ಷಕರೆಂದು ತಾವೆಂದು ತಂತಾವೇ ಕರೆದುಕೊಳ್ಳುವ ಆರೆಸ್ಸಸ್ ಮತ್ತು ಬಿಜೆಪಿ ನಾಯಕರ ಭ್ರಷ್ಟ ಮತ್ತು ನೀಚ ದೇಶ ಭಕ್ಷಣೆಯ ಕಾರ್ಯಗಳನ್ನು ದೇಶದ ಜನತೆ ಹಿಂದಿನಿಂದಲೂ ನೋಡುತ್ತಾ ಬಂದಿದೆ.

ಈ ಮಹಾನ್ ಹಗರಣದ ಪ್ರಮುಖ ವ್ಯಕ್ತಿ ನೀರಾಳೊಂದಿಗೆ ಪೇಜಾವರ ಸ್ವಾಮೀಜಿಯ ಹೆಸರು ತಳುಕು ಹಾಕಿಕೊಂಡಿರುವುದು ಇಲ್ಲಿ ಗಮನಿಸಬೇಕಾದ ಅಂಶ. ನಮ್ಮ ರಾಜ್ಯದ ಪ್ರಭಾವಿ ಮತ್ತು ಬಲಾಢ್ಯ ಮಠಗಳು ಮತ್ತು ಸ್ವಾಮೀಜಿಗಳು ಭ್ರಷ್ಟ ವ್ಯವಸ್ಥೆ ಮತ್ತು ರಾಜಕಾರಣಿಗಳನ್ನು ಪೋಷಿಸುತ್ತಾ ಬಂದಿರುವುದನ್ನು ಇತಿಹಾಸದುದ್ದಕ್ಕೂ ಕಾಣಬಹುದು. ಇದಕ್ಕೆ ಮತ್ತೊಂದು ಉದಾಹರಣೆಯೆಂದರೆ ಪೇಜಾವರ ಸ್ವಾಮೀಜಿ- ನೀರಾ- ಗಡ್ಕರಿ-ಇತರೆ ಬಿಜೆಪಿ ನಾಯಕರ ಸ್ನೇಹ.

ಅನಂತನ ಸಹವಾಸ - ಖುಲಾಯಿಸಿತು ರಾಡಿಯಾಳ ಅದೃಷ್ಟ

ತನ್ನ ಬಿಸಿನೆಸ್ ವ್ಯಾಪಾರಗಳಲ್ಲಿ ಮೇಲೇರಲು ಹೆಣಗುತ್ತಿದ್ದ ನೀರಾ ರಾಡಿಯಾಳ ಜೀವನ ಒಂದು ದಿನ 'ಒಳ್ಳೆಯ ತಿರುವು' ಪಡೆದುಕೊಳ್ಳಲು ಕಾರಣ ಬಿಜೆಪಿ ನಾಯಕ ಅನಂತ್‌ಕುಮಾರ್. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ 1998-99 ರಲ್ಲಿ ನಾಗರೀಕ ವಿಮಾನಯಾನ ಸಚಿವ ಆಗಿದ್ದ ಈ ಅನಂತ್‌ಕುಮಾರ್. ತಾನೂ ಒಂದು ವಿಮಾನ ಕಂಪನಿ ಆರಂಭಿಸಲು ನೀರಾ ಯತ್ನಿಸಲಾರಂಭಿಸಿದಳು. ಆಗಲೇ ಅನಂತ್‌ಕುಮಾರ್ ಮತ್ತು ನೀರಾಳ ಸಂಬಂಧ ಬಹಳ ಆಪ್ತವಾಯಿತು ಮತ್ತು ನೀರಾ ಈ ಮಂತ್ರಿ ಮಹಾಸ್ವಾಮಿಯ ಎಲ್ಲ ಅಧಿಕಾರದ ಶಕ್ತಿಯನ್ನು ಬಳಸಿಕೊಂಡಳು ಎನ್ನಲಾಗಿದೆ. ಅಲ್ಲದೆ ಸಚಿವ ಸಂಪುಟದ ರಹಸ್ಯ ದಾಖಲಾತಿಗಳನ್ನು ಕೂಡ ಅನಂತ್‌ಕುಮಾರ್ ಇವಳಿಗೆ ನೀಡಿದ್ದರು.





ವಾಜಪೇಯಿಯವರೊಂದಿಗೆ ರಾಡಿಯಾ ಮತ್ತಿತರರು - ಪೇಜಾವರ ಶ್ರೀಗಳ ಉಪಸ್ಥಿತಿಯಲ್ಲಿ

ನೀರಾಳನ್ನು ಈ ಚೆಡ್ಡಿ ನಾಯಕ ತನ್ನ ಗುರುಗಳಾದ ವಿಶ್ವೇಶತೀರ್ಥ ಪೇಜಾವರ ಸ್ವಾಮಿಯವರಿಗೂ ಪರಿಚಯಿಸಿದ.

ನಂತರ ಅನಂತ್ ಕುಮಾರ್‌ನನ್ನು ನಗರಾಭಿವೃದ್ಧಿ ಮತ್ತು ಪ್ರವಾಸೋದ್ಯಮ ಖಾತೆಗೆ ದಬ್ಬಲಾಯಿತು. ನೀರಾ ರಾಡಿಯಾ ಏರ್ಪಡಿಸುತ್ತಿದ್ದ ಪಾರ್ಟಿಗಳಿಗೆ ಸರ್ಕಾರದ ಮಾಲೀಕತ್ವದಲ್ಲಿದ್ದ ಅಶೋಕ ಹೋಟೆಲ್ ಮತ್ತು ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಗಳಿಂದಲೇ ಆಹಾರ ಮತ್ತು ಪಾನೀಯಗಳು ಸರಬರಾಜಾಗುತ್ತಿದ್ದವು.

ಅನಂತ್‌ಕುಮಾರ್ ಸಾವಿರಾರು ಕೋಟಿ ಹುಡ್ಕೋ ಹಗರಣದಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಾಗ ಅದು ಮಾಧ್ಯಮದಲ್ಲಿ ಹೆಚ್ಚಾಗಿ ಹರಿದಾಡದಂತೆ. ಆ ಸುದ್ದಿಯನ್ನು ವ್ಯವಸ್ಥಿತವಾಗಿ ಮುಚ್ಚಿಹಾಕಲು ನೀರಾ ರಾಡಿಯಾ ತನ್ನೆಲ್ಲ ಶ್ರಮ ವ್ಯಯಿಸಿದ್ದಾಳೆ.

ಪೇಜಾವರ ಮತ್ತು ವಾಜಪೇಯಿ ಅಳಿಯನಿಂದ ನೀರಾಳಿಗೆ ಲಾಭ

ನೀರಾಳಿಗೆ ಈ ಸ್ವಾಮಿಯಿಂದ ಆದ ದೊಡ್ಡ ಲಾಭವೆಂದರೆ ಅಟಲ್ ಬಿಹಾರಿ ವಾಜಪೇಯಿಯ ನಂಟು ಮತ್ತು ಆಮೂಲಕ ವಾಜಪೇಯಿಯ ದತ್ತುಪುತ್ರಿ ಪತಿ ರಂಜನ್ ಭಟ್ಟಾಚಾರ್ಯನ ಸಂಪರ್ಕ. ಈ ವಾಜಪೇಯಿ ಅಳಿಯನೊಂದಿಗೆ ತರಂಗಾಂತರ ಹಂಚಿಕೆ ಸಂಬಂಧ ನೀರಾ ಮಾತನಾಡಿರುವ ಹಲವಾರು ಮಾತುಕತೆಗಳ ಧ್ವನಿ ಸುರುಳಿ ಮಾಧ್ಯಮದವರಿಗೆ ದೊರೆತಿದೆ.

ಆದರೆ ಪೇಜಾವರ ಸ್ವಾಮೀಜಿಗಳು ತಮ್ಮ ಎಂದಿನ ಗೋಮುಖ ವ್ಯಾಘ್ರದ ಶೈಲಿಯಲ್ಲಿಯೇ ಇದಕ್ಕೆ ಉತ್ತರಿಸಿದ್ದಾರೆ. ನೀರಾ ರಾಡಿಯಾಳನ್ನು ತಮಗೆ ಯಾವುದೇ ರಾಜಕೀಯ ಪಕ್ಷ ಪರಿಚಯಿಸಿಲ್ಲ. ಅವಳನ್ನು ತಮಗೆ ಪರಿಚಯಿಸಿದವರು ತಮ್ಮ ಶಿಷ್ಯರಲ್ಲೊಬ್ಬರು ಎಂದಿದ್ದಾರೆ. ಹಾಗೂ ತಾನು ನೀರಾಳನ್ನು ಅಂದಿನ ವಿಮಾನಯಾನ ಸಚಿವ ಅನಂತ್‌ಕುಮಾರ್‌ಗೆ ಪರಿಚಯಿಸಿಯೇ ಇಲ್ಲ ಎಂದು ಪರಿಚಯದ ವಾಸ್ತವತೆಯನ್ನು ಮರೆಮಾಚಲು ವಿಫಲ ಯತ್ನ ನಡೆಸಿದ್ದಾರೆ.

ಪೇಜಾವರ ಸ್ವಾಮಿ ಶಿಫಾರಸ್ಸಿನಿಂದ ರಾಡಿಯಾಳಿಗೆ ಭೂ-ಹಂಚಿಕೆ?


ನವದೆಹಲಿಯಲ್ಲಿ ರಾಡಿಯಾ ಸ್ಥಾಪಿಸಿರುವ ಟ್ರಸ್ಟ್‌ವೊಂದಕ್ಕೆ ಪೇಜಾವರ ಸ್ವಾಮೀಜಿಗಳು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿ ಒಂದೂವರೆ ಎಕರೆ ಭೂಮಿ ಹಂಚಿಕೆ ಮಾಡಿಸಿದ್ದಾರೆ ಎನ್ನಲಾಗಿದೆ. ಈ ಆರೋಪಕ್ಕೂ ಅದೇ ಶೈಲಿಯಲ್ಲಿ ಉತ್ತರಿಸಿರುವ ಸ್ವಾಮೀಜಿ 'ಈ ಭೂಮಿಯನ್ನು ನಾನು ಹಂಚಿಕೆ ಮಾಡಿಸಿರುವುದು ರಾಡಿಯಾ ಟ್ರಸ್ಟ್‌ಗೆ ಅಲ್ಲ. ಈ ಭೂಮಿಯು ರಾಮ ವಿಠಲ ಶಿಕ್ಷಣ ಸೇವಾ ಸಮಿತಿಗೆ ಹಂಚಿಕೆ ಮಾಡಿಸಿದ್ದು ಈ ಸಮಿತಿಗೆ ನಾನು ಅಧ್ಯಕ್ಷನಾಗಿದ್ದೇನೆ. ಹಾಗೂ ಈ ಭೂಮಿಯನ್ನು ಅಂದಿನ ಪ್ರಧಾನ ಮಂತ್ರಿಗಳಾದ ಪಿವಿ ನರಸಿಂಹರಾವ್ ಮತ್ತು ಹೆಚ್.ಡಿ. ದೇವೇಗೌಡರವರು ಎರಡು ಹಂತದಲ್ಲಿ ಹಂಚಿಕೆ ಮಾಡಿದ್ದಾರೆ' ಎಂದು ತಿಪ್ಪೆ ಸಾರುವ ಯತ್ನ ನಡೆಸಿದ್ದಾರೆ ಎನ್ನಲಾಗಿದೆ. ರಾಡಿಯಾಳ ಈ ಟ್ರಸ್ಟ್‌ಗೆ ಅಂದಿನ ಉಪ ಪ್ರಧಾನಿ ಎಲ್.ಕೆ ಅಡ್ವಾಣಿಯವರು ಅಡಿಗಲ್ಲು ನೆಟ್ಟಿರುವುದನ್ನು ಅಲ್ಲಗೆಳೆಯಲು ಸಾಧ್ಯವೇ ಇಲ್ಲ.

ಸ್ವಿಸ್ ಬ್ಯಾಂಕಿನಲ್ಲಿ ರಾಡಿಯಾ ಮತ್ತು ಬಿಜೆಪಿ ನಾಯಕರ ಹಣ

ನೀರಾ ರಾಡಿಯಾ ಸ್ವಿಸ್ ಬ್ಯಾಂಕಿನಲ್ಲಿ ಅಪಾರ ಮೊತ್ತದ ಹಣ ಇಟ್ಟಿರುವುದು ಬೆಳಕಿಗೆ ಬಂದಿದೆ. ಇದು ನೀರಾ ರಾಡಿಯಾಳದು ಮಾತ್ರವೋ ಅಥವಾ ಬಿಜೆಪಿ ನಾಯಕರದೂ ಇದರಲ್ಲಿ ಇರುವುದೋ ಎಂಬುದರ ಕುರಿತು ತನಿಖೆ ನಡೆಸಿದರಷ್ಟೇ ತಿಳಿಯಬಲ್ಲುದು. ಬಿಜೆಪಿ ನಾಯಕರ ಇಂತಹ ರಹಸ್ಯ ದಾಖಲಾತಿಗಳನ್ನು ತಾನು ಬಯಲಿಗೆಳೆಯುವುದಾಗಿ ಹೈಕಮ್ಯಾಂಡ್‌ಗೆ ಬ್ಲ್ಯಾಕ್‌ಮೇಲ್ ಒಡ್ಡುವ ಮೂಲಕ ಯಡ್ಡಿಯೂರಪ್ಪ ತನ್ನ ಸ್ಥಾನ ಉಳಿಸಿಕೊಂಡಿದ್ದಾರೆ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ



17ನೇ ವಿಶ್ವ ಸಾಮ್ರಾಜ್ಯಶಾಹಿ ವಿರೋಧಿ ವಿದ್ಯಾರ್ಥಿ-ಯುವಜನ ಉತ್ಸವ

ಆರ್.ರಾಮಕೃಷ್ಣ

ಅದು ದಕ್ಷಿಣ ಆಫ್ರಿಕಾ ಪ್ರೆಟೋರಿಯ ನಗರದ ಮಾಸ್ಟರ್ ಪೀಸ್ ಮೊರಿಪೆ ಕ್ರೀಡಾಂಗಣ. ಬೃಹತ್ ಕ್ರೀಡಾಂಗಣದ ಅಂಗಳವನ್ನು ತುಂಬಿ ಚೆಲ್ಲುವ ಉತ್ಸಾಹ ಅಲ್ಲಿ. ಸಾವಿರ ಸಾವಿರ ಯುವಜನರ ದಂಡು ದಂಡು. ಏಷ್ಯಾ, ಲ್ಯಾಟಿನ್ ಅಮೆರಿಕ, ಆಸ್ಟ್ರೇಲಿಯ, ಆಫ್ರಿಕ, 'ಯೂರೋಪ್.... ಎಲ್ಲ ಖಂಡಗಳಿಂದ 126 ದೇಶಗಳಿಂದ ಸಾಮ್ರಾಜ್ಯಶಾಹಿ ರಣರಂಗದಿಂದ ಬಂದ ತಂಡೋಪ ತಂಡಗಳು. ಹದಿನೈದು ಸಾವಿರ ಮಿಕ್ಕಿ ಪ್ರತಿನಿಧಿಗಳು.

ದಾಳಿಕೋರ, ಸುಲಿಗೆಕೋರ ಸಾಮ್ರಾಜ್ಯಶಾಹಿ ದೇಶಗಳ ಘೋರ ಪಾತಕಗಳಿಂದ ನೊಂದ ಬೆಂದ ದೇಶಗಳು ಯುವಜನರದ್ದಂತೂ ಅಲ್ಲಿ ರಣೋತ್ಸಾಹ.

ವೀವ ಕ್ಯೂಬಾ, ವೀವ ಸೌತ್ ಆಫ್ರೀಕ, ವೀವ ಪ್ಯಾಲಿಸ್ತೈನ್ ವಿವ ವಿಯೆಟ್ನಾಂ, ವೀವಾ ಅಂದರೆ ಸಾಕು ವೀವ ಕ್ಯೂಬಾ (ಕ್ಯೂಬಾ ಚಿರಾಯುವಾಗಲಿ ಎಂದಂತೆ.) ಘೋಷಣೆಗಳ ಮೊಳಗು.

ಅದು ಡಿಸೆಂಬರ್ 13ರ ನಡುಹಗಲು. ದಕ್ಷಿಣ ಆಫ್ರಿಕಕ್ಕೆ ಇದು ಬೇಸಿಗೆ. ಆದರೆ ಬೆಂಗಳೂರಿಗೆ ಮಳೆಗಾಲ ಮತ್ತು ಚಳಿಗಾಲ ಎರಡು ಮಾತನಾಡಿಕೊಂಡು ಒಟ್ಟಿಗೆ ಬಂದರೆ ವಾತಾವರಣ ಹೇಗಿರಬಹುದೋ ಅಂತಹ ವಾತಾವರಣ. ಚಳಿ ತುಂತುರು ಮಳೆ. ಆಗೀಗ ಒಂದಷ್ಟು ಹೆಚ್ಚಾಗುವ ಸೋನೆ ಮಳೆ. ಉಹುಂ. ಈ ಯಾವುವೂ ಯುವಜನರ ಉತ್ಸಾಹವನ್ನು ಕಡಿಮೆ ಮಾಡಲಿಲ್ಲ. ಹೋರಾಟಗಾರರನ್ನು ಅಭಿನಂದಿಸಿ ಹೂ ಮಳೆ ಸುರಿದಂತೆ. ಇನ್ನಷ್ಟು ಉತ್ಸಾಹವೇ. ದೇಶದೇಶಗಳ ಪ್ರತಿನಿಧಿಗಳ ತಂಡಗಳ ಪಥ ಸಂಚಲನ ಕ್ರೀಡಾಂಗಣದ ಒಳಗೆ.

ಅಮೆರಿಕ ಬೆಂಬಲಿತ ಇಸ್ರೇಲಿನ ಕ್ರೌರ್ಯದಿಂದ ತನ್ನ ತಾಯ್ನೆಲದಲ್ಲೇ ತಬ್ಬಲಿಗಳಾಗಿ ಅನುದಿನವೂ ದಾಳಿ ದೌರ್ಜನ್ಯಗಳನ್ನು ಮೆಟ್ಟಿನಿಂತು ಜಗತ್ತಿನ ಅತಿಕ್ರೂರ ಇಸ್ರೇಲಿ ಸೇನೆಯೊಂದಿಗೆ ಸೆಣೆಸುತ್ತಿರುವ ಪ್ಯಾಲಿಸ್ತೈನ್ ತಂಡ. ತಮ್ಮ ತಾಯ್ನೆಲದ ಮೇಲೆ ಎರಗಿ ಬಿದ್ದ ದೈತ್ಯ ಅಮೆರಿಕದ ಪಾತಕೀ ಸೈನ್ಯವನ್ನು ಅಟ್ಟಾಡಿಸಿ ಹೊರಗಟ್ಟಿದ ಧೀಮಂತ ಹೋರಾಟಗಾರರ ನಾಡು ವಿಯೆಟ್ನಾಂನ ಕ್ರಾಂತಿಕಾರಿಗಳ ತಂಡ. ಅಮೆರಿಕ, ಫ್ರಾನ್ಸ್‌ಗಳ ಕುಮ್ಮಕ್ಕಿನೊಂದಿಗೆ ಮೊರಾಕ್ಕೊ ದೇಶದ



ರಾಜಾಡಳಿತದ ಆಕ್ರಮಣಗಳಿಗೆ ತುತ್ತಾಗಿ ತಮ್ಮ ದೇಶದ ಅಸ್ತಿತ್ವವನ್ನೇ ಕಳೆದುಕೊಂಡಿರುವ ಪಶ್ಚಿಮ ಸಹರಾ ದೇಶದ ಕೆಚ್ಚಿನ ಹೋರಾಟಗಾರರ ತಂಡ. ತಮ್ಮ ತಾಯಿ ನಾಡಿನ ಬಹು ಭಾಗವನ್ನು ನುಂಗಿ ಕುಳಿತಿರುವ ಇಸ್ರೆಲಿಗೆ ಜಾಗತಿಕ ವೇದಿಕೆಯಲ್ಲಿ ಛೀಮಾರಿ ಹಾಕಲು ಬಂದಿರುವ ಸಿರಿಯಾ ದೇಶದ ಜನರ ತಂಡ, ಜಗತ್ತಿನ ಎರಡನೇ ಆರ್ಥಿಕ ಶಕ್ತಿಯಾಗಿ ಎದ್ದು ನಿಂತು ಅಮೆರಿಕದ ಪ್ರಾಬಲ್ಯಕ್ಕೆ ತನ್ನದೇ ರೀತಿಯಲ್ಲಿ ಆತಂಕ ಒಡ್ಡಿರುವ ಚೀನಾ ಯುವಜನರ ತಂಡ. ಅಪಪ್ರಚಾರ ಅಡ್ಡಿ, ದಿಗ್ಬಂಧನದ ನಡುವೆಯೂ ಸಮಾಜವಾದಿ ಬಾವುಟವನ್ನು ಎತ್ತಿ ಹಿಡಿದಿರುವ ಉತ್ತರ ಕೊರಿಯಾ ಪ್ರತಿನಿಧಿಗಳ ತಂಡ, ಸಾಮ್ರಾಜ್ಯಶಾಹಿ ಸುಲಿಗೆಯ ನೊಗವನ್ನು ಮೊನ್ನೆ ಮೊನ್ನೆ ಕಳಚಿಕೊಂಡಿರುವ ನಮೀಬಿಯಾದ ತಂಡ. ದಶಕಗಳ ಕಾಲ ಬಿಳಿಯರು ಹೇರಿದ ಅಮಾನುಷ ವರ್ಣಬೇಧ ನೀತಿಯ ಅಪಮಾನ, ಮರ್ದನಗಳನ್ನು ಧಿಕ್ಕರಿಸಿ ನಿಂತ ದಕ್ಷಿಣ ಆಫ್ರಿಕದ ಪ್ರತಿನಿಧಿಗಳ ತಂಡ ...

ಕೊನೆಗೆ ಸಾಮ್ರಾಜ್ಯಶಾಹಿ ದೇಶಗಳಾದ ಅಮೆರಿಕ, ಫ್ರಾನ್ಸ್, ಜರ್ಮನಿ, ಇಂಗ್ಲೆಂಡ್‌ಗಳ ಯುವಜನರ ತಂಡಗಳು.. ತಾವು ಕಳೆದುಕೊಂಡ ಸಮಾಜವಾದಿ ವ್ಯವಸ್ಥೆಯ ಒಳಿತನ್ನು ನೆನೆಯುತ್ತಾ ಹೋರಾಟದ ಅಂಗಳಕ್ಕೆ ಧುಮುಕಿರುವ ರಷ್ಯಾ, ಜರ್ಮನಿ, ಪೋಲೆಂಡ್ ಯುವಜನರ ತಂಡಗಳು.. ಸಾಮ್ರಾಜ್ಯಶಾಹಿ ಕುತಂತ್ರ, ಪಿತೂರಿಗಳನ್ನು ಸಾಮ್ರಾಜ್ಯಶಾಹಿಪ್ರೇರಿತ ಆರ್ಥಿಕ ನೀತಿಗಳನ್ನು ಬುಡಮೇಲು ಮಾಡಿ ಅಮೆರಿಕದ ಮುಸುಡಿಗೆ ಗುದಿಯುತ್ತಿರುವ ವೆನೆಜುವೆಲಾ, ಸಾಮ್ರಾಜ್ಯಶಾಹಿ ಹೋರಾಟದ ಸ್ಪೂರ್ತಿ ಬಿಂದು ಕ್ಯೂಬಾದ ಕ್ರಾಂತಿಕಾರಿಗಳ ತಂಡ.. ಈ ಎಲ್ಲವುಗಳ ನಡುವೆ ದಿನೆ ದಿನೆ ಸಾಮ್ರಾಜ್ಯಶಾಹಿ ಪರವಾದ ನೀತಿಗಳತ್ತಲೇ ವಾಲುತ್ತಿರುವ ಭಾರತದ ಸರ್ಕಾರದ ವಿರುದ್ಧ ಸಾಮೂಹಿಕ ಆಂದೋಲನವನ್ನು ಹೊಸೆಯುತ್ತಿರುವ ಯುವಜನರ ತಂಡ,

> ದಕ್ಷಿಣ ಆಫ್ರಿಕಾದ ಪ್ರಟೋರಿಯಾ ನಗರದಲ್ಲಿ ಜರುಗಿದ ಸಾಮ್ರಾಜ್ಯಶಾಹಿ ವಿರೋಧಿ ವಿಶ್ವ ವಿದ್ಯಾಥಿ-ಯುವಜನೋತ್ಸವವು ವಿಶ್ವಶಾಂತಿ, ಮಾನವೀಯತೆ, ಸಮಾನತೆ, ಪ್ರಜಾಪ್ರಭುತ್ವದ ಆಶಯಗಳಿಗಾಗಿ ವಿಶ್ವದಾದ್ಯಂತ ನಡೆಯುತ್ತಿರುವ ಐತಿಹಾಸಿಕ ಹೋರಾಟಗಳ ಕೆನೆಪದರದಂತೆ ಕಂಗೊಳಿಸಿತು. ಅದರಲ್ಲಿಯೂ ಯುವಜನರ ಕಣ್ಣುಗಳಲ್ಲಿ ಕಂಡ ಹೊಸ ಜಗತ್ತಿನ ಕನಸುಗಳ ಬಣ್ಣ, ಯುದ್ಧ ದಾಳಿ, ಕ್ರೌರ್ಯಗಳಿಗೆ ಜಗ್ಗವು, ಮಣಿಯವು ಎನ್ನುವ ಹೋರಾಟದ ಕೆಚ್ಚು ಮರೆಯಲಾಗದಂಥದ್ದು.

ಬೀಸುವ ಬಾವುಟಗಳು, ಮೊಳಗುವ ಘೋಷಣೆಗಳು, ಸಾಮ್ರಾಜ್ಯಶಾಹಿಗೆ ಧಿಕ್ಕಾರಗಳು. ಮೆರವಣಿಗೆಯಲ್ಲಿ ತೇಲುತ್ತಾ ಸಾಗುವ ಚೇ, ಹೋ ಚಿ ಮಿನ್, ಕ್ಯಾಸ್ಟ್ರೋ, ಮಂಡೇಲ ಮುಂತಾದವರ ಚಿತ್ರಪಟಗಳು, ತಮ್ಮ ತಮ್ಮ ದೇಶಗಳ ಸಂಸ್ಕೃತಿ, ಕಲೆಯನ್ನು ಬಿಂಬಿಸುವ ಬಣ್ಣ ಬಣ್ಣದ ಚಿತ್ತಾರಗಳ ಉಡುಪುತೊಟ್ಟ ಕಲಾವಿದರು. ಅದು ಬರೀ ಮೆರವಣಿಗೆಯಲ್ಲ. ಹಾಡು ಕುಣಿತ, ಯುವಜನರ ಸಂಭ್ರಮ, ಮೊರೆತ. ಜೋಗದ ಜಲಪಾತದಂತೆ ಧುಮ್ಮಿಕ್ಕುವ ಯುವಜನರ ಉತ್ಸಾಹ.

ಉದ್ಘಾಟನಾ ಸಮಾರಂಭದ ಭಾಷಣಗಳು ಒಂದು ಬಗೆಯ ಸಾಂಕೇತಿಕ ಮಾತುಗಳಷ್ಟೆ. ನೇರ, ಸಂಕ್ಷಿಪ್ತ. ಸಾಂಸ್ಕೃತಿಕ ಅಭಿವ್ಯಕ್ತಿಯದೇ ಮೇಲುಗೈ. ದಕ್ಷಿಣ ಆಫ್ರಿಕಾದ ಜುಲು ಬುಡಕಟ್ಟುಜನರ ಜಾನಪದ ನೃತ್ಯಗಳು. ಬಾನಂಗಳದಲ್ಲಿ ದ. ಆಫ್ರಿಕಾದ ವೈಮಾನಿಕ ಪಡೆಯ ಹಾರಾಟ, ನರ್ತನ. ಮುಗಿಲಿಗೆ ಬಣ್ಣ ಬಣ್ಣದ ಧೂಳಿನ ಮೋಡಗಳನ್ನು ಮೇಲೆರಿಸುವ ಸಿಡಿಮದ್ದುಗಳ ಸಿಡಿತ. ಬಣ್ಣದ ಓಕುಳಿ. ಹೊಸ ಜಗತ್ತಿನ ಹೊಸ ಸಮಾಜದ ಕನಸು ಹೊತ್ತ ಯುವಕ, ಯುವತಿಯರ ಕಣ್ಣ ಬಣ್ಣಗಳಲ್ಲಿ ಬೆರೆತು ಅಲ್ಲಿ ಸೃಷ್ಟಿಯಾದದ್ದು ಕಾಮನ ಬಿಲ್ಲಿನ ಬಣ್ಣದ ಲೋಕ.

ವಿಶ್ವ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟ (WFDY)ನ ಅಧ್ಯಕ್ಷ ಟಿಯಾಗೋ ವೆಯೇರಾ, ಪ್ರಧಾನ ಕಾರ್ಯದರ್ಶಿ ಜೀಸಸ್ ಡಿ ಮೋರಾ ಅಂತರ ರಾಷ್ಟ್ರೀಯ ಉತ್ಸವದ ಆಶಯ, ಹಿನ್ನೆಲೆ, ಉದ್ದೇಶಗಳನ್ನು ವಿವರಿಸಿದರು. ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜೂಮಾ ಅವರು ಉತ್ಸವ ಉದ್ಘಾಟಿಸಿದರು. ಮೊದಲಿಗೆ ಫಿಡೆಲ್ ಕ್ಯಾಸ್ಟ್ರೋ ಅವರ ಲಿಖಿತ ಸಂದೇಶ. ನಂತರ ಜೂಮಾರ ಮಾತುಗಳು. ವರ್ಣಬೇಧ ನೀತಿಯ ಆಡಳಿತ ಹೋಗಿ ಕರಿಯರು ಗಳಿಸಿದ ಸ್ವಾತಂತ್ರ್ಯ ಜನರ ಆರ್ಥಿಕ ಸ್ವಾತಂತ್ರ್ಯವಾಗಿ ಬದಲಾಗಬೇಕಾದ ಅಗತ್ಯ. ಸದ್ಯ ದಕ್ಷಿಣ ಆಫ್ರಿಕ ಎದುರಿಸುತ್ತಿರುವ ನಿರುದ್ಯೋಗ, ಬಡತನ ಮುಂತಾದ ಸವಾಲುಗಳ ಕುರಿತು ಅವರು



ಮಾತನಾಡಿದರು. ದಕ್ಷಿಣ ಆಫ್ರಿಕದ ಸ್ವಾತಂತ್ರ್ಯ ಹೋರಾಟಕ್ಕೆ ಮಹಾತ್ಮಗಾಂಧಿ ನೀಡಿದ ಕೊಡುಗೆ, ಪ್ರೇರಣೆಯನ್ನು ಜೂಮಾ ಸ್ಮರಿಸಿದರು.

ದಕ್ಷಿಣ ಆಫಿಕಾದ ಯುವ ಕಮ್ಯುನಿಸ್ಟ್ ಲೀಗ್ ಹಾಗೂ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಮುಖಂಡರೂ ಆದ ಜ್ಯೂಲಿಯಸ್ ಮಲೇಮ ಅವರ ಮಾತುಗಳು ಯುವಜನರನ್ನು ಹುರಿದುಂಬಿಸಿ ಉತ್ಸಾಹ ತುಂಬಿದವು. ಕರಿಯ ಬಿಳಿಯರ ನಡುವಿನ ಅಸಮಾನತೆ, ಬಡತನ ನಿರ್ಮೂಲನೆಯ ಪ್ರಶ್ನೆ, ನಿರುದ್ಯೋಗ ಅವರ ಮಾತುಗಳ ಕೇಂದ್ರವಾಗಿತ್ತು. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ತೀವ್ರಗೊಳಿಸಬೇಕಾದ ಅಗತ್ಯತೆ ಕುರಿತು ಸಹ

ಪುಟ 16 ನೋಡಿ

ಯುವ ಬರಹಗಾರ ಡಾ.ವಿಠ್ಠಲಭಂಡಾರಿ ಚೇ ಚಿತ್ರ ಹೊತ್ತ ತಂಡದೊಂದಿಗೆ



ಬಿಹಾರ ಚುನಾವಣೆ : ಒಂದು ವಿಶ್ಲೇಷಣೆ



ಡಿಸೆಂಬರ್ 6-7 ಪಾಟ್ನಾದಲ್ಲಿ ಸಭೆ ಸೇರಿದ ಬಿಹಾರ ರಾಜ್ಯ ಸಮಿತಿ, ವಿಧಾನಸಭಾ ಚುನಾವಣೆ ಬಗ್ಗೆ ವಿಶ್ಲೇಷಣೆ ನಡೆಸಿತು. ಪಕ್ಷದ ಕೇಂದ್ರದಿಂದ ಪಾಲಿಟ್ ಬ್ಯೂರೋ ಸದಸ್ಯ ಎಸ್. ಆರ್. ಪಿಳ್ಳೆ, ಕೇಂದ್ರ ಸೆಕ್ರೇಟಾರಿಯೇಟ್ ಸದಸ್ಯ ಹನ್ನನ್ ಮೊಲ್ಲಾ ಭಾಗವಹಿಸಿದ್ದರು. ಚುನಾವಣಾ ವಿಶ್ಲೇಷಣೆಯ ಸಾರ ಇಲ್ಲಿದೆ, ನಿಮಗಾಗಿ


ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ವೇಳೆ ಎಡ ಪಕ್ಷಗಳ ಐಕ್ಯತೆ ಮತ್ತು ಸ್ಥಾನ ಹೊಂದಾಣಿಕೆ ಮೂಲಕ ಒಂದು ಪರ್ಯಾಯವನ್ನು ಜನತೆಯ ಮುಂದಿಡಲು ಪಕ್ಷ ಪ್ರಾಮಾಣಿಕ ಪ್ರಯತ್ನ ನಡೆಸಿತು ಎಂಬುದನ್ನು ಸಭೆ ಗಮನಿಸಿತು. ಸಿಪಿಐ ಮತ್ತು ಸಿಪಿಐ(ಎಂ) ಮಧ್ಯೆ ಸಂಪೂರ್ಣ ಸ್ಥಾನ ಹೊಂದಾಣಿಕೆ ಏರ್ಪಟ್ಟಿತ್ತು. ಬೇಗುಸರಾಯಿ ಯಿಂದ ಆರಂಭವಾದ ಉಭಯ ಪಕ್ಷಗಳ ಜಂಟಿ ಪ್ರಚಾರ ಕಾರ್ಯ ಉಳಿದ ಕೆಲವು ಕ್ಷೇತ್ರಗಳಲ್ಲೂ ಮುಂದುವರಿಯಿತು. ಇಷ್ಟಾದರೂ ಸಿಪಿಐ(ಎಂಎಲ್) ಜೊತೆ ಸಿಪಿಐ-ಸಿಪಿಐ(ಎಂ) ನಡುವಿನ ಸ್ಥಾನ ಹೊಂದಾಣಿಕೆ ಭಾಗಶಃವಾಗಿತ್ತು. ಸಿಪಿಐ(ಎಂ) ವಿರುದ್ಧ ಸಿಪಿಐ(ಎಂಎಲ್) ಏಳು ಸ್ಥಾನಗಳಲ್ಲಿ ಸ್ಪರ್ಧೆ ನಡೆಸಿದ್ದರೆ, ಸಿಪಿಐ ವಿರುದ್ಧ 17 ಕ್ಷೇತ್ರಗಳಲ್ಲಿ ಸ್ಪರ್ಧೆ ನಡೆಸಿತ್ತು. ಚುನಾವಣಾ ಪ್ರಕ್ರಿಯೆ ಆರಂಭವಾದ ನಂತರವೂ ಎಡಪಕ್ಷಗಳ ನಡುವೆ ಹೊಂದಾಣಿಕೆಯ ಸಮಸ್ಯೆ ಉಂಟಾಗಿತ್ತು. ಜಂಟಿ ಪತ್ರಿಕಾಗೋಷ್ಠಿ ಮತ್ತು ಜಂಟಿ ಮನವಿಯು ಹೊರತಾಗಿ, ತಳಮಟ್ಟದಲ್ಲಿ ಎಡ ಐಕ್ಯತೆಯನ್ನು ಬೆಸೆಯುವ ಹಾಗೂ ಐಕ್ಯ ಚುನಾವಣಾ ಪ್ರಚಾರ ಕಾರ್ಯ ನಡೆಸುವ ಯಾವುದೇ ಗಂಭೀರ ಪ್ರಯತ್ನ ಆಗಲಿಲ್ಲ. ಹಾಗಾಗಿ ಎಡಪಕ್ಷಗಳು ಒಂದಾಗಿ ಮುನ್ನಡೆಯುವ ಉತ್ತಮ ಸಂದೇಶ ಸಾರುವಲ್ಲಿ, ಜನತೆಯನ್ನು ತಲುಪಲು ಸಾಧ್ಯವಾಗಲಿಲ್ಲ. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಗಳಲ್ಲಿನ ಎಡ ಐಕ್ಯತೆಗೆ ವರ್ಗ ಹೋರಾಟದ ಹಾಗೂ ಸಾಮೂಹಿಕ ಹೋರಾಟದ ಸುದೀರ್ಘ ಇತಿಹಾಸ ಇದೆ. ಈ ಹಂತಕ್ಕೆ ಬಿಹಾರ ಇನ್ನೂ ತಲುಪಿಲ್ಲ.

ವಿವಿಧ ರಾಜಕೀಯ ಪಕ್ಷಗಳು ಸ್ಪರ್ಧಿಸಿದ ಸಂಖ್ಯೆ, ಗಳಿಸಿದ ಮತಗಳು ಮತ್ತು ಜಯಗಳಿಸಿದ ಸ್ಥಾನಗಳು, ಶೇಕಡಾವಾರು ಮತ ಗಳಿಕೆಯ ಕುರಿತ ವಿವರ ಇಲ್ಲಿದೆ.

ಎಡಪಕ್ಷಗಳ ಪೈಕಿ ಸಿಪಿಐ(ಎಂಎಲ್) 106 ಕ್ಷೇತ್ರಗಳಲ್ಲಿ ಸ್ಪರ್ಧೆ ನಡೆಸಿದೆ. ಸಿಪಿಐ 56ರಲ್ಲಿ ಮತ್ತು ಸಿಪಿಐ(ಎಂ) ಕೇವಲ 30 ಸ್ಥಾನಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಸಿಪಿಐ (ಎಂಎಲ್) ಏಳು ಕ್ಷೇತ್ರಗಳಲ್ಲಿ ಸಿಪಿಐ(ಎಂ) ವಿರುದ್ಧ ಅಭ್ಯರ್ಥಿಯನ್ನು ನಿಲ್ಲಿಸಿದೆ. ಈ ಏಳು ಸ್ಥಾನಗಳ ಪೈಕಿ ಆರರಲ್ಲಿ ಸಿಪಿಐ(ಎಂಎಲ್) ಸಿಪಿಐ(ಎಂ)ಗಿಂತ ಕಡಿಮೆ ಮತ ಗಳಿಸಿದೆ. ಇನ್ನು ಸಿಪಿಐ(ಎಂಎಲ್) 17 ಕ್ಷೇತ್ರಗಳಲ್ಲಿ ಸಿಪಿಐ ವಿರುದ್ಧ ಸ್ಪರ್ಧಿಸಿದೆ. ಈ 17 ಕ್ಷೇತ್ರಗಳಲ್ಲಿ ಸಿಪಿಐ 14 ಕ್ಷೇತ್ರಗಳಲ್ಲಿ ಸಿಪಿಐ(ಎಂಎಲ್)ಗಿಂತ ಹೆಚ್ಚಿನ ಮತ ಗಳಿಸಿದೆ. ಇದರಿಂದ ಸಿಪಿಐ(ಎಂಎಲ್)ನ ಜನಪ್ರಿಯತೆ ಎಷ್ಟು ಟೊಳ್ಳು ಎಂಬುದು ಸಾಬೀತಾಗಿದೆ. ಹಲವು ಕ್ಷೇತ್ರಗಳಲ್ಲಿ ಸಿಪಿಐ(ಎಂಎಲ್) ಎಡವಿರೋಧಿ ಅಪಪ್ರಚಾರ ದಲ್ಲಿ ತೊಡಗಿದ್ದ ಬಗ್ಗೆಯೂ ವರದಿಯಾಗಿದೆ. ಆ ಪಕ್ಷದ ಕೆಲವು ನಾಯಕರಂತೂ ಸಿಪಿಐ(ಎಂ) ಮತ್ತು ಸಿಪಿಐಯನ್ನು ಸೋಲಿಸುವುದೇ ಪ್ರಮುಖ ಗುರಿ ಎಂದು ಸಾರಿದ್ದರು. ಇತರ ಸಣ್ಣ ಎಡಪಕ್ಷಗಳಾದ ಎಸ್‌ಯುಸಿಐ-ಸಿ, ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್-ಸುಭಾಷ್ ಮತ್ತು ಎಂಸಿಪಿಐ ಒಟ್ಟು 12 ಸ್ಥಾನಗಳಲ್ಲಿ ಸ್ಪರ್ಧೆ ನಡೆಸಿದ್ದು, ಕೇವಲ 14,888 ಮತಗಳನ್ನು ಗಳಿಸಲಷ್ಟೇ ಶಕ್ತವಾಗಿವೆ.

ಚುನಾವಣಾ ಫಲಿತಾಂಶ

ಬಿಹಾರ ವಿಧಾನಸಭಾ ಚುನಾವಣೆಯ ಫಲಿತಾಂಶ ನಿತೀಶ್ ಕುಮಾರ್ ನೇತೃತ್ವದ ಜೆಡಿಯು-ಬಿಜೆಪಿ ಮೈತ್ರಿಕೂಟದ ಪರವಾಗಿ ನಿರ್ಣಾಯಕವಾಗಿ ಬಂದಿದೆ. ಈ ಮೈತ್ರಿಕೂಟ ನಿರೀಕ್ಷೆಗಿಂತಲೂ ಹೆಚ್ಚಿನ ಸ್ಥಾನಗಳಲ್ಲಿ ಜಯ ಗಳಿಸಿದೆ. 243 ಸದಸ್ಯ ಬಲದ ವಿಧಾನಸಭೆಯಲ್ಲಿ 206 ಸ್ಥಾನಗಳಲ್ಲಿ ಜಯ ಗಳಿಸುವುದು ಒಂದು ಭರ್ಜರಿ ಜನಾದೇಶವೂ ಆಗಿದೆ. ಸಂಸದೀಯ ಪ್ರಜಾಸತ್ತೆಯಲ್ಲಿ ಪ್ರತಿಪಕ್ಷಗಳ ಪಾತ್ರ ಇಂತಹ ಸಂದರ್ಭದಲ್ಲಿ ತೀರಾ ಸೀಮಿತವಾಗಿರುತ್ತವೆ. ಲಾಲೂ-ಪಾಸ್ವಾನ್ ಮೈತ್ರಿಕೂಟ ಇಲ್ಲಿ ದಯನೀಯ ಸೋಲು ಕಂಡಿದೆ. ಲಾಲೂ ಅವರ ಆರ್‌ಜೆಡಿ 22 ಸ್ಥಾನ ಗಳಿಸಿದ್ದರೆ ಪಾಸ್ವಾನ್ ಅವರ ಲೋಕಜನಶಕ್ತಿ ಕೇವಲ ಮೂರು ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಕಂಡಿದೆ. ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕನ ಸ್ಥಾನ



ಲಭಿಸಬೇಕಾದರೆ, ಅವರಿಗೆ ಒಟ್ಟು ಸದಸ್ಯ ಬಲದ ಕನಿಷ್ಠ ಶೇಕಡಾ 10ರಷ್ಟಾದರೂ ಬೆಂಬಲ ಅಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆರ್‌ಜೆಡಿಗೆ ಪ್ರತಿಪಕ್ಷ ನಾಯಕನ ಸ್ಥಾನ ಬೇಕಿದ್ದರೆ ಅದು ಆಡಳಿತಾರೂಢ ಪಕ್ಷದ ಮುಲಾಜಿಗೆ ಒಳಗಾಗಲೇಬೇಕಾದ ಅನಿವಾರ್ಯತೆ ಇದೆ. ಮಾಜಿ ಮುಖ್ಯಮಂತ್ರಿ ಹಾಗೂ ಲಾಲೂ ಪತ್ನಿ ರಾಬ್ರಿ ದೇವಿಯಂತೂ ಸ್ಪರ್ಧಿಸಿದ ಎರಡೂ ಕ್ಷೇತ್ರದಲ್ಲಿ ಸೋತು ಸುಣ್ಣವಾಗಿದ್ದಾರೆ. ದೇಶದ ಪ್ರಧಾನ ರಾಷ್ಟ್ರೀಯ ಪಕ್ಷವಾಗಿರುವ ಕಾಂಗ್ರೆಸ್‌ನ ಸದಸ್ಯ ಬಲ 9 ರಿಂದ ನಾಲ್ಕಕ್ಕೆ ಇಳಿದಿದೆ.

ಇದೇ ವೇಳೆ, ಈ ಬಾರಿಯ ಚುನಾವಣೆಯಲ್ಲಿ ಎಡಪಕ್ಷಗಳೂ ಭಾರೀ ಹಿನ್ನಡೆಯನ್ನು ಕಂಡಿವೆ. ಬೇಗುಸರಾಯಿ ಜಿಲ್ಲೆಯ ಬುಚ್ವಾರಾ ಕ್ಷೇತ್ರದಲ್ಲಿ ಸಿಪಿಐನ ಉಮೇದುವಾರ ಜಯಗಳಿಸಿರುವುದೊಂದೇ ಎಡಪಕ್ಷಗಳು ಗಳಿಸಿರುವ ಸ್ಥಾನ. ಇಲ್ಲಿ ತಳಮಟ್ಟದಲ್ಲಿ ಎಡ ಪಕ್ಷಗಳ ಕಾರ್ಯಕರ್ತರಲ್ಲಿ ಐಕ್ಯತೆ ಇತ್ತು ಎಂಬುದು ಗಮನಾರ್ಹ. ಹಿಂದಿನ ವಿಧಾನಸಭೆಯಲ್ಲಿ ಸಿಪಿಐ(ಎಂ) ಪ್ರತಿನಿಧಿಸಿದ್ದ ವಿಭೂತಿಪುರ (ಹಿಂದಿನ ಹೆಸರು ಸಮಷ್ಟಿಪುರ)ವನ್ನೂ ಈ ಬಾರಿ ಉಳಿಸಿಕೊಳ್ಳಲಾಗಲಿಲ್ಲ ಎಂಬುದು ವಿಷಾದದ ಸಂಗತಿ. ಕಳೆದ ವಿಧಾನಸಭೆಯಲ್ಲಿ ಐದು ಸದಸ್ಯರನ್ನು ಹೊಂದಿದ್ದ ಸಿಪಿಐ(ಎಂಎಲ್) ಈ ಬಾರಿ ಶೂನ್ಯ ಸಂಪಾದನೆ ಮಾಡಿಕೊಂಡು ಎಡಪಕ್ಷಗಳ ವೈಫಲ್ಯಕ್ಕೆ ತನ್ನ ಕಾಣಿಕೆಯನ್ನೂ ನೀಡಿತು.

ಬಿಜೆಪಿಯ ಶಾಸಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿರುವುದು ಜಾತ್ಯತೀತ ಶಕ್ತಿಗಳಿಗೆ ಒಂದು ಸವಾಲಾಗಿದೆ.

ಆದರೂ, ಶೇಕಡಾವಾರು ಮತಗಳ ಲೆಕ್ಕಾಚಾರ ನೋಡಿದರೆ ಜೆಡಿಯು-ಬಿಜೆಪಿ ಮೈತ್ರಿಕೂಟದ ಸಾಧನೆಯಲ್ಲಿ ಈ ಹೋಲಿಕೆ ಕಂಡುಬರುವುದಿಲ್ಲ. ಆಡಳಿತಾರೂಢ ಮೈತ್ರಿಕೂಟ 39.07 ಶೇಕಡಾ ಮತಗಳಿಸಿದೆ. ಆದರೆ, ವಿಧಾನಸಭೆಯ ಒಟ್ಟು ಸ್ಥಾನಗಳ ಸಂಖ್ಯೆಯಲ್ಲಿ ಶೇಕಡಾ 85ರಲ್ಲಿ ಗೆಲುವು ಸಾಧಿಸಿದೆ. 2005ರಲ್ಲಿ ಜೆಡಿಯು ಶೇ. 20.45 ಮತ್ತು ಬಿಜೆಪಿ ಶೇ. 15.65 ಪ್ರಮಾಣದಲ್ಲಿ ಮತಗಳನ್ನು ಗಳಿಸಿದ್ದವು. ಈ ಬಾರಿಯ ಚುನಾವಣೆಯಲ್ಲಿ ಮತಗಳಿಕೆಯಲ್ಲಿ ಅಲ್ಪ ಏರಿಕೆಯನ್ನು ಮಾತ್ರ ಈ ಎರಡೂ ಪಕ್ಷಗಳು ದಾಖಲಿಸಿವೆ. ಕಳೆದ ಬಾರಿಗೆ ಹೋಲಿಸಿದರೆ ಜೆಡಿಯು ಶೇ. 2.12 ಮತ್ತು ಬಿಜೆಪಿ 0.84ರಷ್ಟು ಹೆಚ್ಚಿಗೆ ಮತ ಗಳಿಸಿವೆ. ಆದರೆ, ಗಳಿಸಿದ ಸ್ಥಾನಗಳನ್ನು ನೋಡಿದರೆ, ಜೆಡಿಯು ಕಳೆದ ಬಾರಿ 88ರಲ್ಲಿ ಜಯಗಳಿಸಿದ್ದು, ಈ ಬಾರಿ 115 ಸ್ಥಾನಗಳನ್ನು ಬಾಚಿಕೊಂಡಿದೆ. ಬಿಜೆಪಿ ಕಳೆದ ಬಾರಿ 55 ಕ್ಷೇತ್ರಗಳಲ್ಲಿ ಗೆದ್ದಿದ್ದರೆ, ಈ ಬಾರಿ 91 ಸ್ಥಾನಗಳನ್ನು ಬಗಲಿಗೆ ಹಾಕಿಕೊಂಡಿದೆ. ಬಿಜೆಪಿಯ ಶಾಸಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿರುವುದು ಜಾತ್ಯತೀತ ಶಕ್ತಿಗಳಿಗೆ ಒಂದು ಸವಾಲಾಗಿದೆ.

ಆರ್‌ಜೆಡಿಯ ಮತಗಳಿಗೆ ಕಳೆದ ಬಾರಿಗಿಂತ ಶೇಕಡಾ 4.61ರಷ್ಟು ಕಡಿಮೆಯಾಗಿ ಮತಗಳಿಕೆಯ ಪ್ರಮಾಣ 18.84ಕ್ಕೆ ಕುಸಿದಿದೆ. ಪಾಸ್ವಾನ್ ಅವರ ಲೋಕಜನಶಕ್ತಿಯಂತೂ ಕಳೆದ ಬಾರಿಗಿಂತ ಶೇ. 4.26 ಕಡಿಮೆ ಗಳಿಸಿದ್ದು, ಈ ಬಾರಿ 6.74ರಷ್ಟು ಮತ ಗಳಿಸಿದೆ. ಈ ಎರಡೂ ಪಕ್ಷಗಳ ಮತಗಳಿಕೆಯಲ್ಲಿ ಒಟ್ಟು ಶೇಕಡಾ 9ರಷ್ಟು ಕುಸಿತ ಉಂಟಾಗಿದೆ. 2005ರಲ್ಲಿ 54 ಸ್ಥಾನಗಳಿಸಿದ್ದ ಆರ್‌ಜೆಡಿ-ಎಲ್‌ಜೆಪಿ ಮೈತ್ರಿಕೂಟ ಈ ಬಾರಿ 25 ಸ್ಥಾನಗಳಷ್ಟೇ ಗಳಿಸಲು ಶಕ್ತವಾಗಿದೆ.

243 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ ಮತಗಳಿಕೆ ಪ್ರಮಾಣ ಏನೋ ಹೆಚ್ಚಾಗಿದೆ. ಕಳೆದ ಬಾರಿ 6.09 ಇದ್ದ ಮತ ಪ್ರಮಾಣ ಈ ಬಾರಿ 8.37ಕ್ಕೆ ಹೆಚ್ಚಾಗಿದೆ. ಆದರೆ, ಗಳಿಸಿದ ಸ್ಥಾನಗಳ ಸಂಖ್ಯೆ ಅರ್ಧದಷ್ಟು ಕುಸಿತವಾಗಿದೆ.

ಎಡಪಕ್ಷಗಳ ಬಗ್ಗೆ ಗಮನಿಸಿದರೆ ಸಿಪಿಐ(ಎಂ) ಹೊರತುಪಡಿಸಿದರೆ ಉಳಿದೆಲ್ಲವೂ ಮತಗಳಿಕೆಯಲ್ಲಿ ಕುಸಿತ ಕಂಡಿವೆ. ಒಟ್ಟಾರೆ ಎಡಪಕ್ಷಗಳು ಶೇಕಡಾ 0.95ರಷ್ಟು ಮತ ಪ್ರಮಾಣದ ಕುಸಿತ ದಾಖಲಿಸಿವೆ.

ಬಹುಜನ ಸಮಾಜ ಪಕ್ಷ ಶೇ. 3.2ರಷ್ಟು ಮತಗಳಿಸಿದೆ. ಸಮಾಜವಾದಿ ಪಕ್ಷ ಶೇ. 0.55 ಮತ್ತು ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ ಶೇ 1.82 ಮತಗಳಿಸಿದೆ. ಈ ಮೂರು ಪಕ್ಷಗಳೂ ಒಂದೂ ಸ್ಥಾನದಲ್ಲೂ ಗೆಲುವು ಸಾಧಿಸಿಲ್ಲ. ಪಕ್ಷೇತರರು ಮಾತ್ರ ತಮ್ಮ ಮತ ಗಳಿಕೆ ಪ್ರಮಾಣವನ್ನು ಶೇಕಡಾ 4ರಷ್ಟು ವೃದ್ಧಿಸಿಕೊಂಡಿದ್ದಾರೆ. ಈ ಬಾರಿ 13 ಶೇಕಡಾ ಮತ ಗಳಿಸಿ ಆರು ಸ್ಥಾನಗಳಲ್ಲಿ ಜಯಭೇರಿ ಬಾರಿಸಿದ್ದಾರೆ.

ಎಡ ಐಕ್ಯತೆ

ಬಿಹಾರದಲ್ಲಿ ಎಡಪಕ್ಷಗಳು ಮೊದಲ ಬಾರಿಗೆ ಜೊತೆಯಾಗಿ ಚುನಾವಣೆಯನ್ನು ಎದುರಿಸಿದ್ದು 2009ರ ಲೋಕಸಭಾ ಚುನಾವಣೆಯಲ್ಲಿ. ಆದರೆ, ಜಾರ್ಖಂಡ್ ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆ ಸಿಪಿಐ ಆರ್‌ಜೆಡಿ ಜೊತೆ ಕೈಜೋಡಿಸಿತು. ಬಿಹಾರ ವಿಧಾನಸಭಾ ಚುನಾವಣೆ ಸನ್ನಿಹಿತವಾಗುತ್ತಿದ್ದಂತೆ ಸಿಪಿಐ(ಎಂ) ಸ್ಥಾನ ಹೊಂದಾಣಿಕೆ ಕುರಿತು ಸಿಪಿಐ ಜೊತೆಗೆ ಮಾತುಕತೆಗೆ ಮುಂದಾಯಿತು. ಆಗ ಸಿಪಿಐ ಆರ್‌ಜೆಡಿ ಜೊತೆ ಮೈತ್ರಿ ಮಾಡಿಕೊಳ್ಳುವ ನಿಟ್ಟಿನಲ್ಲಿ ಉತ್ಸುಕತೆ ತೋರಿಸಿತು. ಆದರೆ, ಈ ಪ್ರಸ್ತಾಪವನ್ನು ಸಿಪಿಐ(ಎಂ) ಆರಂಭದಿಂದಲೇ ತಿರಸ್ಕರಿಸಿತು. ದೀರ್ಘ ಕಾಲದ ಸಮಾಲೋಚನೆ ಬಳಿಕ ಸಿಪಿಐ ಕೊನೆಗೂ ಎಡಪಕ್ಷಗಳ ಜೊತೆ ಚುನಾವಣೆಯಲ್ಲಿ ಹೆಜ್ಜೆ ಹಾಕುವ ನಿರ್ಧಾರ ಕೈಗೊಂಡಿತು. ಇದೆಲ್ಲದರ ಮಧ್ಯೆ, ಸಿಪಿಐ(ಎಂಎಲ್) ಏಕಾಂಗಿಯಾಗಿ ಚುನಾವಣೆ ಎದುರಿಸುವ ತನ್ನ ನೀತಿಯನ್ನು ಕೈಬಿಡಲು ಇನ್ನಷ್ಟು ದೀರ್ಘ ಅವಧಿಯನ್ನು ತೆಗೆದುಕೊಂಡಿತು.

ನಿತೀಶ್ ಸರ್ಕಾರದ 13 ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ಪ್ರಕರಣ ಸಿಎಜಿ ವರದಿ ಮೂಲಕ ಬಯಲಾದಾಗ ಮತ್ತು ಜೆಡಿಯು-ಬಿಜೆಪಿ ವಿಧಾನಸಭೆಯಲ್ಲಿ ಪ್ರತಿಪಕ್ಷದ ಸದಸ್ಯರ ಮೇಲೆ ಹಲ್ಲೆ ನಡೆಸಿದಾಗ ಎಡಪಕ್ಷಗಳು ಒಂದಾಗಿ ರಾಜ್ಯಾದ್ಯಂತ ಜನಾಂದೋಲನ ನಡೆಸಿದ್ದವು. ಆ ಸಮಯದಲ್ಲೇ ಚುನಾವಣೆಯಲ್ಲಿ ಸ್ಥಾನ ಹೊಂದಾಣಿಕೆ ಕುರಿತು

ಪುಟ 14 ಕ್ಕೆ

ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಗೆ ಎಂಭತ್ತು ವಯಸ್ಸು ತುಂಬಿದ ಹಿನ್ನೆಲೆಯಲ್ಲಿ ಉಡುಪಿಯಲ್ಲಿ ದಿನಾಂಕ 10.12.2010 ರಿಂದ ಮೂರು ದಿನಗಳ ಕಾಲ ನಡೆಸಲಾದ ಅಭಿನಂದನಾ ಕಾರ್ಯಕ್ರಮವು ವಸ್ತುಶ: ಸಂಘ ಪರಿವಾರದ ಆಡಂಬರ ಮೆರೆಸಿದ ಕಾರ್ಯಕ್ರಮವೆನಿಸಿತೇ ಹೊರತು ಉಡುಪಿಯ ಸಾಮಾನ್ಯ ಜನತೆ ತಮ್ಮೂರ ಯತಿಯೊಬ್ಬರಿಗೆ ತೋರಿಸಿದ ಅಭಿಮಾನದ ದ್ಯೋತಕವೆನಿಸಿಕೊಳ್ಳಲಿಲ್ಲ.

ಸಂಘ ಪರಿವಾರದ ಅಬ್ಬರವೆನಿಸಿದ ಪೇಜಾವರ ಶ್ರೀಗಳ ಅಭಿನಂದನೆ !

ಅದಮಾರು ಶ್ರೀಪತಿ ಆಚಾರ್ಯ

ಉಡುಪಿಯ ಬಹುತೇಕ ಮಂದಿ ಸಮಾರಂಭದ ಗದ್ದಲಗಳಿಗೆ ಬೇಸತ್ತು ಮನೆಯಲ್ಲೇ ಉಳಿದು ಟಿ.ವಿ. ನೇರ ಪ್ರಸಾರ ನೋಡಿದರೆ, ಇನ್ನು ಕೆಲವರು ಇಷ್ಟೆಲ್ಲ ಗೌಜಿ ಗದ್ದಲ ಅಗತ್ಯವಿತ್ತೇ? ಎಂದು ಪ್ರತಿಕ್ರಿಯೆ ನೀಡಿದ್ದೂ ಇದೆ. ದಿನಾಂಕ 12.12.2010 ರ ಶೋಭಾಯಾತ್ರೆಯಲ್ಲಂತೂ ತಿರುಪತಿ ತಿರುಮಲ ದೇವಸ್ಥಾನದ ದಾಸ ಸಾಹಿತ್ಯ ಪ್ರಾಜೆಕ್ಟ್‌ಗೆ ನೊಂದಾಯಿತರಾಗಿದ್ದ 100 ಭಜನಾ ಮಂಡಳಿಗಳ 2000 ಮಂದಿ ಕನ್ನಡ, ತೆಲುಗು ಕೀರ್ತನಕಾರರು ಕೋಲಾಟವಾಡಿ ಕುಣಿದದ್ದೇ ಕುಣಿದದ್ದು. ಆದರೂ ಕನ್ನಡ, ತೆಲುಗು ಭಾಷಾ ಬಾಂಧವ್ಯದ ಸಂಕೇತವೆನಿಸಿದ ಈ ಕಾರ್ಯಕ್ರಮ ಮೆಚ್ಚಿಕೊಳ್ಳುವಂತಾದ್ದೇ ಎಂಬುದರಲ್ಲಿ ಅನುಮಾನವಿಲ್ಲ.

ಇನ್ನುಳಿದಂತೆ ಮೂರು ದಿನಗಳ ಕಾರ್ಯಕ್ರಮ ಕೇಸರಿ ಪಡೆಗಳ ಮೆರೆದಾಟಕ್ಕೇ ಮೀಸಲು! ಉಡುಪಿಯ ಎಂಟು ಮಠಾಧೀಶರಲ್ಲದೆ ಸುತ್ತೂರು ಮಠದ ಸ್ವಾಮಿಗಳು, ರವಿಶಂಕರ ಗುರೂಜಿ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ವಿವಿಧ ಸಮುದಾಯಗಳಿಗೆ ಸೇರಿದ ಮಠಾಧಿಪತಿಗಳ ಜೊತೆಗೆ ವಿಶ್ವ ಹಿಂದೂ ಪರಿಷತ್ತಿನ ಅಧ್ಯಕ್ಷ ಅಶೋಕ ಸಿಂಘಾಲ್, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಶಾಸಕರು, ಸಂಸದರು ಮತ್ತು ಸಂಘ ಪರಿವಾರದ ಹಿರಿ, ಮರಿ ನಾಯಕ ಗಣ ಒಟ್ಟುಗೂಡಿದ್ದ ಈ ಸಮಾರಂಭ ಸ್ವಾಮಿಗಳ ಅಭಿನಂದನೆಯೋ ಬಿಜೆಪಿಯ ಚುನಾವಣಾ ಪ್ರಚಾರವೋ ಎಂಬ ಸಂದೇಹವುಂಟುಮಾಡಿದ್ದರೆ ಆಶ್ಚರ್ಯವಿಲ್ಲ! ಕಾರ್ಯಕ್ರಮದ ಕೊನೆಯ ದಿನ ಕರ್ನಾಟಕದ ಮುಖ್ಯಮಂತ್ರಿ ಬಿ.ಎಸ್.ಯಡ್ಯೂರಪ್ಪ ಬಂದ ಮೇಲಂತೂ ಸಮಾರಂಭ ಪರಮಪಾವನವಾಯಿತು. **ವಿಶ್ವ ಹಿಂದೂ ಪರಿಷತ್‌ನ ಅಶೋಕ ಸಿಂಘಾಲ್ ಅಭಿನಂದನಾ ವೇದಿಕೆಯಲ್ಲೇ ಸೋನಿಯಾಗಾಂಧಿ ಹಿಂದೂ ಸಮಾಜವನ್ನು ಒಡೆಯುತ್ತಿದ್ದಾರೆ ಎಂದು ಆಪಾದಿಸಿರುವುದನ್ನು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳು ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗ ಯಾಕೆ ಗಮನಿಸಿಲ್ಲ ಎಂಬುದು ನಿಗೂಢವಾಗಿದೆ.** ಮೂರು ದಿನಗಳ ಕಾಲ ನಡೆದ ಎಲ್ಲ ಸಮಾರಂಭಗಳಲ್ಲಿ ಬಿಜೆಪಿ ಮತ್ತು ಸಂಘ ಪರಿವಾರದವರನ್ನಲ್ಲದೆ ಇತರ ಎಲ್ಲ ರಾಜಕೀಯ ಪಕ್ಷಗಳ ನಾಯಕರುಗಳ ಅನುಪಸ್ಥಿತಿ ಎದ್ದುಕಾಣುವಂತಿತ್ತು. ನೆಪಮಾತ್ರಕ್ಕೆ ಕಾರ್ಕಳದ ಶಾಸಕ ಕಾಂಗ್ರೆಸ್‌ನ ಗೋಪಾಲ ಭಂಡಾರಿ ಮತ್ತು ಯುವ ಉದ್ಯಮಿ ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್ ಸಾಂಕೇತಿಕವಾಗಿ ಒಂದು ದಿನ ಭಾಗವಹಿಸಿದುದು ಬಿಟ್ಟರೆ ಜೆಡಿಎಸ್ ಅಥವಾ ಕಾಂಗ್ರೆಸ್‌ನ ಯಾವ ನಾಯಕರೂ ಸಮಾರಂಭದಲ್ಲಿ ಪಾಲ್ಗೊಳ್ಳಲಿಲ್ಲ. (ಈ ಪಕ್ಷಗಳಲ್ಲಿ ಪೇಜಾವರ ಶ್ರೀಗಳ ಅನೇಕ ಅಭಿಮಾನಿಗಳಿದ್ದಾರೆ) ಇಡೀ ಕಾರ್ಯಕ್ರಮ ಬಿಜೆಪಿ ಮಯ ಆದುದನ್ನು ಕಂಡು ಒಬ್ಬ ಕಾಂಗ್ರೆಸ್ ನಾಯಕರು ಪೇಜಾವರ ಮಠಾಧೀಶರು ಮಠ ಬಿಟ್ಟು ರಾಜಕೀಯಕ್ಕೆ ಇಳಿಯಲಿ ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದು ಮಾರ್ಮಿಕವಾಗಿದೆ. ಸಮಾರಂಭದಲ್ಲಿ ಮಾತನಾಡಿದ ಪ್ರತಿಯೊಬ್ಬರೂ 'ಹಿಂದೂ ಸಮಾಜದ ಉದ್ಧಾರ, ಪ್ರಬಲ ಹಿಂದೂ ರಾಷ್ಟ್ರದ ನಿರ್ಮಾಣ, ಹಿಂದೂಗಳ ಜಾಗೃತಿ ಮುಂತಾದ ಸವಕಲು ಘೋಷಣೆಗಳನ್ನು ಬಳಸಿದ್ದೇ ಬಳಸಿದ್ದು! ಅದೇನಿದ್ದರೂ ಬೆಲೆಯೇರಿಕೆಯ ಹೊರೆಯಡಿ ತತ್ತರಿಸುತ್ತಿರುವ ಉಡುಪಿಯ ಸಾಮಾನ್ಯ ಜನ ಈ ಎಲ್ಲ ಅಟ್ಟಹಾಸಕ್ಕೆ ತೋರಿಸಿದ ಪ್ರತಿಕ್ರಿಯೆ ನೀರಸ!

ಒಂದಾನೊಂದು ಕಾಲದಲ್ಲಿ ಪೇಜಾವರ ಶ್ರೀಗಳೆಂದರೆ ಎಡಪಂಥೀಯರನ್ನೂ ಒಳಗೊಂಡು



ಎಲ್ಲರಿಗೂ ಅಪಾರ ಗೌರವ, ಅಭಿಮಾನಗಳಿದ್ದವು. ದಶಕಗಳ ಹಿಂದೆ ಅವಿಭಜಿತ ಕಮ್ಯೂನಿಸ್ಟ್ ಪಕ್ಷವಿದ್ದಾಗ ಮತ್ತು 1964 ರಲ್ಲಿ ಸಿಪಿಐ(ಎಂ) ಸ್ಥಾಪನೆಯಾದ ಮೇಲೂ ಕಮ್ಯೂನಿಸ್ಟರು ಉಡುಪಿಯ ರಥಬೀದಿಯಲ್ಲಿ ಪೇಜಾವರ ಮಠದ ಮುಂದುಗಡೆ ಕೆಂಬಾವುಟ ಏರಿಸಿ 'ರಶಿಯನ್ ಕ್ರಾಂತಿ ದಿನಾಚರಣೆ', 'ಮೇ ದಿನಾಚರಣೆ' ಅಥವಾ ಚುನಾವಣಾ ಪ್ರಚಾರ ಸಭೆಗಳನ್ನು ನಡೆಸುವುದು ಸಾಮಾನ್ಯವಾಗಿತ್ತು. ಇಂತಹ ಸಭೆಗಳಲ್ಲಿ ಧ್ವನಿವರ್ಧಕಕ್ಕೆ ಬೇಕಾಗಿದ್ದ ವಿದ್ಯುತ್ತನ್ನು ಸ್ವತಃ ಪೇಜಾವರ ಮಠದ ಸ್ವಾಮಿಗಳೇ ಪುಕ್ಕಟೆಯಾಗಿ ನೀಡುತ್ತಿದ್ದರು. ಒಂದು ರೀತಿಯ ಪ್ರಜಾಪ್ರಭುತ್ವವಾದಿಯಾಗಿದ್ದ ಶ್ರೀ ವಿಶ್ವೇಶ್ವರತೀರ್ಥರು ಪರಮತ ಸಹಿಷ್ಣುತೆಗೂ ಹೆಸರಾಗಿದ್ದರು. ಒಮ್ಮೆ ಹಿಂದೂಮತಕ್ಕೆ ಮತಾಂತರಗೊಳ್ಳುವೆನೆಂದು ಬಂದಿದ್ದ ಕ್ರೈಸ್ತರೊಬ್ಬರನ್ನು ಮನವೊಲಿಸಿ ನಿಮ್ಮ ಮತದಲ್ಲೇ ನೀವಿರುವುದು ಶ್ರೇಯಸ್ಕರವೆಂದು ಹೇಳಿ ವಾಪಾಸು ಕಳುಹಿಸಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಹೆಚ್ಚಿನ ಬ್ರಾಹ್ಮಣ ಯುವಕರಿಗೆ ಆರೆಸ್ಸೆಸ್ ಬಗ್ಗೆ ಒಲವಿದ್ದಂತೆ ಪೇಜಾವರ ಶ್ರೀಗಳಿಗೂ ಬಾಲ್ಯದಲ್ಲಿ ಅಂತಹ ಒಲವು ಇದ್ದಿರಬಹುದು. ಆದರೂ ಅವರನ್ನು ಆಗ ಕೋಮುವಾದಿ ಅನ್ನುವಂತಿರಲಿಲ್ಲ. ಇಂತಹ ಸ್ವಾಮಿಗಳನ್ನೂ ಹಿಂದುತ್ವ ಪಡೆಗಳ ಕುಲಗುರುವಾಗಿ, ಬಿಜೆಪಿಯ ಬಹಿರಂಗ ಬೆಂಬಲಿಗರಾಗಿ ಪರಿವರ್ತಿಸಿದ ಕೀರ್ತಿ ಬಹುಪಾಲು ಶ್ರೀಮತಿ ಇಂದಿರಾಗಾಂಧಿ 1975 ರಲ್ಲಿ ದೇಶದ ಮೇಲೆ ಹೇರಿದ್ದ ತುರ್ತು ಪರಿಸ್ಥಿತಿಗೆ ಸಲ್ಲುತ್ತದೆ. ಇಂದಿರಾಗಾಂಧಿಯ ತುರ್ತು ಪರಿಸ್ಥಿತಿ ಈ ದೇಶದ ಆತ್ಮವನ್ನು ಘಾಸಿಗೊಳಿಸಿದೆ; ಅದನ್ನು ಭ್ರಷ್ಟಗೊಳಿಸಿದೆ. ಮುಂಜಾನೆ ಮತ್ತು ಸಂಜೆ ಸೂರ್ಯ ನಮಸ್ಕಾರ, ಬಸ್ಕಿ ತೆಗೆಯುವುದು, ಉಟ್‌ಬೈಟ್ ಮತ್ತು ಕಬಡ್ಡಿ ಆಡಿಕೊಂಡಿದ್ದು ನಗೆ ಚಾಟಿಕೆಗೆ ಗುರಿಯಾಗಿದ್ದ ಸಂಘ ಪರಿವಾರದವರನ್ನು ಎರಡನೇ ಸ್ವಾತಂತ್ರ್ಯ ಹೋರಾಟದ 'ಹೀರೋ'ಗಳಾಗಿ ಬಿಂಬಿಸಿ ಅವರನ್ನು ಈ ಪರಿಯಲ್ಲಿ ಬೆಳೆಯಗೊಟ್ಟದ್ದು ಹಾಗೂ ಪೇಜಾವರ ಶ್ರೀಗಳಂತಹ ಅನೇಕ ಜನ ಸಂಘ ಪರಿವಾರದೊಂದಿಗೆ ತಮ್ಮನ್ನು ಬಹಿರಂಗವಾಗಿ ಗುರುತಿಸಿಕೊಳ್ಳುವಂತೆ ಮಾಡಿದ್ದೂ ಈ ವಿಷಮ ಪರಿಸ್ಥಿತಿಯೇ!

ಅಂದಿನಿಂದ ಇಂದಿನವರೆಗೆ ಪೇಜಾವರ ಶ್ರೀಗಳು ಕ್ರಮಿಸಿದ ದಾರಿ ಅವರ ಅಭಿಮಾನಿಗಳಲ್ಲಿ ನಿರಾಸೆಯುಂಟುಮಾಡಿರಬಹುದು. ಅವರ ಟೀಕಾಕಾರರನ್ನು ರೊಚ್ಚಿಗೆಬ್ಬಿಸಿರಬಹುದು. ಇನ್ನೂ ಅನೇಕ ಮಂದಿ ಈ ಬಡಕಲು ಕಾಯದ, ನಿಷ್ಠಾವಂತ ಯತಿಯ ಬಗ್ಗೆ ದಾಕ್ಷಿಣ್ಯದಿಂದ ಟೀಕೆ ಮಾಡದಿರಬಹುದು. ಆದರೂ ಅವರು ವಹಿಸುತ್ತಿರುವ ಪಾತ್ರವು ಮತಧರ್ಮಗಳು ವರ್ಗ ಸಮಾಜದಲ್ಲಿ ಎಂತಹ ಪಾತ್ರ ವಹಿಸುವವೆಂದು ಕಾರ್ಲ್ ಮಾರ್ಕ್ಸ್ ಹೇಳಿದ್ದಾರೋ ಅದೇ ದಾರಿಯಲ್ಲಿ ಇದೆ. ಸಮಾಜದಲ್ಲಿ ಅವರಿಗಿರುವ 'ಒಳ್ಳೆಯ ಇಮೇಜ್'ನಿಂದಾಗಿ ತುಳಿತಕ್ಕೊಳಗಾದ ಜನ 'ಮತ ಧರ್ಮಗಳ ಮಂಪರಿ'ನಲ್ಲೇ ಸದಾಕಾಲ ಇರುವಂತೆ ಮಾಡಲು ಅವರಿಗೆ ಸಾಧ್ಯವಾಗಿದೆ. ಅಷ್ಟೇ ಅಲ್ಲದೆ ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳವಾಗಿ ಬೇರು ಬಿಟ್ಟಿರುವ ಜಾತಿ ಪದ್ಧತಿ, ಜಾತಿ ತಾರತಮ್ಯ, ಮಡಿವಂತಿಕೆ ಮತ್ತು ಕರ್ಮಠತನಗಳ ಹಿನ್ನೆಲೆಯಲ್ಲಿ ಶತಮಾನಗಳ ಕಾಲ ಮೇಲು ಜಾತಿಯವರಿಂದ ಹೀನಾಯಕ್ಕೊಳಗಾಗಿರುವ ದುಡಿಯುವ ಜನ, ಮುಖ್ಯವಾಗಿ ಹಿಂದುಳಿದ ವರ್ಗ ಮತ್ತು ದಲಿತರು ಬ್ರಾಹ್ಮಣಶಾಹಿ ಮತ್ತು ಪುರೋಹಿತಶಾಹಿಯ ವಿರುದ್ಧ ಸೆಟೆದು ನಿಲ್ಲದಂತೆ ಮಾಡುವಲ್ಲಿ ಪೇಜಾವರ ಶ್ರೀಗಳು ಸಂಘ ಪರಿವಾರದ ಕೈಯಲ್ಲಿ ಒಂದು ಅದ್ಭುತ ಸಾಧನವಾಗಿದ್ದಾರೆ. ಅವರ 'ನಾವೆಲ್ಲ ಹಿಂದೂ, ನಾವೆಲ್ಲ ಒಂದು' ಅಥವಾ 'ಮಮಪ್ರಾಣಾಯ ಹಿಂದವ: ಮಮ ಧರ್ಮ ಸಮಾನತಾ' ಎಂಬ ಘೋಷಣೆಗಳು ಶೂದ್ರ ಹಾಗೂ ದಲಿತ ಜನರ ತಲೆಯಲ್ಲಿ ತಾವು ಬ್ರಾಹ್ಮಣರಿಗೆ ಸಮಾನರಾದೆವು ಎಂಬ ಭ್ರಮೆಯನ್ನು ಸೃಷ್ಟಿಸುವ ಮೂಲಕ ಅವರನ್ನು ಬ್ರಾಹ್ಮಣಶಾಹಿಯ ಆರಾಧಕರಾಗಿ ಮತ್ತು ಆ ಮೂಲಕ ಸಂಘ ಪರಿವಾರದ ಬೆಂಬಲಿಗರಾಗಿ ಪರಿವರ್ತಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಹೀಗಾಗಿ ಶ್ರೀಗಳವರು ಸಾವಿರಾರು ಜನ ಶೂದ್ರ, ಹಿಂದುಳಿದ ಮತ್ತು ದಲಿತ ವರ್ಗದವರು ಸೇರಿಸುವ 'ವಿರಾಟ್ ಹಿಂದೂ ಸಮಾಜೋತ್ಸವ'ಗಳಲ್ಲಿ ಅಸ್ಪೃಶ್ಯತೆಯ ವಿರುದ್ಧ ಮತ್ತು ಜಾತೀಯತೆ ವಿರುದ್ಧ ಗದ್ಗದ ಕಂಠದಲ್ಲಿ ಮಾತನಾಡಿ ಚಪ್ಪಾಳೆ ಗಿಟ್ಟಿಸುತ್ತಾರೆ. ಆ ಮೂಲಕ ಕ್ರಾಂತಿಕಾರಿ ಎನಿಸಿಕೊಳ್ಳುತ್ತಾರೆ. ಅದೇ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಶ್ರೀಕೃಷ್ಣ ಮಠದಲ್ಲಿ ನಡೆಯುವ ವಿಪ್ರರ ಸಭೆ ಸಮಾರಂಭಗಳಲ್ಲಿ, ವಿದ್ವತ್ ಗೋಷ್ಠಿಗಳಲ್ಲಿ 'ಅಸ್ಪೃಶ್ಯತೆ ತೊಲಗಬೇಕು, ಜಾತೀಯತೆ ತೊಲಗಬೇಕು' ಎಂಬ ಕರೆಯನ್ನು ಬಾಯಿ ತಪ್ಪಿಯೂ ನೀಡುವುದಿಲ್ಲ! ಹಾಗಾಗಿ ಪ್ರಬಲ ಹಿಂದೂ ರಾಷ್ಟ್ರದ ನಿರ್ಮಾಣ 'ಹಿಂದೂ ಸಮಾಜದ ಐಕ್ಯತೆ', 'ಹಿಂದೂಗಳ ಉದ್ಧಾರ' ಎಂಬ ಮಾತುಗಳ ನಿಜವಾದ ಅರ್ಥ ಏನು ಎಂಬುದು ಸ್ಪಷ್ಟವಾಗಿದೆ.

○

ಹೊಟ್ಟೆ ಹೊರಕರು

ಭೌತವಾದಿ ತತ್ವ ನಿರಾಕರಿಸಿದಂಥ
ಯಾವ ಧರ್ಮವ ಕೂಡ ನಂಬೋನೋಸಂತ
ಮಾನವೀಯ ಧರ್ಮವೇ ನಿಜ ಧರ್ಮವೆಂಬೆ
ಹೊಟ್ಟೆ ಹೊರಕರ ಬೊಗಳೆ ಎಂದಿಗೂ ನಂಬೆ

\- ವಿಡಂಬಾರಿ

ಹೊಸ ವರುಷ : ಅಭಯ ಆತಂಕ...

ಪುಟ 3 ರಿಂದ

ಪ್ರಶ್ನಿಸುವ, ಮಾಹಿತಿ ಕೇಳುವ ಹಕ್ಕು ಇದೆಯೇ ಎಂಬ ಪ್ರಶ್ನೆಯನ್ನು ಎತ್ತಲಾಗಿದೆ. ಸಂವಿಧಾನದ ಕಲಮು........ ರಾಜ್ಯಪಾಲರು ಬಯಸಿದರೆ ಇಂತಹ ಮಾಹಿತಿಗಳನ್ನು ಪಡೆಯಬಹುದು ಎಂಬ ಅಂಶವಿದೆ. ಹಾಗಾಗಿ ಮಾಹಿತಿ ಬಯಸುವುದು ತಪ್ಪಲ್ಲ.

ಆದರೆ ಸಂವಿಧಾನಾತ್ಮಕ ಪ್ರತಿನಿಧಿಯಾಗಿರುವ ರಾಜ್ಯಪಾಲರು ಮತ್ತು ಚುನಾಯಿತ ರಾಜ್ಯ ಸರ್ಕಾರದ ನಡುವೆ ಇಂತಹ ವ್ಯವಹಾರ ನಡೆಯುವಾಗ ಇದನ್ನೆಲ್ಲಾ ಬಹಿರಂಗಗೊಳಿಸಬೇಕು, ಎಲ್ಲವನ್ನೂ ಸಾರ್ವಜನಿಕಗೊಳಿಸಬೇಕೆ? ಎನ್ನುವುದೇ ಪ್ರಶ್ನೆ? ರಾಜ್ಯಪಾಲರು ಹೀಗೆ ನಿತ್ಯ ಮಾಧ್ಯಮಗಳಿಗೆ ಮಾಹಿತಿಗಳನ್ನು ಹೇಳಿದ ಕ್ರಮ ಸರಿಯಲ್ಲ. ಅಭಿಪ್ರಾಯಗಳ ವಿನಿಮಯ ಅದೇನಿದ್ದರೂ ಪರಸ್ಪರ ಆಂತರಿಕವಾಗಿ ನಡೆಯಬೇಕಾದ ಕ್ರಿಯೆ. ಯಾಕೆಂದರೆ ಈ ಯಾವುದೇ ರಾಜ್ಯ ಸರ್ಕಾರ ನಡೆಯುವುದು ರಾಜ್ಯಪಾಲರ ಹೆಸರಿನಲ್ಲಿಯೇ. ಅದು ಅವರ ಸರ್ಕಾರ, ಹೀಗಾಗಿ 'ನನ್ನ ಸರ್ಕಾರ'... ಎಂದೇ ರಾಜ್ಯಪಾಲರು ಸಂಭೋದಿಸುವರು.

ರಾಜ್ಯಪಾಲರು ಈ ಸರ್ಕಾರದ ಸೋಗಲಾಡಿತನ, ಕೋಮುವಾದ, ಭ್ರಷ್ಟತೆಗಳ ಬಗ್ಗೆ ಅಸಹನೆ ತೋರಿಸುತ್ತಲೇ ಬಂದಿದ್ದಾರೆ. ಆದರೆ ಹೇಳುವ ರೀತಿಗೆ ಒಂದು ಮಿತಿ ಇದೆ. ಅವರದೇ ಆದ ವಿಧಾನಗಳೂ ಪರಿಪಾಠಗಳೂ ಇವೆ ಎಂಬುದ್ನು ಗಮನಿಸಬೇಕು. ಇದರೊಟ್ಟಿಗೆ ಬಿಜೆಪಿಯು ಎಲ್ಲವನ್ನೂ ಭಂಡತನದಿಂದ ಸಮರ್ಥಿಸುತ್ತಾ ಬಾಯ್ಬಡಿಯುವ ಬದಲು ಸತ್ಯ ಸಂಗತಿ ಹೊರಗಿಡಬೇಕಿದೆ.

ಬಿಜೆಪಿ ವರ್ತಿಸುತ್ತಿರುವ ರೀತಿಯೇ ಅಪರಾಧಗಳನ್ನು, ಅಪರಾಧಿಗಳನ್ನು ಸಮರ್ಥಿಸಿಕೊಳ್ಳುತ್ತಾ ಒಪ್ಪಿಕೊಳ್ಳುತ್ತಿದೆ ಎಂಬುದೇ ಆಗಿದೆ.

ಮತದ ಪೆಟ್ಟಿಗೆಯೊಳಗೆ ಒಂದೊಂದು ಮುಷ್ಠಿ

ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್‌ಗಳ ಮೊದಲ ಹಂತದ ಚುನಾವಣೆಗಳು ಡಿಸೆಂಬರ್ 26ಕ್ಕೆ ಮುಗಿದಿದೆ. ಶುಕ್ರವಾರದ ಸಂಜೆಗೆ ಎರಡನೇ ಹಂತವು ಮುಗಿಯಲಿದೆ. ಜನವರಿ 1ರಂದು ಗುಲ್ಬರ್ಗಾದಲ್ಲಿ ಮಾತ್ರ. ಅಂದಾಗ ಮತದಾನ ಪೂರ್ಣವಾದಂತೆ.

ಎಷ್ಟೆಲ್ಲಾ ಗೊಂದಲ, ಗದ್ದಲಗಳ ನಡುವೆ ಮತದಾರರೇನು ಅಷ್ಟು ನಿರಾಶೆಯಾದಂತಿಲ್ಲ. ಜನಾಂದೋಲನ ಸೃಷ್ಟಿಸಿದ ರಾಜಕೀಯ ಜಾಗೃತಿ, ಆತ್ಮಸ್ಥೈರ್ಯ. ಅಭಿವ್ಯಕ್ತಿಯ ವಿಧಾನ. ಹೀಗಾಗಿಯೇ ಉಗ್ರಗಾಮಿಗಳ ಬೆದರಿಕೆ ಇದ್ದರೂ, ಮತದಾನದ ಬಹಿಷ್ಕಾರಕ್ಕೆ ಕೆಲವರು ಕರೆ ನೀಡಿದ್ದರೂ ಅದನ್ನೆಲ್ಲಾ ತಿರಸ್ಕರಿಸಿ ಜನರ ಮುನ್ನುಗ್ಗು ಏಕೆ? ಎಡರಂಗ ಪ್ರಭುತ್ವವನ್ನು ರಾಜಕೀಯ ಜಾಗೃತಿಗೆ ರಾಜಕೀಯ ಪ್ರಜಾಸತ್ತಾತ್ಮಕವನ್ನು ಬಳಸುವ ರೀತಿ.

ಈ ಬಾರಿ ಕರ್ನಾಟಕದಲ್ಲಿ ಎಲ್ಲಾ ಕಡೆಯ ಚುನಾವಣಾ ಅಕ್ರಮಗಳಲ್ಲಿ ಬಿಜೆಪಿಯದ್ದೇ ಕೇಳಿ ಬರುವ ಮಾತು, ಕಾರುಬಾರು. ಮೊದಲನೇ ಪಕ್ಷ! ಹೆಂಡ-ಸಾರಾಯಿಗಳ ಲಾರಿಗಳು, ಹಣಹೊತ್ತ ಕಾರುಗಳು, ಸಾಕಾಗದೆಂದು 108 ನಂಬರಿನ ಅಂಬುಲೆನ್ಸ್‌ಗಳು ರಾಜಾರೋಷ ವಾಗಿ ಹಣ-ಹೆಂಡ ಹಂಚುತ್ತಿದ್ದರೆ ಚುನಾವಣಾ ಆಯೋಗ, ಆಡಳಿತ ಮಾತ್ರ ಏನೂ ಆಗುತ್ತಿಲ್ಲವೆಂದು ಕೈಕಟ್ಟಿ ಕುಳಿತಿದೆ. ಒಟ್ಟು 500 ಕೋಟಿ ರೂಪಾಯಿಗಳ ವ್ಯವಹಾರವಂತೆ! ದೂರುಗಳಿಗೆ



ಕವಡೆ ಕಿಮ್ಮತ್ತಿಲ್ಲ. ಅಕ್ರಮ, ಹಗರಣ, ಜನದ್ರೋಹಿ; ಆಡಳಿತವನ್ನು ಹೇಗಾದರೂ ಉಳಿಸಿಕೊಳ್ಳುವ ಭಂಡ ಕಸರತ್ತು ಬಿಜೆಪಿಗೆ. ಹಾಗಾಗಿ ಖೊಟ್ಟಿ ಮತದಾನವೂ, ಬೋಗಸ್ ಮತದಾರರ ಸೃಷ್ಟಿಯೂ. ಇಲ್ಲಿ ಗೆದ್ದರೆ ತಮ್ಮ ಪಾತಕಗಳಿಗೆ ಜನರ ಅಂಗೀಕಾರವಿದೆಯೆಂದು ಹೇಳಬಹುದಲ್ಲ.

ಕಾಂಗ್ರೆಸ್‌ನ ಪ್ರತಿರೋಧ ಇಲ್ಲಿ ಸಾಮಾನ್ಯ. ಅದೂ ಅವಲಂಬಿಸಿದ್ದು ಮೇಲಿನ ಕ್ರಮಗಳೇ ಅವರಿಗೆ. ಜನ ಮನ ಗೆಲ್ಲುವ ಕೆಲಸವಾದರೂ ಎಲ್ಲಿದೆ? ಅಂತೂ ಈಗ ಎಲ್ಲರ ಚಿತ್ತ ಫಲಿತಾಂಶದತ್ತ. ಜನ ಹಾಕಿದ ಪ್ರತಿಯೊಂದು ಓಟು ಆಳುವವರಿಗೆ 'ಹಾಕಿದ ಏಟೇ? ಎಡಶಕ್ತಿಗಳು, ಜಾತ್ಯಾತೀತ, ಪ್ರಗತಿಪರರು ಮುನ್ನಡಿ ಸಾಧಿಸಿಯಾರೇ? ಜನವರಿ 4 ರವರೆಗೂ ಕದನ ಕುತೂಹಲ, ಅದು ಜನ ಹೇಳಲಿರುವ ಪಾಠ!

ಈಗಲೂ ಪ್ರಜಾಪ್ರಭುತ್ವದ ಒಂದು ಮಹತ್ವ ಅವಕಾಶ-ಹಕ್ಕನ್ನು ಚಲಾಯಿಸುವ ರಾಜಕೀಯ ಇಚ್ಛಾಶಕ್ತಿ ಜೀವಂತವಾಗಿದೆ. ಕೆಲವೆಡೆ ಸಮಸ್ಯೆಗಳು ತೀವ್ರವಾಗಿ-ಜನಪ್ರತಿನಿದಿಗಳು, ಮುಖ್ಯವಾಗಿ ಸರ್ಕಾರ ಕಡೆಗಣಿಸಿರುವಲ್ಲಿ ಮತದಾನದ ಬಹಿಷ್ಕಾರದಂತಹ ತೀರ್ಮಾನವನ್ನು ಕೆಲವು ಹಳ್ಳಿಗಳಲ್ಲಿ ಕೈಗೊಂಡಿದ್ದಾರೆ. ಬಳಿಕಯಂಥದೋ ಭರವಸೆ ಮೇಲೆ ಮತ್ತೆ ಮತದಾನಕ್ಕಿಳಿದಿದ್ದಾರೆ. ಇಂತಹ ಪ್ರಸಂಗಗಳು ತೀರಾ ವಿರಳವಾಗಿದ್ದರೂ ಜನರ ಅಸಹನೆ, ಪ್ರತಿಭಟನೆ ಅಧಿಕಾರರೂಢ ಪಕ್ಷಗಳ ಮುಖಕ್ಕೆ ರಾಚಬಲ್ಲುದು. ಅದನ್ನು ಗ್ರಹಿಸಿ, ತಿದ್ದುಕೊಳ್ಳುವ ಛಾತಿ ಅವರಿಗಿದೆಯೇ ಎಂಬುದೇ ಪ್ರಶ್ನೆ.

ಮತದಾನ ಸರಾಸರಿ ರಾಜ್ಯದಲ್ಲಿ ಶೇ.62.5 ಬೆಂಗಳೂರು ನಗರ ಶೇ.48.4 ಇದು ಕನಿಷ್ಠ, ಬೆಂಗಳೂರು ಗ್ರಾಮಾಂತರ ಶೇ.80 ನೀರಸ, ನಿರಾಶೆ, ಅತ್ಯುತ್ಸಾಹ ಹಾಗೆ ಕಾಣುವ ಚಿತ್ರ. ಇದರಲ್ಲಿ ಕೆಲವು ಪ್ರಶ್ನೆ ಅನುಮಾನಗಳು ಇವೆ. ಉದಾಹರಣೆಗೆ ಬೆಂಗಳೂರು ಗ್ರಾಮಾಂತರದ ಹೊಸಕೋಟೆಯಲ್ಲಿ ಸುಮಾರು 85ರಷ್ಟು. ಮಧ್ಯಾಹ್ನದವರೆಗೂ ನೀರಸವಿದ್ದ ಹಳ್ಳಿಗಳಲ್ಲಿ ಸಂಜೆಗೆ ಭರ್ಜರಿ ಮತದಾನ! ಇದು ಸಚಿವ ಬಚ್ಚೇಗೌಡರ ಕರಾಮತ್ತು. ಯಾವಾಗಲೂ ಇದ್ದಂತೆ ಹಲವೆಡೆ ಮಾರಾಮಾರಿ.

ತ್ರಿಪುರಾದಲ್ಲಿ ಕೆಲವೆಡೆ ಶೇ.100ರಷ್ಟು ಮತದಾನ, ಏನಿಲ್ಲವೆಂದರೂ 85 ರಿಂದ 95ರವರೆಗೂ! ಅಲ್ಲಿ ಭಯವಿಲ್ಲದೆ ಮುಕ್ತ ಮತದಾನ ಸಾಧ್ಯವಾದುದು ಜನರಲ್ಲಿ ಕಮ್ಯೂನಿಸ್ಟ್ ಪಕ್ಷ, ಪ್ರಜಾಸತ್ತಾತ್ಮಕ

○

ತ್ರಿಪುರ : ಸ್ಥಳೀಯ ಸಂಸ್ಥೆಗಳಲ್ಲಿ ಅದ್ಭುತ ಜಯ : ಅಭಿನಂದನೆ

ಪುರಸಭೆಯ ಚುನಾವಣೆಗಳಲ್ಲಿ ಭಾರೀ ಪ್ರಮಾಣದಲ್ಲಿ ವಿಜಯ ಸಾಧಿಸಿರುವುದಕ್ಕೆ ತ್ರಿಪುರಾದ ಸಿಪಿಐ(ಎಂ) ಹಾಗೂ ಎಡರಂಗವನ್ನು ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಹಾರ್ದಿಕವಾಗಿ ಅಭಿನಂದಿಸಿದೆ. 15 ನಗರ ಪಂಚಾಯತ್‌ಗಳಲ್ಲಿ 13 ರನ್ನು ಎಡರಂಗ ಗೆದ್ದಿದೆ. ಅಲ್ಲದೇ 35 ಸ್ಥಾನಗಳಲ್ಲಿ 28 ನ್ನು ತನ್ನದಾಗಿಸಿಕೊಳ್ಳುವ ಮೂಲಕ ಅಗರ್ತಲಾ ಮುನ್ಸಿಪಾಲಿಟಿಯ ಮೇಲಿದ್ದ ತನ್ನ ಹಿಡಿತವನ್ನು ಎಡರಂಗ ಪುನಃ ನಗರ ಪಂಚಾಯತ್ ಹಾಗೂ ಮುನ್ಸಿಪಾಲಿಟಿ ಚುನಾವಣೆಗಳಲ್ಲಿ ಎಡರಂಗವು ಶೇ.81 ರಷ್ಟು ಸ್ಥಾನಗಳನ್ನು ಪಡೆದು ಭರ್ಜರಿ ವಿಜಯ ಪತಾಕೆ ಹಾರಿಸಿದೆ.

ಇಂತಹ ನಿರ್ಣಾಯಕ ಗೆಲುವು ಸಿಪಿಐ(ಎಂ) ಮತ್ತು ಎಡರಂಗದ ಮೇಲೆ ಜನತೆ ಇರಿಸಿದೆ. ದೃಢ ನಂಬಿಕೆಯ ಪ್ರತೀಕವೆಂದು ಸಿಪಿಐ(ಎಂ) ಪಿ.ಬಿ. ತಿಳಿಸಿದೆ.

ರಾಜಕೀಯ ಸ್ವಾಮಿ

ರಾಜಕಾರಣಿ ಆಗಿ ಮಠದೊಳದ ಸ್ವಾಮಿ
ಅಲೆಯುತಿಹ ಬಲ್ಲಿರಾ ಊರೂರು ದೋಮಿ
ಮಠ ಗುಡಿಯ ಚಾತುರ್ವರ್ಣ ಎಂದೆಂಬ ಮಾರಿ
ಊರೊಳಗೆ ನುಗ್ಗಿಸಲು ಪೂರ್ವ ತಯಾರಿ

- ವಿಡಂಬಾರಿ

ಕೃಷ್ಣ ನೀರು ಹಂಚಿಕೆ ...

ಪುಟ 3 ರಿಂದ

ಹೋದೀತೆಂಬ ಅಂಶವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಬಹುತೇಕವಾಗಿ ರಾಜ್ಯದಲ್ಲಿ ಅಧಿಕಾರ ನಡೆಸಿದ ಬಹುತೇಕ ಪಕ್ಷಗಳ ಸರ್ಕಾರಗಳದ್ದು ಇಂತಹದ್ದೇ ರಾಜಕೀಯ ಇಚ್ಛಾಶಕ್ತಿ ಇಲ್ಲದ ನಿರ್ಲಕ್ಷ್ಯದ ನಡತೆಯೇ. ಕಾವೇರಿ ನೀರಿನ ಸರಿಸುಮಾರು ಮೂರರಷ್ಟು ಹೆಚ್ಚು ನೀರು ಲಭ್ಯವಾಗುವ ಕೃಷ್ಣೆಯ ಬಗ್ಗೆ ಹಿಂದಿನ ಸರ್ಕಾರಗಳು ಹಣ ನೀಡಿ ಜಾರಿ ಮಾಡುವಲ್ಲಿ ನಿರ್ಲಕ್ಷ್ಯ, ತಾರತಮ್ಯ ವೆಸಗಿಲಾಗುತ್ತಿದೆಯೆಂದು ಆರೋಪಿಸಿದ್ದು ಇದೆ.

ಕೃಷ್ಣೆಯ ನೀರಿನ ಬಳಕೆ ಕುರಿತು ಅವಿಭಜಿತ ಕಮ್ಯೂನಿಸ್ಟ್ ಪಕ್ಷ ಹಾಗೂ ನಂತರ ಸಿಪಿಐ(ಎಂ) ನೇತೃತ್ವದಲ್ಲಿ ಹಲವಾರು ಹೋರಾಟಗಳು ನಡೆದಿವೆ.

ಈ ಹಿಂದೆ ಏನೆಲ್ಲಾ ಸಂಭವಿಸಿರಲಿ ಈಗಲಾದರೂ ಅತ್ಯಂತ ಗಮನಾರ್ಹ, ಆದ್ಯತೆಯನ್ನಾಗಿ ಪರಿಗಣಿಸಿ ಅಗತ್ಯವಿರುವ ಹಣವನ್ನು ಮೀಸಲಿರಿಸಿ ಕಾಮಗಾರಿಗಳನ್ನು ಸಮಾರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕು. ಇದು ರಾಜ್ಯದ ಹಾಗೂ ರಾಷ್ಟ್ರದ ಜನತೆಯ ಪ್ರಗತಿಗೆ ಅವಶ್ಯಕವಾದುದು.

ಇವುಗಳ ಜೊತೆಗೆ ಬಯಲು ಸೀಮೆಯ ಹಲವು ಜಿಲ್ಲೆಗಳ ಜನರ ಕುಡಿವ ನೀರಿಗಾಗಿ, ಕೃಷಿಗಾಗಿ ಈ ನೀರು ಬಳಸುವಂತಹ ಒತ್ತಾಸೆಗಳನ್ನು ಪರಿಗಣಿಸಿ ಸೂಕ್ತ ಹೆಜ್ಜೆ ಇರಿಸಬೇಕು. ಅಣೆಕಟ್ಟಿನ ಎತ್ತರ ಹೆಚ್ಚಿಸುವುದರಿಂದ ಹಿನ್ನೀರಿನಲ್ಲಿ ನೂರಾರು ಗ್ರಾಮಗಳು ಅಂದರೆ ಜನರ ಕೃಷಿ, ಮನೆ, ಆಸ್ತಿಪಾಸ್ತಿಗಳು ಮುಳುಗಡೆಯಾಗಿ ಅಕ್ಷರಶಃ ಮುಳ್ಳುಕಂಟಿಗಳ ಬಯಲಿಗೆ ದೂಡಲಾಗುತ್ತದೆ. ರಾಜ್ಯದ ದೇಶದ ಹಿತಕ್ಕಾಗಿ ಎಲ್ಲವನ್ನು ಕಳೆದುಕೊಳ್ಳಲಿರುವ ಈ ಜನ ಸಮುದಾಯಗಳಿಗೆ ಸೂಕ್ತವಾದ ಪುನರ್ ವಸತಿ ಕಲ್ಪಿಸುವುದು ಸರ್ಕಾರಗಳ ಆದ್ಯ ಕರ್ತವ್ಯ.

ನೆಲ, ಜಲದಂತಹ ಪ್ರಶ್ನೆಗಳಲ್ಲಿ ಹಲವಾರು ಸಮಸ್ಯೆಗಳು ಉಳಿದಿರುವು ದಾದರೂ ನಾವೆಲ್ಲಾ ಒಂದೇ ದೇಶದ, ಭಾರತದ ಒಕ್ಕೂಟದ ರಾಜ್ಯಗಳು ಎಂಬುದನ್ನು ಎಂದೂ ಮರೆಯಬಾರದು. ಅಗಾಧ ನಿರೀಕ್ಷೆಗಳ ಎದುರಿನಲ್ಲಿ ಲಭ್ಯವಿರುವುದನ್ನು ಹಂಚಿಕೊಂಡು ಸಹಬಾಳ್ವೆಯಿಂದ ಬದುಕಬೇಕು. ಜನತೆಯ ಒಗ್ಗಟ್ಟು, ಶಾಂತಿ-ಸಹಬಾಳ್ವೆ, ಪ್ರಗತಿಗೆ ಧಕ್ಕೆ ತರುವ ಯಾವ ಕ್ರಮಗಳು ಅಪಾಯಕಾರಿಯೇ. ಆದ್ದರಿಂದಲೇ ಉಭಯ ರಾಜ್ಯಗಳು ಸೌಹಾರ್ದಯುತ ವಾತಾವರಣ ವನ್ನು ಜನರ ನಡುವೆ ಸೃಷ್ಟಿಸಿ ಕಾಪಾಡಬೇಕು.

ಆದ್ದರಿಂದ ಇನ್ನಾದರೂ ವಿಳಂಬಿಸುವ ಕಾಲವಿದಲ್ಲ. ರಾಜ್ಯದ ಬಿಜೆಪಿ ಸರ್ಕಾರ ಈಗಲಾದರೂ ಬೊಕ್ಕಸದ ಹಣವನ್ನು ಲೂಟಿ ಮಾಡುವುದರತ್ತಲೇ ಕೇಂದ್ರೀಕರಿಸದೇ ಸದ್ವಿನಿಯೋಗ ಮಾಡಲು ಮುಂದಾಗಬೇಕು. ಸಂಪನ್ಮೂಲ ಕ್ರೋಢೀಕರಿಸಬೇಕು. ಎಲ್ಲರಿಗೂ ಬೇಕಿರುವುದು ಜನತೆಯ ಅಭಿವೃದ್ಧಿ, ಅಧಿಕಾರಸ್ಥರ ಸ್ವ ಅಭಿವೃದ್ಧಿ ಅಲ್ಲ ಎಂಬುದನ್ನು ನೆನಪಿಡಬೇಕು. ಈ ಹಿನ್ನೆಲೆಯಲ್ಲಿ ಸರ್ವಪಕ್ಷಗಳ, ವಿವಿಧ ಸಂಘಟನೆ, ತಜ್ಞರ ಸಭೆಯನ್ನು ಮುಖ್ಯಮಂತ್ರಿಗಳು ಕರೆಯಬೇಕು.

...ಹಾರ ಬೆಲೆಯುಬ್ಬರ ಮತ್ತೆ ...ರಡಂಕಿಗೆ : ...ಮಾರು ಕಟ್ಟೆ ಪರ ಧೋರಣೆಗಳ ...ಷ್ಪರಿ...ಣಾಮ

...ಹಾರ ಬೆ...ಯುಬ್ಬರ, ಹಣದುಬ್ಬರ ಎರಡೂ ...ಳಿಯುತ್ತಿವೆ, ಇದು ತಮ್ಮ ಕ್ರಮಗಳ ಪರಿಣಾಮ ...ಂದು ಯುಪಿಎ-2 ಸರಕಾರ ಬೆನ್ನು ...ಟ್ಟಿಕೊಳ್ಳುತ್ತಿರುವಾಗಲೇ ಆಹಾರ ಬೆಲೆಯುಬ್ಬರ ಮತ್ತೆ ...ರಡಂಕಿಗೆ ಏರಿದೆ. ನವೆಂಬರ್ ತಿಂಗಳಲ್ಲಿ 7.48 ...ೀ.ಕ್ಕೆ ಇಳಿದಿದ್ದ ಏರಿಕೆ ದರ ಡಿಸೆಂಬರ್ 18ರ ...ಾರಾಂತ್ಯದಲ್ಲಿ 14.44ಶೇ.ಕ್ಕೆ ಏರಿದೆ. ಪೆಟ್ರೋಲ್ ...ರ ಏರಿಕೆಗಳ ಪ್ರಭಾವ ಕಾಣುವ ಮೊದಲೇ ...ಂಭವಿಸಿರುವ ಏರಿಕೆಯಿದು. ಕಳೆದ ವರ್ಷದ ...ೂನೆಯಲ್ಲಿ ಆಹಾರ ಬೆಲೆಯುಬ್ಬರ ದರ 21.19ಶೇ. ...ತ್ತು. ಈ 14.44ಶೇ. ಅಂತಹ ವಿಪರೀತ ಏರಿಕೆಯ ...ಮೇಲಿನ ಏರಿಕೆ ಎಂಬುದನ್ನು ಗಮನಿಸಬೇಕು. ಈರುಳ್ಳಿ ...ಬೆಲೆಗಳಲ್ಲಿ ಈ ವರ್ಷ 39.66ಶೇ, ಅಕ್ಕಿ ಬೆಲೆಗಳಲ್ಲಿ ...29.26ಶೇ., ಹಣ್ಣುಗಳ ಬೆಲೆಗಳಲ್ಲಿ 21.97ಶೇ., ...ಾಲಿನ ಬೆಲೆಗಳಲ್ಲಿ 17.75ಶೇ. ಮತ್ತು ತರಕಾರಿ ...ಬೆಲೆಗಳಲ್ಲಿ 15.54 ಶೇ. ಏರಿಕೆಯಾಗಿದೆಯಂತೆ. ಇವೆಲ್ಲ ...ೇವಲ ಅಂಕಿ-ಅಂಶಗಳ ಸರ್ಕಸ್ ಅಲ್ಲ, ...ಜವಾಗಿಯೂ ಬೆಲೆಯೇರಿಕೆಗಳಾಗಿವೆ ಎಂದು ಈ ...ಾರಿ ಹಣಕಾಸು ಮಂತ್ರಿಗಳೂ ಒಪ್ಪಿಕೊಂಡಿದ್ದಾರೆ!

ಈರುಳ್ಳಿ ಬೆಲೆಗಳ ಏರಿಕೆಯಿಂದ ಪ್ರಧಾನಿಗಳೂ ...ಆತಂಕಗೊಂಡಿದ್ದಾರೆ ಎನ್ನಲಾಯಿತು. ಆದರೆ ಅದರ ...ಬೆಲೆಗಳ ಹತೋಟಿ ಕುರಿತಂತೆ ಯುಪಿಎ ಸರಕಾರದ ...ವಿವಿಧ ಇಲಾಖೆಗಳ ನಡುವೆಯೇ ...ಭಿನ್ನಾಭಿಪ್ರಯಗಳಿವೆಯಂತೆ- ಉದಾ: ಈರುಳ್ಳಿ ...ಆಮದು ಮಾಡಿಕೊಳ್ಳಬೇಕೇ ಬೇಡವೇ ಎಂದು. ...ಸೆಪ್ಟಂಬರ್ 2010 ರಿಂದ ಈರುಳ್ಳಿ ರಫ್ತುದಾರರಿಗೆ ...ಸಬ್ಸಿಡಿ ಆರಂಭಿಸಲಾಯಿತು. ಇದರಿಂದ ಈರುಳ್ಳಿ ...ರಫ್ತು 26ಶೇ. ಹೆಚ್ಚಿ ಆಂತರಿಕ ಮಾರುಕಟ್ಟೆಯಲ್ಲಿ ಕೊರತೆ ಉಂಟಾದಾಗ ಈಗ ಈರುಳ್ಳಿ ಆಮದು ಮಾಡಿಕೊಳ್ಳುವವರಿಗೆ ನೆರವು ನೀಡಲಾಗುತ್ತಿದೆ, ಅದರ ಮೇಲಿನ ಸುಂಕಗಳನ್ನು ತೆಗೆದು. ಈ ರೀತಿ ಮಾರುಕಟ್ಟೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಆಟವಾಡುವವರ ಪರವಾದ ನೀತಿಗಳಿಂದಾಗಿಯೇ ಯುಪಿಎ-2 ಸರಕಾರ ಆಹಾರ ಬೆಲೆಯೇರಿಕೆಗಳನ್ನು ತಡೆಯುವಲ್ಲಿ ವಿಫಲವಾಗಿದೆ ಎಂಬುದು ತಜ್ಞರ ಅಭಿಪ್ರಾಯ.


ಕೃಪೆ: ಪ್ರಜಾವಾಣಿ

ಈ ಹಿಂದೆ ಸಕ್ಕರೆಯ ವಿಷಯದಲ್ಲೂ ಹೀಗೆಯೇ ಆಯಿತು. ಸಕ್ಕರೆಯನ್ನು ರಫ್ತು ಮಾಡಿದರೆ ಆಂತರಿಕ ಮಾರುಕಟ್ಟೆಯಲ್ಲಿ ಕೊರತೆ ಉಂಟಾಗಬಹುದೆಂಬ ಭಯವಿದ್ದರೂ ದೊಡ್ಡ ಸಕ್ಕರೆ ಕಂಪನಿಗಳಿಗೆ ರಫ್ತು ಸಬ್ಸಿಡಿ ಕೊಡಲಾಯಿತು. ಕೊರತೆ ಉಂಟಾದಾಗ ಆಮದು ಸಬ್ಸಿಡಿ ಕೊಟ್ಟು ಆಗಲೂ ದೊಡ್ಡ ಸಕ್ಕರೆ ಕಂಪನಿಗಳು ಭಾರೀ ಪ್ರಮಾಣದಲ್ಲಿ ಹಣ ಮಾಡಲು ಅವಕಾಶ ನೀಡಲಾಯಿತು.

ಯುಪಿಎ-2 ಸರಕಾರದ ಧೋರಣೆಗಳಿಂದಾಗಿ ದೊಡ್ಡ-ದೊಡ್ಡ ವ್ಯಾಪಾರೀ ಕಂಪನಿಗಳು ಮತ್ತು ಕಳ್ಳ ದಾಸ್ತಾನುಗಾರರು ಅಪಾರ ಲಾಭ ಮಾಡಿಕೊಳ್ಳುತ್ತಿದ್ದರೆ, ಜನಸಾಮಾನ್ಯರನ್ನು ವಿಪರೀತ ಬೆಲೆಗಳ ಮೂಲಕ ಲೂಟಿ ಮಾಡಲಾಗುತ್ತಿದೆ.

ಈ ನಡುವೆ ರೈಲ್ವೇ ಇಲಾಖೆ ಸಂಸತ್ತಿನ ಚಳಿಗಾಲದ ಅಧಿವೇಶನವನ್ನು ಕತ್ತಲಲ್ಲಿಟ್ಟು ಗುಟ್ಟಿನಲ್ಲಿ ಒಂದು ಸುತ್ತೋಲೆಯ ಮೂಲಕ ಸಕ್ಕರೆ, ಉಪ್ಪು, ಪೆಟ್ರೋಲಿಯಂ ಉತ್ಪನ್ನಗಳು, ಕಬ್ಬಿಣ, ಕಲ್ಲಿದ್ದಲು, ಸಿಮೆಂಟ್ ಇತ್ಯಾದಿ ಪ್ರಮುಖ ಸರಕುಗಳ ಸಾಗಾಣಿಕೆ ದರವನ್ನು ಹೆಚ್ಚಿಸಿದೆಯೆಂದು ತಿಳಿದು ಬಂದಿದೆ. ಅಂದರೆ ಯುಪಿಎ-2 ಪಾಲುದಾರ ತೃಣಮೂಲ ಕಾಂಗ್ರೆಸಿನ ಮುಖ್ಯಸ್ಥೆ ದಿಲ್ಲಿಯಲ್ಲಿ ಬೆಲೆಯೇರಿಕೆಗೆ ತುಪ್ಪ ಸುರಿಯುತ್ತಲೇ ಕೊಲ್ಕತಾದಲ್ಲಿ ಬೆಲೆಯೇರಿಕೆಯ ವಿರುದ್ಧ ಗುಡುಗುವ ನಾಟಕವಾಡುತ್ತಿದ್ದಾರೆ!

★

ಮಾಲಕರ ಅಗತ್ಯಗಳಿಗೆ ಸ್ಪಂದಿಸುವ ಪ್ರಧಾನಿ


43ನೇ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ) ಯನ್ನು ಉದ್ಘಾಟಿಸುತ್ತಾ ಯುಪಿಎ ಸರಕಾರದ ಪ್ರಧಾನ ಮಂತ್ರಿಗಳು 'ಶ್ರಮ ಮಾರುಕಟ್ಟೆಯಲ್ಲಿ ಉದ್ಯೋಗಾವಕಾಶಗಳ ಬೆಳವಣಿಗೆಗೆ ಅಡ್ಡಿಯುಂಟುಮಾಡುವ ಕಠಿಣತೆಗಳಿಗೆ ಕಾರ್ಮಿಕ ಕಾನೂನುಗಳ ಕೊಡುಗೆಯೂ ಇರುವ ಸಾಧ್ಯತೆಯಿದೆ. ಅವನ್ನು ನಿವಾರಿಸಲಾಗುವುದು' ಎಂದು ಭರವಸೆ ಕೊಟ್ಟರು. ಈ ಭರವಸೆ ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಸಬೇಕು ಎಂದು ಸದಾ ಗೋಗರೆಯುವ ಮಾಲಕರರಿಗೆ ಎಂಬುದು ಸ್ಪಷ್ಟ. ಏಕೆಂದರೆ ದೇಶದ ಶ್ರಮ ಮಾರುಕಟ್ಟೆಯಲ್ಲಿ 94ಶೇ.ದಷ್ಟು ಅಸಂಘಟಿತ ವಲಯದಲ್ಲಿದೆ. ಇಲ್ಲಿ ಈ ಮಾಲಕರು ಯಾವುದೇ ಕಾರ್ಮಿಕ ಕಾನೂನುಗಳನ್ನು ಪಾಲಿಸುತ್ತಿಲ್ಲ ಎಂಬುದು ಅರ್ಥಶಾಸ್ತ್ರಜ್ಞ ಪ್ರಧಾನಿಗೆ ತಿಳಿಯದ ವಿಷಯವೇನಲ್ಲ. ಅದನ್ನು ಅವರು ಉಪೇಕ್ಷಿಸಿದ್ದರಿಂದಲೇ ಇಂತಹ ಭರವಸೆ ಹೊಮ್ಮಿದೆ. ಸಪ್ಟಂಬರ್ 7ರಂದು 10 ಕೋಟಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರದಲ್ಲಿ ಎತ್ತಿದ ಐದು ಬೇಡಿಕೆಗಳ ಮೇಲೆ ಅವರಿಂದ ಯಾವ ಭರವಸೆಯೂ ಬರಲಿಲ್ಲ.

★

2009ರಲ್ಲೂ 17,368 ರೈತರ ಆತ್ಮಹತ್ಯೆ

ಯುಪಿಎ-2 ಸರಕಾರದ ಮೊದಲ ವರ್ಷದಲ್ಲಿ

ಪುಟ 15 ಕ್ಕೆ



125 ವರ್ಷದ ಕಾಂಗ್ರೆಸ್ : ಮಾತು ಮತ್ತು ಕೃತಿಯಲ್ಲಿ ಎಷ್ಟೊಂದು ಅಂತರ !

'ಆಮ್ ಆದ್ಮಿ'ಯಿಂದ ದೂರ ಸರಿದು ದೊಡ್ಡ ಬಂಡವಾಳಶಾಹಿಯ ಸಾಧನವಾಗಿ ತುಕ್ಕು ಹತ್ತಿಸಿಕೊಳ್ಳುತ್ತಿರುವ ಪರಿಣಾಮ

ಭ್ರಷ್ಟಾಚಾರದ ಹಗರಣಗಳು ಯುಪಿಎ-2 ಸರಕಾರವನ್ನು ಎಲ್ಲಾ ದಿಕ್ಕುಗಳಿಂದಲೂ ಕಂಗೆಡಿಸುತ್ತಿರುವ ಸಂದರ್ಭದಲ್ಲಿ ಆ ಸರಕಾರಕ್ಕೆ ನೇತೃತ್ವ ನೀಡುತ್ತಿರುವ ಪಕ್ಷದ ಅಖಿಲ ಭಾರತ (ಎಐಸಿಸಿ) ಪ್ಲೀನರಿ ಅಧಿವೇಶನ ರಾಜಧಾನಿಯ ಸಮೀಪದ ಬುರಾರಿಯಲ್ಲಿ ನಡೆದಿದೆ. ಭ್ರಷ್ಟಾಚಾರವಲ್ಲದೆ, ನಿರಂತರ ಬೆಲೆಯೇರಿಕೆ, ಕೊನೆಗಾಣದ ಕೃಷಿ ಬಿಕ್ಕಟ್ಟಿನಿಂದ ದೇಶವನ್ನು ಹೊರತರುವಲ್ಲಿ ವಿಫಲವಾಗಿ 2009ರ ವಿಜಯೋಲ್ಲಾಸ ಒಂದೇ ವರ್ಷದಲ್ಲಿ ಮಾಯವಾಗಿ 'ಆಮ್ ಆದ್ಮಿ' ಮಂತ್ರ ಅರ್ಥ ಕಳಕೊಂಡಿರುವಂತೆ ಕಾಣುತ್ತಿರುವುದರಿಂದ ಈ ಅಧಿವೇಶನದಲ್ಲಿ ಆತ್ಮರಕ್ಷಣೆಗೆ ಆಕ್ರಮಣವೇ ಒಳ್ಳೆಯ ದಾರಿ ಎಂದು ಕಾಂಗ್ರೆಸ್ ಪಕ್ಷ ನಿರ್ಧರಿಸಿದಂತಿತ್ತು.

ಯುಪಿಎ ಸರಕಾರದ ಆಶ್ರಯದಲ್ಲಿ ಬೆಳೆದ ದೊಡ್ಡ ಉದ್ಯಮಿಗಳು ಮತ್ತು ಸರಕಾರದ ನಡುವಿನ ಕೂಟದಿಂದಾಗಿ ಕಾಂಗ್ರೆಸ್ ಪಕ್ಷ ಭ್ರಷ್ಟಾಚಾರದ ಹಗರಣಗಳಲ್ಲಿ ಸಿಲುಕಿಕೊಂಡಿದೆ ಎಂಬ ಅರಿವು ಅದಕ್ಕಿನ್ನೂ ಬಂದಂತೆ ಕಾಣುತ್ತಿಲ್ಲ. ತನ್ನ ಸರಕಾರದ ಮಂತ್ರಿಗಳು ಕಾರ್ಪೊರೇಟ್‌ಗಳ ಹಿತಾಸಕ್ತಿಗಳನ್ನು ಪ್ರೋತ್ಸಾಹಿಸಿ, ದೊಡ್ಡ ಉದ್ಯಮಿಗಳಿಂದ ಅದಕ್ಕೆ ಪ್ರತಿಫಲ ಪಡೆಯುವುದರಲ್ಲಿ 125 ವರ್ಷಗಳ ಈ ಪಕ್ಷಕ್ಕೆ ತಪ್ಪೇನೂ ಕಾಣಿಸುತ್ತಿಲ್ಲ.

ಈ ಎಐಸಿಸಿ ಅಧಿವೇಶನದ ರಾಜಕೀಯ ಮತ್ತು ಆರ್ಥಿಕ ನಿರ್ಣಯಗಳು ಅದೊಂದು ಸೋಶಲ್ ಡೆಮಾಕ್ರೆಟಿಕ್ ಪಕ್ಷ ಎಂದು ಚಿತ್ರಿಸಲು ಪ್ರಯತ್ನಿಸಿವೆ. ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಯ ಮಾತುಗಳು, ಕೆಲಸದ ಹಕ್ಕು, ಶಿಕ್ಷಣದ ಹಕ್ಕು, ಆಹಾರದ ಹಕ್ಕು ಮುಂತಾದವುಗಳು ಈ ನಿರ್ಣಯಗಳಲ್ಲಿ ರಾರಾಜಿಸುತ್ತಿವೆ. ಆದರೆ ಮಾತು-ಕೃತಿಗಳಲ್ಲಿ ಅಂತರ ಎದ್ದು ಕಾಣುತ್ತಿದೆ.

ದೇಶಾದ್ಯಂತ ರೈತರ ಜಮೀನನ್ನು ಕಸಿದುಕೊಳ್ಳಲು ಕಾರ್ಪೊರೇಟುಗಳಿಗೆ, ಗಣಿ ಕಂಪನಿಗಳಿಗೆ ನೆರವಾಗುತ್ತಿರುವಾಗ ಉಳುವವನೇ ಹೊಲದೊಡೆಯನಾಗಿದ್ದಾನೆ ಎನ್ನುತ್ತದೆ ಈ ನಿರ್ಣಯ!

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಮೊಟಕುಗೊಳಿಸುತ್ತಿದ್ದರೂ ಆಹಾರದ ಹಕ್ಕಿನ ಮಾತಿದೆ.

ಶಿಕ್ಷಣವನ್ನು ವ್ಯಾಪಾರೀಕರಿಸಿ, ಖಾಸಗೀಕರಿಸಿ ಉಳ್ಳವರಿಗೆ ಮೀಸಲುಗೊಳಿಸುತ್ತಿದ್ದರೂ ಶಿಕ್ಷಣದ ಹಕ್ಕಿನ ಮಾತಿದೆ.

ಸಾರ್ವಜನಿಕ ವಲಯದಲ್ಲಿ ಅತ್ಯಂತ ಲಾಭದಾಯಕವಾಗಿರುವ ಘಟಕಗಳ ಶೇರುಗಳನ್ನು ಮಾರುತ್ತ, ಸರಕಾರದ ಪಾಲು 51ಶೇ, ಇದ್ದರೆ ಸಾಕು, ಸರಕಾರದ ಹತೋಟಿ ಇರುತ್ತದೆ ಎಂದು ಜನಗಳನ್ನು ತಪ್ಪುದಾರಿಗೆಳೆಯುತ್ತಿದ್ದರೂ ನಿರ್ಣಯದಲ್ಲಿ ಸಾರ್ವಜನಿಕ ವಲಯಕ್ಕೆ ಪ್ರಧಾನ ಪಾತ್ರ ಎನ್ನಲಾಗಿದೆ!

ವಿಕಿಲೀಕ್ಸ್ ಬಯಲು ಮಾಡಿದ ಅಮೆರಿಕನ್ ರಾಯಭಾರ ಕಚೇರಿಯ ಕೇಬಲ್‌ಗಳು ಭಾರತ ಈಗ ಅಮೆರಿಕನ್ ಪ್ರಭಾವ ವಲಯದೊಳಗೆ ಸಿಲುಕಿಕೊಂಡಿದೆ ಎಂದು ಅಮೆರಿಕನ್ ಆಳುವ ಮಂದಿ ಸಂತಸ ಪಡುತ್ತಿರುವುದನ್ನು ತೋರಿಸಿರುವಾಗ 'ಮೂರನೇ ಜಗತ್ತಿನ ದೇಶಗಳಿಗೆ, ಏಶ್ಯ, ಆಫ್ರಿಕಾದ ವಿಮೋಚನಾ ಆಂದೋಲನಕ್ಕೆ ಮುಂಚೂಣಿಯಲ್ಲಿ ನಿಂತು ನೀಡಿದ ನೇತೃತ್ವ 21 ನೇ ಶತಮಾನದಲ್ಲಿ ಒಂದು ಸಮತ್ವಪೂರ್ಣ ವಿಶ್ವ ವ್ಯವಸ್ಥೆಗಾಗಿ ನೇತೃತ್ವವಾಗಿ ಅರಳಿದೆ' ಎನ್ನಲಾಗಿದೆ!

ನವ-ಉದಾರವಾದಿ ನೀತಿಗಳು ಮತ್ತು ಸಾಮ್ರಾಜ್ಯಶಾಹಿ-ಪರ ವಿದೇಶಾಂಗ ನೀತಿಯಲ್ಲಿ ಬಿಜೆಪಿಯೊಡನೆ ಅದು ತಾದಾತ್ಮ್ಯವನ್ನು ಹೊಂದಿದ್ದರೂ ಯುಪಿಎ ವಿರುದ್ಧ ಎಡಪಕ್ಷಗಳು ಬಿಜೆಪಿಯೊಂದಿಗೆ ಕೈಜೋಡಿಸಿವೆ ಎಂದಿದೆ ಈ ಎಐಸಿಸಿ ರಾಜಕೀಯ ನಿರ್ಣಯ! (ಯುಪಿಎ-ಎನ್‌ಡಿಎ ಗಳ ಕಾಂಗ್ರೆಸ್-ಬಿಜೆಪಿಗಳ ಈ ತಾದಾತ್ಮ್ಯ ಭ್ರಷ್ಟಾಚಾರ ನಡೆಸುವಲ್ಲೂ, ನಂತರ ಅದರ ವಿರುದ್ಧ 'ಹೋರಾಟ'ದ ಬಡಾಯಿಯಲ್ಲೂ ಮುಂದುವರೆದಿದೆ. ಎಐಸಿಸಿ ಅಧಿವೇಶನವೂ ಭ್ರಷ್ಟಾಚಾರದ ವಿರುದ್ಧ ಹೋರಾಟದ ಮಾತಾಡಿದ್ದರೆ, ಬೆಂಗಳೂರಿನಲ್ಲಿ ಬಿಜೆಪಿಯ ಕೃಪಾಪೋಷಣೆಯಲ್ಲಿ ನಡೆದ ಎಬಿವಿಪಿ ಅಧಿವೇಶನದಲ್ಲಿಯೂ ಅಂತಹುದೇ 'ಕಹಳೆ' ಕೇಳಬಂದಿರುವುದು ಕಾಕತಾಳೀಯವಾಗಿರಲಿಕ್ಕಿಲ್ಲ.)

ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ(ಡಿಸೆಂಬರ್ 22, 2010) ಹೇಳಿರುವಂತೆ, ಕಾಂಗ್ರೆಸ್ ಪಕ್ಷ ಸ್ಥಾಪನೆಗೊಂಡು 125 ವರ್ಷಗಳು ಪೂರ್ಣಗೊಳ್ಳುತ್ತಿರುವಾಗ ಅದು ಅವನತಿಯ ಲಕ್ಷಣಗಳನ್ನು ಪ್ರದರ್ಶಿಸುತ್ತಿದೆ. 'ಆಮ್ ಆದ್ಮಿ'ಯ ಸಮಸ್ಯೆಗಳು, ಪ್ರಶ್ನೆಗಳಿಂದ ದೂರ ಸರಿದು ಅಧಿಕಾರ ಮತ್ತು ಸವಲತ್ತುಗಳಿಗಾಗಿ ದೊಡ್ಡ ಬಂಡವಾಳಶಾಹಿಯ ಒಂದು ಸಾಧನವಾಗುತ್ತಿರುವುದರ ಪರಿಣಾಮವಾಗಿ ಆ ಪಕ್ಷಕ್ಕೆ ತುಕ್ಕು ಹಿಡಿಯುತ್ತಿರುವುದರ ಲಕ್ಷಣಗಳಿವು.

ಟಾಗೋರ್ ಚಲನಚಿತ್ರೋತ್ಸವ...

ಪುಟ 6ರಿಂದ

ಮಾನವೀಯತೆಯೊಂದಿಗೆ ಸ್ತ್ರೀ ಸಂವೇದನೆಯನ್ನು ಹೊಂದಿವೆ. ಸಂವೇದನೆಗಳೇ ನಶಿಸುತ್ತಿರುವ ಇಂದಿನ ಕಾಲಘಟ್ಟದಲ್ಲಿ ಟಾಗೋರರ ಬರಹಗಳು ಹೆಚ್ಚು ಅರ್ಥಪೂರ್ಣ ಎನಿಸಿವೆ" ಎಂದು ನುಡಿದರು.

ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಖ್ಯಾತ ರಂಗನಿರ್ದೇಶಕ ಸಿ.ಬಸವಲಿಂಗಯ್ಯ ಮಾತನಾಡಿ, ಸಿನಿಮಾ ನಿಜವಾದ ಅರ್ಥದಲ್ಲಿ ಜಾತ್ಯಾತೀತತೆಯನ್ನು ಪ್ರತಿಪಾದಿಸಿದೆ; ಸ್ಪೃಶ್ಯ ಅಸ್ಪೃಶ್ಯ ಭಾವ ತೊಡೆದುಹಾಕಿ, ಮುಕ್ತ ವಿಶ್ವವಿದ್ಯಾಲಯವಾಗಿ ಜನರಿಗೆ ಶಿಕ್ಷಣ ನೀಡುತ್ತಿದೆ ಎಂದು ಅಭಿಪ್ರಾಯಪಟ್ಟರು.

ಟಾಗೋರರ ಕಥೆಗಳನ್ನಾಧರಿಸಿದ 4 ಚಲನಚಿತ್ರಗಳಲ್ಲಿ ಒಂದನ್ನು ಮೊದಲ ದಿನವೂ, ಮೂರನ್ನು ಎರಡನೆಯ ದಿನವೂ ಪ್ರದರ್ಶಿಸಲಾಯಿತು. ಪ್ರತಿ ಚಲನಚಿತ್ರ ಪ್ರದರ್ಶನದ ಅನಂತರ ನಮ್ಮ ನಾಡಿನ ಖ್ಯಾತ ಚಿಂತಕರೂ ಸಿನಿಮಾ ಮಾಧ್ಯಮದ ವಿಮರ್ಶಕರೂ ಆದ ವಸಂತ ಬನ್ನಾಡಿ, .ಕೆ.ಫಣಿರಾಜ್ ಮತ್ತು ಜಿ.ಪರಮೇಶ್ವರ್ ಅವರು ಸಂವಾದದ ಮೂಲಕ ಪ್ರೇಕ್ಷಕರಿಗೆ ಚಲನಚಿತ್ರಗಳ ವಿಶ್ಲೇಷಣೆ ನಡೆಸಿಕೊಟ್ಟರು. ಚಾರುಲತಾ, ಕಾಬೂಲಿವಾಲಾ, ತೀನ್ ಕನ್ಯಾ ಮತ್ತು ಘರೇ ಬೈರೇ ಚಿತ್ರಗಳ ವಿಶ್ಲೇಷಣೆಯನ್ನು ಕ್ರಮವಾಗಿ ವಸಂತ ಬನ್ನಾಡಿ, ಜಿ.ಪರಮೇಶ್ವರ, ಕೆ.ಫಣಿರಾಜ್ ಮತ್ತು ಜಿ.ಪರಮೇಶ್ವರ ಅವರು ನಡೆಸಿಕೊಟ್ಟರು. ಇವುಗಳಲ್ಲಿ ಕಾಬೂಲಿವಾಲಾ ಹಿಂದಿಚಿತ್ರ (ನಿರ್ದೇಶನ : ಹೇಮೆನ್ ಗುಪ್ತ) ವಾಗಿದ್ದರೆ, ಉಳಿದ ಮೂರು ಸತ್ಯಜಿತ್ ರಾಯ್ ಅವರು ನಿರ್ದೇಶಿಸಿದ ಬಂಗಾಳಿ ಚಲನಚಿತ್ರಗಳಾಗಿದ್ದವು.

ಚಲನಚಿತ್ರ ರಸಗ್ರಹಣದಲ್ಲಿ ಮಂಗಳೂರಿನಲ್ಲಿ ಒಂದು ಮುಖ್ಯವಾದ ಈವೆಂಟ್ ಎಂಬುದಾಗಿ ಈ ಚಿತ್ರೋತ್ಸವವನ್ನು ಪರಿಗಣಿಸಬಹುದು. ಪ್ರೇಕ್ಷಕರಲ್ಲಿ ಹಲವಾರು ಜನ ಸಂವಾದ, ವಿಶ್ಲೇಷಣೆಯಲ್ಲಿ ಪಾಲ್ಗೊಂಡಿದ್ದರು. ಸಮುದಾಯದ ವಾಸುದೇವ ಉಚ್ಚಿಲ್, ಸಹಮತ ಫಿಲ್ಮ್ ಸೊಸೈಟಿಯ ಐವಾನ್ ಡಿ'ಸಿಲ್ವಾ, ಸಾಹಿತಿ ಚಂದ್ರಕಲಾ ನಂದಾವರ, ಪತ್ರಕರ್ತ ಗೋವಿಂದ ಬೆಳಗಾಂವ್ಕರ್ ಮೊದಲಾದವರು ಉತ್ಸವವನ್ನು ಸಂಘಟಿಸಿದ್ದರು.

★ ★ ★

ದಲಿತ ಹಕ್ಕುಗಳ ಜಾಗೃತಿ ಕಾರ್ಯಾಗಾರ

ಸಿಪಿಐ(ಎಂ) ಮಂಗಳೂರು ನಗರಸಮಿತಿ ಹಾಗೂ ದಲಿತ ಹಕ್ಕು ಹೋರಾಟ ಸಮಿತಿಯ ಆಶ್ರಯದಲ್ಲಿ ಕಾಂ.ರಮೇಶ್‌ಕುಮಾರ್ ಸ್ಮರಣಾರ್ಥ ಡಿಸೆಂಬರ್ 26 ರಂದು ಮಂಗಳೂರಿನಲ್ಲಿ ದಲಿತ ಹಕ್ಕುಗಳ ಜಾಗೃತಿ ಕಾರ್ಯಾಗಾರ ನಡೆಯಿತು. 70 ಮಂದಿ ದಲಿತ ಶಿಬಿರಾರ್ಥಿಗಳನ್ನೊಳಗೊಂಡು 80 ಮಂದಿ ಈ ಶಿಬಿರದಲ್ಲಿ ಭಾಗವಹಿಸಿದರು. ಜಿಲ್ಲಾ ಮಾರ್ಗದರ್ಶಕರಾದ ಕೃಷ್ಣಪ್ಪ ಕೊಂಚಾಡಿ, ಸಿಪಿಎಂ ಮಂಗಳೂರು ನಗರಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್, ಹೋರಾಟ ಸಮಿತಿಯ ಅಧ್ಯಕ್ಷರಾದ ಸಂಜೀವ ಬಳ್ಕೂರು, ಕಾರ್ಯದರ್ಶಿ ಲಿಂಗಮ್ಮ ಸಂತೂರು ತರಬೇತಿ ನಡೆಸಿದರು. ಈ ವರ್ಷ ಮಂಗಳೂರಿನಲ್ಲಿ ದಲಿತ ಹಕ್ಕು ಸಮಿತಿಯು ನಡೆಸುವ ಮೂರನೆಯ ಕಾರ್ಯಾಗಾರ ಇದಾಗಿದ್ದು, ಕಾರ್ಯಾಗಾರದಿಂದ ಕಾರ್ಯಾಗಾರಕ್ಕೆ ಭಾಗವಹಿಸುವ ದಲಿತ ಕಾರ್ಯಕರ್ತರ ಸಂಖ್ಯೆ ಹೆಚ್ಚುತ್ತಿರುವುದು ಗಮನೀಯವಾಗಿದೆ.

○

ಬಿಹಾರ ಚುನಾವಣೆ ....

ಪುಟ 10 ರಿಂದ

ಮಾತುಕತೆಯನ್ನು ಸಿಪಿಐ(ಎಂ) ಆರಂಭಿಸಿತ್ತು. ದೀರ್ಘ ಸಮಯದ ಬಳಿಕ ಸಿಪಿಐ(ಎಂ) ಮತ್ತು ಸಿಪಿಐನ ಕೇಂದ್ರ ನಾಯಕತ್ವದ ಮಧ್ಯಪ್ರವೇಶದಿಂದಾಗಿ ಈ ಮಾತುಕತೆಗಳು ಯಶಸ್ವಿಯಾದವು. ಆದರೆ, ಸಿಪಿಐ(ಎಂಎಲ್) ಮಾತ್ರ ತನ್ನ ಹಠಮಾರಿ ಧೋರಣೆಯನ್ನು ಕೈಬಿಡಲಿಲ್ಲ. ಚುನಾವಣಾ ಪ್ರಕ್ರಿಯೆ ಆರಂಭವಾದ ನಂತರ ಎಡಪಕ್ಷಗಳು ಜಂಟಿ ಪತ್ರಿಕಾಗೋಷ್ಠಿ ಹಾಗೂ ಜಂಟಿ ಮನವಿ ಮಾಡುವಷ್ಟಕ್ಕೆ ತನ್ನ ಎಡ ಐಕ್ಯತೆಯನ್ನು ಸೀಮಿತಗೊಳಿಸಿತು.

ಎಡಪಕ್ಷಗಳ ಜನಪ್ರಿಯತೆ ನಿಧಾನವಾಗಿ ಕುಸಿಯುತ್ತಿದೆ ಎಂಬುದು ಚುನಾವಣಾ ಫಲಿತಾಂಶದಿಂದ ಸ್ಪಷ್ಟಗೊಂಡಿದೆ. ಈ ಬಗ್ಗೆ ಎಡಪಕ್ಷಗಳು ಗಂಭೀರ ಆತ್ಮಾವಲೋಕನ ಮಾಡಬೇಕಾಗಿದೆ. ಜನರ ದೈನಂದಿನ ಸಮಸ್ಯೆಗಳ ಬಗ್ಗೆ ಹಾಗೂ ರಾಷ್ಟ್ರದ ಪ್ರಮುಖ ಸಮಸ್ಯೆಗಳ ಬಗ್ಗೆ ಪಕ್ಷವಾಗಿ ಹಾಗೂ ಎಡಶಕ್ತಿಗಳು ಒಟ್ಟಾಗಿ ಐಕ್ಯತೆಯಿಂದ ಹೋರಾಟ ನಡೆಸಬೇಕಾಗಿದೆ. ಈ ಮೂಲಕ ಸಂಘಟನೆಯನ್ನು ಕಟ್ಟಿಬೆಳೆಸುವ ಜೊತೆಗೆ ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸಬೇಕಾಗಿದೆ.

ಆಂಧ್ರ ರಾಜಕೀಯ ಸಂಚಲನ...

ಪುಟ 12ರಿಂದ

ಚಾಲ್ತಿಯಲ್ಲಿರಲಿದ್ದಾರೆ.


ಚಂದ್ರಬಾಬುನಾಯ್ಡು ಅವರು ರೈತರ ಪರವಾಗಿ ಉಪವಾಸ ಸತ್ಯಾಗ್ರಹ ಮಾಡುತ್ತಿರುವುದರಿಂದ ಸರ್ಕಾರ ನಿಜವಾಗಿಯೂ ಇಕ್ಕಟ್ಟಿನಲ್ಲಿ ಸಿಲುಕಿದೆ ಎಂಬುದನ್ನು ವಿರೋಧ ಪಕ್ಷಗಳು ಕಾಣುತ್ತಿವೆ. ಇದುವರೆಗೂ ಕಾಂಗ್ರೆಸ್ ಸಮರ್ಪಕವಾದ ಕ್ರಮಗಳನ್ನು ಕೈಗೊಳ್ಳದಿರುವುದರಿಂದ ನಾಯ್ಡು ಅವರು ಹೆಚ್ಚು ಜನಪ್ರಿಯತೆ ಪಡೆಯುತ್ತಿದ್ದಾರೆ. ಇದುವರೆಗೂ ಚಿರಂಜೀವಿಯವರ ಪ್ರಜಾರಾಜ್ಯಂ ಪಕ್ಷ ಸದ್ಯದ ಬೆಳವಣಿಗೆಗಳಲ್ಲಿ ಕಾಣಿಸಿಕೊಂಡಿಲ್ಲ. ಇದೇ ಪರಿಸ್ಥಿತಿ ಇನ್ನಷ್ಟು ಕಾಲ ಮುಂದುವರೆದಲ್ಲಿ ಜಗನ್‌ಮೋಹನ್ ರೆಡ್ಡಿಗೆ ಉತ್ತಮ ಲಾಭವಾಗಲಿದೆ. ಕಾಂಗ್ರೆಸ್ ಪಕ್ಷ ಹೆಚ್ಚು ನಷ್ಟಕ್ಕೆ ಒಳಗಾಗಲಿದೆ. ಕೇವಲ ಆಂಧ್ರದಲ್ಲಿ ಮಾತ್ರವಲ್ಲ ರಾಷ್ಟ್ರಮಟ್ಟದಲ್ಲೂ ಅದರ ಪ್ರಾಬಲ್ಯ ಕುಂಠಿತವಾಗಲಿದೆ. ತಮಿಳುನಾಡಿನಲ್ಲಿನ ಮೈತ್ರಿ ಪಕ್ಷ ಡಿಎಂಕೆ ಜೊತೆಗಿನ ಸಂಬಂಧಗಳೂ ಸರಿಯಾಗಿ ಇಲ್ಲದಿರುವುದರಿಂದ ಕಾಂಗ್ರೆಸ್‌ಗೆ ರಾಷ್ಟ್ರಮಟ್ಟದ ಸಮಸ್ಯೆಗಳು ಎದುರಾಗಲಿವೆ. ಯುಪಿಎ ಮೈತ್ರಿ ಪಕ್ಷವಾದ ಎನ್‌ಸಿಪಿ ನಾಯಕ ಶರದ್‌ಪವಾರ್ ಸಹ ಯುಪಿಎ ಸರ್ಕಾರದ ನೀತಿಗಳ ಬಗ್ಗೆ ಆಕ್ಷೇಪಗಳನ್ನು ವ್ಯಕ್ತಪಡಿಸುತ್ತಿದ್ದಾರೆ.

ಆಂಧ್ರದಲ್ಲಿಯೂ ಕಾಂಗ್ರೆಸ್ ಪಕ್ಷಕ್ಕೆ ಸರಿಯಾದ ನಾಯಕನ ಕೊರತೆಯಿದೆ. ಕೇಂದ್ರ ಸರ್ಕಾರದ ಕೃಪಾಕಟಾಕ್ಷವಿಲ್ಲದೆ ಸ್ವತಂತ್ರವಾಗಿ ಯಾವುದೇ ಮುಖಂಡ ಬೆಳೆಯಲು ಕಾಂಗ್ರೆಸ್ ಅವಕಾಶ ನೀಡುವುದಿಲ್ಲ.

ಜಗನ್‌ಮೋಹನ್ ರೆಡ್ಡಿಯವರನ್ನು ಮನವೊಲಿಸಲು ಕಾಂಗ್ರೆಸ್ ಸತತ ಪ್ರಯತ್ನ ನಡೆಸಲಿದೆ. ಆದರೆ ಕಾಂಗ್ರೆಸ್ ತಮಗೆ ಅವಮಾನ ಮಾಡಿದೆ ಎಂದು ಜಗನ್ ಹೇಳುತ್ತಿರುವುದರಿಂದ ಇದು ಅವರನ್ನು ಪ್ರಾದೇಶಿಕವಾಗಿ ಇನ್ನಷ್ಟು ಬಲಿಷ್ಠರನ್ನಾಗಿಸಲಿದೆ. ಜಗನ್‌ಮೋಹನ್ ರೆಡ್ಡಿ ಜಿಲ್ಲೆ ಜಿಲ್ಲೆಗಳಲ್ಲಿ ಆಳವಾಗಿ ಪ್ರವೇಶ ಮಾಡುತ್ತಿದ್ದು, ಕಾಂಗ್ರೆಸ್ ಪಕ್ಷ ಅವರನ್ನು ಪ್ರತಿರೋಧಿಸಲು ಸಾಧ್ಯವಿಲ್ಲದಂತಾಗಿದೆ. ಇದಕ್ಕಿಂತಲೂ ಹೆಚ್ಚಾಗಿ ಅವರ ರ್‍ಯಾಲಿಗೆ ಸಾರ್ವಜನಿಕರು ತೋರಿಸುತ್ತಿರುವ ಬೆಂಬಲ ಅಪಾರವಾಗಿದೆ. ಕಾಂಗ್ರೆಸ್‌ನ ಹಾಲಿ ಶಾಸಕರೂ ಅವರ ಸಭೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ರೈಲ್ವೆ ನಿಲ್ದಾಣಗಳಲ್ಲಿ ಜಗನ್‌ರನ್ನು ಬರಮಾಡಿಕೊಳ್ಳಲು ಜನ ಜಮಾಯಿಸುತ್ತಿರುವುದನ್ನು ನೋಡಿ ಕಾಂಗ್ರೆಸ್ ಪಕ್ಷ ದಂಗಾಗಿದೆ. ಹೊಸ ಮುಖ್ಯಮಂತ್ರಿ ಆಯ್ಕೆಯಲ್ಲಿ ಕಾಂಗ್ರೆಸ್ ಪಕ್ಷ ಉರುಳಿಸಿದ ರೆಡ್ಡಿ ದಾಳವೂ ಏನೇನೂ ಪರಿಣಾಮ ಬೀರದಂತಾಗಿದೆ. ಜಗನ್‌ರನ್ನು ಪಕ್ಷದಲ್ಲಿ ಕ್ಷುಲ್ಲಕವಾಗಿ ನಡೆಸಿಕೊಳ್ಳಲಾಯಿತು ಎಂಬ ಭಾವನೆಗಳು ಜನರಲ್ಲಿ ಆಳವಾಗಿರುವುದರಿಂದ ಅವರ ಕುಟುಂಬವನ್ನು ಒಡೆಯಲು ಹೊರಟ ಕಾಂಗ್ರೆಸ್ ತಂತ್ರವೂ ಫಲಿಸಿದಂತೆ ಕಂಡಿಲ್ಲ.

ಹಲವಾರು ರಾಜ್ಯಗಳಲ್ಲಿನಂತೆ ಆಂಧ್ರದಲ್ಲಿಯೂ ಕಾಂಗ್ರೆಸ್ ಪಕ್ಷಕ್ಕೆ ಸರಿಯಾದ ನಾಯಕನ ಕೊರತೆಯಿದೆ. ಹಾಗಾಗಿ ಇದೊಂದು ವಿಪರ್ಯಾಸವೇ ಸರಿ. ಕೇಂದ್ರ ಸರ್ಕಾರದ ಕೃಪಾಕಟಾಕ್ಷವಿಲ್ಲದೆ ಸ್ವತಂತ್ರವಾಗಿ ಯಾವುದೇ ಮುಖಂಡ ಬೆಳೆಯಲು ಕಾಂಗ್ರೆಸ್ ಅವಕಾಶ ನೀಡುವುದಿಲ್ಲ. ಆದರೆ ವೈಎಸ್‌ಆರ್ ಮಾತ್ರ ಇದಕ್ಕೆ ಅಪವಾದವಾಗಿದ್ದರು. ಮಹಾರಾಷ್ಟ್ರದಲ್ಲಿ ಇಂತದೇ ಪ್ರಸಂಗ ಎದುರಾದಾಗ ಯಾವುದೇ ವೈಯಕ್ತಿಕ ಪ್ರಾಬಲ್ಯ ಹೊಂದಿರದ ಮುಖ್ಯಮಂತ್ರಿಯನ್ನು ಪಕ್ಷ ಕೆಳಕ್ಕಿಳಿಸಿತು. ಉಳಿದ ಎಲ್ಲ ನಾಯಕರು ತುಟ್ಟಿ ಬಿಚ್ಚದೆ ಅದನ್ನು ಒಪ್ಪಿಕೊಂಡರು. ಇಂತಹ ರಾಜಕಾರಣದಿಂದಾಗಿ ರಾಜ್ಯಗಳಲ್ಲಿ ಪ್ರಭಾವ ಇರುವ ನಾಯಕರೇ ಇಲ್ಲವಾಗಿದೆ. ಸ್ವತಂತ್ರವಾಗಿ ಬೆಳೆಯುವ ಮುಖಂಡರನ್ನು ಚಿವುಟಿ ಹಾಕುತ್ತದೆ. ಮಹಾರಾಷ್ಟ್ರದಲ್ಲಿ ಎನ್‌ಸಿಪಿ ತನ್ನದೇ ಸ್ವಂತ ಅಸ್ತಿತ್ವ ಹೊಂದಿರುವುದರಿಂದ ಉಳಿದಿದೆ. ಹಾಗಾಗಿಯೇ ಅಜಿತ್‌ಪವಾರ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿಸುವಲ್ಲಿ ಅದು ಯಶಸ್ವಿಯಾಯಿತು. ಆಂಧ್ರಪ್ರದೇಶದಲ್ಲಿ ಜಗನ್‌ಮೋಹನ್ ರೆಡ್ಡಿಯವರನ್ನು ಎದುರು ಹಾಕಿಕೊಳ್ಳುವದೆಂದರೆ ಅವರ ಮನೆತನವನ್ನೇ ಎದುರು ಹಾಕಿಕೊಳ್ಳುವಂತಾಗಲಿದೆ. ಕಾಂಗ್ರೆಸ್ ಬೆಂಬಲಿಗರು ಹೆಚ್ಚು ಹೆಚ್ಚಾಗಿ ಜಗನ್‌ರತ್ತ ವಾಲುತ್ತಿದ್ದಾರೆ.



ಹಾಗಾಗಿ ಆಂಧ್ರಪ್ರದೇಶ ರಾಜಕಾರಣವನ್ನು ದೆಹಲಿಯಿಂದ ನಿಯಂತ್ರಿಸಲು ಸಾಧ್ಯವಿಲ್ಲ. ತೆಲಂಗಾಣ ಕುರಿತಂತೆ ಮುಂದಿನ ವಾರ ವರದಿ ಬರಲಿದೆ. (ವರದಿ ಸಲ್ಲಿಕೆ ಆಗಿದೆ) ಶತಶತಮಾನಗಳಿಂದಲೂ ತೆಲಂಗಾಣ ಪ್ರದೇಶವನ್ನು ನಿರ್ಲಕ್ಷಿಸಿರುವುದನ್ನು ವರದಿಯಲ್ಲಿ ಪರಿಗಣಿಸಿರುವ ಸಾಧ್ಯತೆಗಳಿವೆ. ವರದಿಯಲ್ಲಿ ಹೊಸ ರಾಜ್ಯ ರಚನೆಗೆ ಶಿಫಾರಸು ಮಾಡಲಿದೆಯೇ ಇಲ್ಲವೇ ಪ್ರದೇಶದ ಅಭಿವೃದ್ಧಿಗೆ ಹಲವು ಸೂತ್ರಗಳನ್ನು ಮುಂದಿಡಲಿದೆಯೇ ನೋಡಬೇಕು. ಹೆಚ್ಚು ಹೆಚ್ಚು ಕಾಂಗ್ರೆಸ್ ಶಾಸಕರು ಜಗನ್‌ರತ್ತ ವಾಲಿದರೆ ಮತ್ತು ಚುನಾವಣೆ ಬಂತೆಂದರೆ ತೆಲಂಗಾಣ ಜನತೆ ಮುಂದ ಕಾಂಗ್ರೆಸ್ ಏನೆಂದು ಹೇಳಿಕೊಂಡು ಹೋಗಲಿದೆ ಎಂಬುದು ಪ್ರಶ್ನೆಯಾಗಿದೆ. ಒಂದು ವೇಳೆ ಅವರ ಪೂರ್ಣಗೊಳಿಸುವ ಮೊದಲೇ ಕಾಂಗ್ರೆಸ್ ಬಿಟ್ಟು ಹೊರಬಂದ ಶಾಸಕರ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಲಿದೆ. ಆಗ ಜಗನ್‌ನ ಪ್ರಾಬಲ್ಯ ಮತ್ತು ಕಾಂಗ್ರೆಸ್ ಪಕ್ಷ ಅವರ ತಾಯಿಯವರನ್ನು ಅವಮಾನಿಸಿರುವುದರ ಪರಿಣಾಮ ಹೊರಬೀಳಲಿದೆ. ಈ ಫಲಿತಾಂಶಗಳ ನಂತರ ಕಾಂಗ್ರೆಸ್ ಶಾಸಕರು ಹೆಚ್ಚು ಹೆಚ್ಚಾಗಿ ಜಗನ್‌ರತ್ತ ಹರಿದು ಬರಲಿದ್ದಾರೆ. ರಾಜ್ಯದ ಎಲ್ಲ ಪ್ರದೇಶಗಳಲ್ಲೂ ಕಾಂಗ್ರೆಸ್ ಹು... ಮತ್ತು ನದಿಯ ನಡುವೆ ಸಿಕ್ಕಿಕೊಂಡಂತಾಗಿದೆ.

○

ಅನಂತನ ಭ್ರಷ್ಟ ಅವಾಂತರಗಳು

ಛಾಪಾ ಹಗರಣಕ್ಕಿಂತ ಬಲು ದೊಡ್ಡ ಹಗರಣ ಹುಡ್ಕೋ ಸುಪ್ರೀಂಕೋರ್ಟ್ ತನಿಖೆಗೆ ನಿರ್ದೇಶನ

ಸ್ವ-ಘೋಷಿತ ದೇಶಭಕ್ತ ಸಂಘಟನೆಯಾದ ಆರೆಸ್ಸಸ್ ಮತ್ತು ಬಿಜೆಪಿ ನಾಯಕರ ನೀಚ ಮತ್ತು ಭ್ರಷ್ಟತನದ ಪರಮಾವಧಿಗೆ ಒಂದು ಅತ್ಯುತ್ತಮ ಉದಾಹರಣೆ ಎಂದರೆ ಅನಂತ್‌ಕುಮಾರ್. ಎನ್‌ಡಿಎ ಮೈತ್ರಿಕೂಟದ ಕೇಂದ್ರ ಸರ್ಕಾರದಲ್ಲಿ ನಗರಾಭಿವೃದ್ಧಿ ಸಚಿವನಾಗಿದ್ದ ಅನಂತ್ ಕುಮಾರ್ ಮತ್ತು ಈ ಸಚಿವಾಲದಡಿಯ ಸಂಸ್ಥೆಯಾದ ಹುಡ್ಕೋ (ವಸತಿ ಮತ್ತು ನಗರಾಭಿವೃದ್ಧಿ ನಿಗಮ) ಅಧ್ಯಕ್ಷ , ವ್ಯವಸ್ಥಾಪಕ ನಿರ್ದೇಶಕರು ಸೇರಿಕೊಂಡು ಈ ಸರ್ಕಾರಿ ಸಂಸ್ಥೆಗೆ ರೂ. 14,500 ಕೋಟಿ ನಷ್ಟ ಮಾಡಿರುವುದನ್ನು 6 ವಾರದೊಳಗೆ ತನಿಖೆ ನಡೆಸಿ ವರದಿ ನೀಡಲು ಸುಪ್ರೀಂಕೋರ್ಟ್ ಕಳೆದ ವಾರವಷ್ಟೆ ಕೇಂದ್ರ ವಿಚಕ್ಷಣ ಆಯೋಗಕ್ಕೆ ನಿರ್ದೇಶನ ನೀಡಿದೆ. ಅಲ್ಲದೆ ಅನಂತ್ ಕುಮಾರ್ ಮತ್ತು ಹುಡ್ಕೋ ಅಧ್ಯಕ್ಷ - ವ್ಯವಸ್ಥಾಪಕ ನಿರ್ದೇಶಕರಿಗೆ ನೋಟಿಸ್ ಜಾರಿ ಮಾಡಿದೆ.

ಈ ಹುಡ್ಕೋ ಹಗರಣವು ನಮ್ಮ ರಾಜ್ಯ ಕಂಡ ಛಾಪಾ ಹಗರಣಕ್ಕಿಂತ ಬಲು ದೊಡ್ಡ ಹಗರಣವೆನಿಸಿದೆ. 1998 ರಿಂದ 2002-03 ರವರೆಗೆ ಎನ್‌ಡಿಎ ಅಧಿಕಾರದಲ್ಲಿದ್ದಾಗ ಸಚಿವ ಅನಂತ್ ಕುಮಾರ್ ನೇತೃತ್ವದಲ್ಲಿ ರೂ. 14,500 ಕೋಟಿ ಹಣವನ್ನು ತಮಗೆ ಇಷ್ಟಬಂದ ಖಾಸಗಿ ಗೃಹ ನಿರ್ಮಾಣ ಸಂಸ್ಥೆಗಳಿಗೆ ಸಾಲ ನೀಡಲಾಗಿದೆ. ತನ್ನ ಆಪ್ತರಿರುವ 5 ಸಂಸ್ಥೆಗಳಿಗೆ ತಲಾ ರೂ. 30.6 ಕೋಟಿ ಮಂಜೂರು ಮಾಡಲಾಗಿದೆ. ಇದನ್ನು ಶೇ. 7 ರಷ್ಟು ಕನಿಷ್ಟ ಬಡ್ಡಿ ದರದಲ್ಲಿ ನೀಡಲಾಗಿದೆ. ಇದರಿಂದಾಗಿ ಆ ಅವಧಿಯಲ್ಲಿ ಹುಡ್ಕೋ ಸಂಸ್ಥೆಯ ನಿರುಪಯುಕ್ತ ಸಂಪತ್ತು ಅಂದರೆ ಹಿಂದಿರುಗಿ ವಾಪಸು ಬರಲಾರದಂತಹ ಸಾಲ ವಿತರಣೆಯ ಮೊತ್ತ ರೂ. 1.0 ಲಕ್ಷ ಕೋಟಿಗೆ ಏರಿದೆ.

ಮೀಟರ್ ಬಡ್ಡಿ ಪುಂಡರ ನಾಯಕ ಅನಂತ್

ಹೀಗೆ ಸಾವಿರಾರು ಕೋಟಿ ಅಕ್ರಮ ಹಣ ಗಳಿಸಿರುವ ಅನಂತ್ ಕುಮಾರ್ ಆ ಮೂಲಕ ತನ್ನ ಏರಿಯಾಗಳಲ್ಲಿ ಬಡ್ಡಿ ದಂಧೆ ನಡೆಸುತ್ತಾ ಬಂದಿದ್ದಾರೆ. ತನ್ನ ಶಿಷ್ಯ ವೃಂದದ ಪುಂಡರ ಪಡೆ ಬೆಳೆಸಿಕೊಂಡು ಮೀಟರ್ ಬಡ್ಡಿ, ಘಂಟೆ ಬಡ್ಡಿ, ದಿನದ ಬಡ್ಡಿ ನೀಡುತ್ತಾ ರಸ್ತೆ ಬದಿಯ ಮತ್ತು ಸಣ್ಣ ವ್ಯಾಪರಾಸ್ಥರು ಹಾಗೂ ಇತರೆ ಕೆಳಸ್ತರದ ಜನತೆಯನ್ನು ಸುಲಿಗೆ ಮಾಡಲು ಕೃಪಕಟಾಕ್ಷ ನೀಡುತ್ತಿದ್ದಾರೆ.

ಅದಮ್ಯ ಚೇತನದ ಮುಖವಾಡದ ಹಿಂದೆ ರಾಡಿಯಾ ನಂಟು?

ಅನಂತ್ ಕುಮಾರ್ ಪತ್ನಿ ತೇಜಸ್ವಿನಿ ನಡೆಸುತ್ತಿರುವ ಸರ್ಕಾರೇತರ ಸಂಸ್ಥೆ ಅದಮ್ಯ ಚೇತನ ಸಂಸ್ಥೆಯು ಶಾಲಾ ಮಕ್ಕಳಿಗೆ ಬಿಸಿಯೂಟ ಸೇರಿದಂತೆ ಹಲವಾರು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದೆ ಎಂದು ಎಲ್ಲೆಡೆ ಪ್ರಚಾರ ಮಾಡಲಾಗುತ್ತಿದೆ. ಆದರೆ ಇದರ ಮುಖವಾಡದ ಹಿಂದೆ ಅದೆಷ್ಟು ಕಾಣದ ಕೈಗಳು ಲಾಭ ಪಡೆಯುತ್ತಿವೆ? ಸರ್ಕಾರದಿಂದ ಇದಕ್ಕೆ ಎಷ್ಟು ಅನುದಾನ ಸಿಗುತ್ತಿದೆ? ಇದಕ್ಕೆ ಹರಿದು ಬರುತ್ತಿರುವ ಹಣ ಎಲ್ಲಿಯದು? ಎಂಬ ಹಲವಾರು ಪ್ರಶ್ನೆಗಳು ಇವೆ. ರಾಡಿಯಾಳ ಮೋಸದ ಹಣ ಕೂಡ ಇದರಲ್ಲಿ ಸೇರಿದೆ ಎನ್ನಲಾಗುತ್ತಿದೆ. ಅಲ್ಲದೆ, ಸಾಮಾಜಿಕ ಸೇವೆಯ ನೆಪದಲ್ಲಿ ಹಲವಾರು ಮೂಲಗಳಿಂದ ದೊಡ್ಡ ಮಟ್ಟದ ಹಣ ಸಂಗ್ರಹಿಸಿ ಕೊಳ್ಳೆ ಹೊಡೆಯಲಾಗುತ್ತಿದೆ.

ಸಾರ್ವಜನಿಕ ಉದ್ದಿಮೆಗಳನ್ನು ಹರಾಜು ಹಾಕಿದ್ದು

ಎನ್‌ಡಿಎ ಅಧಿಕಾರದಲ್ಲಿದ್ದಾಗ ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡುವ ಸಲುವಾಗಿಯೇ ಅರುಣ್ ಶೌರಿ ಎಂಬ ಬಲಪಂಥೀಯ ಬುದ್ದಿಜೀವಿಯನ್ನು ವಿಕ್ರಯ ಮಂತ್ರಿಯನ್ನಾಗಿ ನೇಮಿಸಲಾಗಿತ್ತು. ಸಚಿವ ಅನಂತ್ ಕುಮಾರ್ ಲಾಬಿ ಮಾಡಿ ಹಲವಾರು ಸಾರ್ವಜನಿಕ ಉದ್ದಿಮೆಗಳು ಮತ್ತು ಆಸ್ತಿಗಳನ್ನು ಆರೆಸ್ಸೆಸ್ ಸಂಬಂಧಿಗಳಿಗೆ ಮತ್ತು ತನ್ನ ಆಪ್ತರಿಗೆ ಕಡಿಮೆ ಬೆಲೆಗೆ ಮಾರಾಟವಾಗುವಲ್ಲಿ ಪಾತ್ರ ವಹಿಸಿದ್ದಾರೆ.

ಆರೆಸ್ಸೆಸ್ – ಬಿಜೆಪಿ ವಿಕಾರಮುಖಗಳು

ಎನ್ನಲಾಗಿದೆ. ಆದರೆ ಬಿಜೆಪಿಯ ಈ ಅಕ್ರಮಗಳನ್ನು ಕಾಂಗ್ರೆಸ್ ಪಕ್ಷವು ತನ್ನ ಭ್ರಷ್ಟತೆಯನ್ನು ಮುಚ್ಚಿ ಹಾಕಲು ಬಳಸಿಕೊಳ್ಳುತ್ತಿದೆಯಷ್ಟೆ.

ಇಂಥಹ ಹಲವಾರು ಅಂಶಗಳನ್ನು ಈ ಹಿಂದೆ ನೀರಾ ರಾಡಿಯಾಳೊಂದಿಗೆ ಪಾಲುದಾರನಾಗಿದ್ದ ಧೀರಜ್‌ಸಿಂಗ್ ಎಂಬುವವನು ಬಯಲಿಗೆ ತಂದಿದ್ದಾನೆ. ಅವನು ಹೇಳುವಂತೆ ಬಿಜೆಪಿಯ ನಾಯಕರಾದ ನಿತಿನ್ ಗಡ್ಕರಿ, ಅನಂತ್‌ಕುಮಾರ್, ಎಲ್.ಕೆ ಅಡ್ವಾಣಿ ಮತ್ತು ಇತರೆ ಬಿಜೆಪಿ ನಾಯಕರು ನೀರಾ ರಾಡಿಯಾಳೊಂದಿಗೆ ಬಿಸಿನೆಸ್ ಪಾಲುದಾರಿಕೆ ಹೊಂದಿದ್ದಾರೆ.

....

ಬಂಡವಾಳಿಗರು-ರಾಜಕಾರಣಿಗಳ ಭ್ರಷ್ಟ ಷಾಮೀಲಾತಿಯ ಏಜೆಂಟ್ ನೀರಾ ರಾಡಿಯಾ ಬಿಜೆಪಿ ಅಧಿಕಾರದಲ್ಲಿರುವವರೆಗೂ ನೀರಾಗೆ ಅಬಾಧಿತವಾಗಿದ್ದ ಕೇಂದ್ರ ಸರ್ಕಾರದ ಶಕ್ತಿಕೇಂದ್ರದ ಅಧಿಕಾರಗಳು, 2004ರಲ್ಲಿ ಎನ್‌ಡಿಎ ಸರ್ಕಾರ ಉರುಳಿಬಿದ್ದಾಗ ಪರ್ಯಾಯ ಹುಡುಕಬೇಕಾಯಿತು. ಅಂತೆಯೇ ತರಂಗಾಂತರ ಹಗರಣದ ಧ್ವನಿಸುರುಳಿಗಳು ತಿಳಿಸುವಂತೆ 2006ರಲ್ಲಿ ಕೇಂದ್ರ ಪರಿಸರ ಖಾತೆ ಸಚಿವನಾಗಿದ್ದ ಎ. ರಾಜಾರೊಂದಿಗೆ ನೀರಾಳ ಸಂಬಂಧ ಬಹಳ ಗಟ್ಟಿಯಾಯಿತು. 2007ರಲ್ಲಿ ಎ. ರಾಜಾ ಟೆಲಿಕಾಂ ಮಂತ್ರಿಯಾದಾಗ ಟಾಟಾ ಟೆಲಿಸರ್ವೀಸಸ್ ಕಂಪನಿ ಮತ್ತು ಮುಖೇಶ್ ಅಂಬಾನಿಯ ಕಂಪನಿಗಳಿಗೆ ನೀರಾ ರಾಡಿಯಾ-ಎ. ರಾಜಾ ಸಂಪರ್ಕ ಬಹಳ ಲಾಭಕರವಾಯಿತು. ಎ. ರಾಜಾ ಟೆಲಿಕಾಂ ಮಂತ್ರಿಯಾದ ಮೊದಲನೇ ದಿನವೇ 'ಮೊದಲ ಕಂತಿನ' ಹಣ ಸರಬರಾಜಾಗಿದೆ. ಅಂದೇ ಈ ದೊಡ್ಡ ಮೊತ್ತವನ್ನು ಹೊತ್ತು ಚೆನ್ನೈಗೆ ಬಂದ ರಾಜಾ ಅದನ್ನು ಡಿಎಂಕೆ ನಾಯಕರಿಗೆ ಸಲ್ಲಿಸಿದ್ದಾರೆ. ಇದನ್ನು ನೋಡಿ ನಂಬಲಾರದೇ ಹೋದ ಡಿಎಂಕೆ ನಾಯಕರು, ಹಿಂದಿನ ಮಂತ್ರಿ ಸಹ ಇದೇ ರೀತಿ ಏಕೆ ಸಲ್ಲಿಸಿಲ್ಲ ಎಂಬಂತೆ ತಲೆಕೆಡಿಸಿಕೊಂಡರು ಎನ್ನಲಾಗಿದೆ.

ರತನ್ ಟಾಟಾ 2007ರ ಡಿಸೆಂಬರ್‌ನಲ್ಲಿ ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿಯವರಿಗೆ ಪತ್ರ ಬರೆದು ಎ.ರಾಜಾ 'ಒಬ್ಬ ವೈಚಾರಿಕ, ಅತ್ಯುತ್ತಮ ಮತ್ತು ಫಲಿತಾಂಶ-ಧೋರಣೆಯ' ನಾಯಕ ಎಂದು ರಾಜಾನನ್ನು ಹೊಗಳಿದ್ದಾರೆ. ಎ. ರಾಜಾ ನೊಂದಿಗೆ ಟಾಟಾ ಗುಂಪು ಅತಿ ಹತ್ತಿರವಾಗುತ್ತಿರುವುದು ಏರ್‌ಟೆಲ್ ಕಂಪನಿಯ ಸುನೀಲ್ ಮಿಟ್ಟಲ್‌ಗೆ ಎಚ್ಚರಿಕೆಯ ಘಂಟೆಯಂತೆ ಬಾರಿಸಿದೆ. ಟಾಟಾ ತನ್ನ ಇಡೀ ಸಮೂಹದ ಜಾಹೀರಾತು ಮತ್ತು ಬ್ರ್ಯಾಂಡ್ ನಿರ್ವಹಣೆಯನ್ನು ನೀರಾಳ ಕಂಪನಿಗೆ ವಹಿಸಿರುವಂತೆಯೇ ಮುಖೇಶ್ ಅಂಬಾನಿ ಕೂಡ ವಹಿಸಬೇಕೆಂದು ರತನ್ ಟಾಟಾ ಮುಖೇಶ್‌ಗೆ ಪತ್ರ ಕೂಡ ಬರೆದಿದ್ದಾನೆ ಎನ್ನಲಾಗಿದೆ. ಆದರೆ ಅಷ್ಟರಲ್ಲಿಯೇ ತರಂಗಾಂತರ ಹಗರಣ ಕೆನ್ನಾಲಿಗೆಯಂತೆ ವ್ಯಾಪಿಸಿದೆ. ಇವರಿಬ್ಬರ ಕಂಪನಿಯು ವಾರ್ಷಿಕ ರೂ. 30 ಕೋಟಿ ಆದಾಯವನ್ನು ನೀರಾಳಿಗೆ ಅವಳು ಒದಗಿಸುವ ಸೇವೆಗಾಗಿ ನೀಡುತ್ತಿವೆ.

ಮತ್ತೊಂದೆಡೆ, ಧ್ವನಿ ಸುರುಳಿಯ ಮಾತುಕತೆಯೊಂದರಲ್ಲಿ ಕೇಳಿಬಂದಿರುವಂತೆ 'ಟಾಟಾಗೆ ಅದಿರು ಪರವಾನಗಿ ನೀಡಬೇಕಾದರೆ ನನಗೆ ರೂ. 150 ಕೋಟಿ ನೀಡಬೇಕೆಂದು ರತನ್ ಟಾಟಾಗೆ ತಿಳಿಸು' ಎಂದು ಅಂದಿನ ಜಾರ್ಖಂಡ್ ಮುಖ್ಯಮಂತ್ರಿ ಮಧು ಕೋಡಾ ನೀರಾಳಿಗೆ ಹೇಳಿದ್ದಾನೆ.

ಅಮೆರಿಕಾದ ಆದೇಶಕ್ಕೆ ಈ ಮಣಿತ ಅಪಾಯಕಾರಿ - ಸಿಪಿಐ(ಎಂ)

ಭಾರತದ ಕಂಪನಿಗಳು ಬಿಲ್ ಪಾವತಿ ಪ್ರಕ್ರಿಯೆಗಳಿಗಾಗಿ ಏಷ್ಯನ್ ಕ್ಲಿಯರಿಂಗ್ ಯೂನಿಯನ್ (ಎಸಿಯು) ಬಳಕೆ ಮಾಡಿಕೊಳ್ಳದಂತೆ ಕೇಂದ್ರ ಸರ್ಕಾರ ನಿರ್ಣಯ ಕೈಗೊಂಡಿರುವುದು ಭಾರತೀಯ ವಾಣಿಜ್ಯ ಸಂಸ್ಥೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಅದರಲ್ಲೂ ಮುಖ್ಯವಾಗಿ ಭಾರತ ಮತ್ತು ಇರಾನ್ ನಡುವಿನ ವಾಣಿಜ್ಯ ವಹಿವಾಟಿನ ಮೇಲೆ ಮಾರಕ ಪರಿಣಾಮ ಬೀರಲಿದೆ. ಏಕೆಂದರೆ ಭಾರತದ ಪೆಟ್ರೋಲಿಯಂ ಉತ್ಪನ್ನಗಳ ಒಟ್ಟು ಅಗತ್ಯತೆಯಲ್ಲಿ ಇರಾನ್‌ನಿಂದ ಮಾತ್ರವೇ ಶೇಕಡ 16 ರಿಂದ 17ರಷ್ಟು ಆಮದು ಮಾಡಿಕೊಳ್ಳಲಾಗುತ್ತಿದೆ.

ಎಸಿಯುನಲ್ಲಿ ಇರಾನ್ ಭಾರತದ ಅತಿದೊಡ್ಡ ಪಾಲುದಾರ ದೇಶವಾಗಿದೆ. ಹಾಗಾಗಿ ಇಂತಹ ವಾಣಿಜ್ಯ ಸಂಬಂಧಕ್ಕೆ ಕಲ್ಲು ಹಾಕಲು ಅಮೆರಿಕ ಭಾರತದ ಮೇಲೆ ಒತ್ತಡ ಹೇರುತ್ತಿದೆ. ಇರಾನ್ ಮೇಲೆ ಅಮೆರಿಕ ವಿಧಿಸಿರುವ ನಿರ್ಬಂಧಗಳನ್ನು ಜಾರಿಗೊಳಿಸಲು ಎಸಿಯು ಹಾದಿಯನ್ನು ಬಳಕೆ ಮಾಡಿಕೊಳ್ಳಲು ಅಮೆರಿಕ ಯತ್ನಿಸುತ್ತಿದೆ.

ಕೇಂದ್ರ ಸರ್ಕಾರದ ಈ ನಿರ್ಧಾರ ನಮ್ಮ ವಿದೇಶಾಂಗ ನೀತಿಯನ್ನು ಅಮೆರಿಕಕ್ಕೆ ಒತ್ತೆಯಿಡುವಂತದ್ದಾಗಿದೆ. ಮತ್ತು ಇದು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾಗಿದೆ. ಇಲ್ಲಿ ಅತ್ಯಂತ ಮುಖ್ಯವಾದ ಮತ್ತೊಂದು ಅಂಶವೆಂದರೆ ಇರಾನ್ ವಿರುದ್ಧ ಅಮೆರಿಕ ಹೇರಿರುವ ನಿರ್ಬಂಧಗಳಲ್ಲಿ ತೈಲ ಆಮದನ್ನು ಮುಕ್ತಗೊಳಿಸಿದೆ. ಅಂದರೆ ತೈಲ ಆಮದು ಮಾಡಿಕೊಳ್ಳುವುದಕ್ಕೆ ಸಂಬಂಧಪಟಟ್ ನಿರ್ಬಂಧದ ವ್ಯಾಪ್ತಿಗೆ ಭಾರತವನ್ನು ಸೇರ್ಪಡೆ ಮಾಡಿಕೊಳ್ಳಲು ಬರುವುದಿಲ್ಲ. ಹಾಗಾಗಿ ಭಾರತ ಈ ಕುರಿತಂತೆ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಕಾದುನೋಡುತ್ತಿದ್ದೇವೆ ಎಂದು ಅಮೆರಿಕ ವಕ್ತಾರರು ಹೇಳುತ್ತಿರುವುದು ಆಶ್ಚರ್ಯ ಮೂಡಿಸಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೊ ಕೇಂದ್ರ ಸರ್ಕಾರದ ನಿರ್ಣಯವನ್ನು ತೀವ್ರವಾಗಿ ಖಂಡಿಸಿದೆ. ಈ ನಿರ್ಧಾರ ದೇಶದ ಹಿತಾಸಕ್ತಿಗೆ ಮಾರಕವಾಗಿದೆ ಎಂದು ಹೇಳಿದೆ. ಈ ನಿರ್ಧಾರವನ್ನು ಹಿಂಪಡೆಯಬೇಕೆಂದು ಒತ್ತಾಯಿಸಿರುವ ಪಾಲಿಟ್‌ಬ್ಯೂರೊ, ಇತರ ರಾಜಕೀಯ ಪಕ್ಷಗಳೂ ಈ ಸಂಬಂಧ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ಮನವಿ ಮಾಡಿದೆ. ○

ಯುಪಿಎ ದರ್ಬಾರ್ .....

ಪುಟ 13 ರಿಂದ

ರೈತರ ಆತ್ಮಹತ್ಯೆಗಳ ಸಂಖ್ಯೆಯಲ್ಲೂ ಏರಿಕೆಯಾಗಿದೆ. ಎನ್‌ಸಿಆರ್‌ಬಿ ದಾಖಲೆಗಳ ಪ್ರಕಾರ 2009ರಲ್ಲಿ ಕನಿಷ್ಟ 17,368 ರೈತರು ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ. ಇದು ಕಳೆದ ಆರು ವರ್ಷಗಳಲ್ಲೇ ಅತಿ ಹೆಚ್ಚಿನ ಸಂಖ್ಯೆ. 2008ರಲ್ಲಿ ಈ ಸಂಖ್ಯೆ 16,196. ಅಂದರೆ 1,172 ಹೆಚ್ಚು. ಈ ಮೂಲಕ 1997ರಿಂದ ದೇಶದಲ್ಲಿ ಆತ್ಮಹತ್ಯೆಗಳ ಸಂಖ್ಯೆ 2009ರ ಅಂತ್ಯದಲ್ಲಿ 2,16,500.

ಹಿಂದಿನ ವರ್ಷಗಳಂತೆ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡ- ರೈತರ ಆತ್ಮಹತ್ಯೆಗಳ ಈ ಪಂಚಮಹಾರಾಜ್ಯಗಳದ್ದೆ ಸಿಂಹಪಾಲು- ಈ ವರ್ಷ 10,765. ಸತತ ಹತ್ತನೇ ವರ್ಷವೂ ಮಹಾರಾಷ್ಟ್ರ ರೈತರ ಆತ್ಮಹತ್ಯೆಗಳಲ್ಲಿ ಎಲ್ಲಕ್ಕೂ ಮುಂದಿದೆ. ಎರಡನೇ ಸ್ಥಾನ ರೈತರ ಹೆಸರಿನಲ್ಲಿ ಅಧಿಕಾರ ಸ್ವೀಕರಿಸಿದ ಯೆಡ್ಯೂರಪ್ಪನವರ ಕರ್ನಾಟಕದ್ದು. ಈ ವರ್ಷ ಅತಿ ಹೆಚ್ಚು ಹೆಚ್ಚಳ ಕಂಡ ರಾಜ್ಯವೂ ಕರ್ನಾಟಕವೇ. ಇಲ್ಲಿ 2009ರಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 2,282, ಹಿಂದಿನ ವರ್ಷಕ್ಕಿಂತ 545 ಹೆಚ್ಚು. ○

ಸಾಮ್ರಾಜ್ಯಶಾಹಿ ವಿರೋಧಿ ವಿದ್ಯಾರ್ಥಿ-ಯುವಜನ ಉತ್ಸವ

ಪುಟ 9 ರಿಂದ

ಮಲೇಮ ಮಾತನಾಡಿದರು.

ಫ್ರೀ ಫ್ರೀ ಪ್ಯಾಲಿಸ್ಟೇನ್, ಫ್ರೀ ಫ್ರೀ ಕ್ಯೂಬನ್ ಫೈವ್, ಫ್ರೀ ಫ್ರೀ ವೆಸ್ಟ್ ಸಹಾರಾ.. ಘೋಷಣೆಗಳು ಮೊಳಗುತ್ತಿದ್ದವು. ಮುಖಂಡರ ಮಾತುಗಳು ಇದೇ ಸಾಮ್ರಾಜ್ಯಶಾಹಿ ವಿರೋಧಿ ಆಶಯಗಳನ್ನು ಬಿಂಬಿಸಿದವು.

ಉತ್ಸವದ ಒಳ ಬೆಳಗು

ದೇಶದ 126 ದೇಶಗಳಿಂದ 15000 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಈ ಉತ್ಸವ, ಸಾಮ್ರಾಜ್ಯಶಾಹಿ ವಿರೋಧಿಯಾದ ಅಂತರಾಷ್ಟ್ರೀಯ ವೇದಿಕೆಗಳಲ್ಲೇ ಅತ್ಯಂತ ಬೃಹತ್ತಾದ ವೇದಿಕೆ ಮತ್ತು ಒಂದು ಬೃಹತ್ತಾದ ಆಂದೋಲನ.

ಇಲ್ಲಿ ನಡೆದದ್ದು ವೈವಿಧ್ಯಮಯ ಚಟುವಟಿಕೆಗಳು, ಬಂಡವಾಳಶಾಹಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮ, ಶಿಕ್ಷಣ, ಉದ್ಯೋಗ, ಆರೋಗ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ



ಯುವಜನ ಎದುರಿಸುತ್ತಿರುವ ಪರಿಸ್ಥಿತಿ ಸವಾಲುಗಳು, ಸಾಮ್ರಾಜ್ಯಶಾಹಿಯ ನೇರ ನಗ್ನ ದಾಳಿಗಳು, ಅವುಗಳ ಭೀಕರ ಪರಿಣಾಮಗಳು. ಸಮೂಹ ಮಾಧ್ಯಮಗಳಲ್ಲಿ ಸಾಮ್ರಾಜ್ಯಶಾಹಿ ಹಿಡಿತಗಳು, ಸಾಮ್ರಾಜ್ಯಶಾಹಿಯ ಯುದ್ಧದಾಹ, ಸಾಮ್ರಾಜ್ಯಶಾಹಿ ಸುಲಿಗೆಗೆ ದಾಳವಾಗಿ ಬಳಕೆಯಾಗುತ್ತಿರುವ ಐ.ಎಂ.ಎಫ್ ವಿಶ್ವಬ್ಯಾಂಕ್ ಡಬ್ಲ್ಯು.ಟಿ.ಓ ಅಂತರರಾಷ್ಟ್ರೀಯ ವೇದಿಕೆಗಳು.... ಇಲ್ಲಿ ಚರ್ಚೆಗೆ ಬಂದದ್ದು, ಇಲ್ಲಿ ಚಿಂತನ ಮಂಥನ ಗುರಿಯಾದದ್ದು. ಇಂತಹ ಹತ್ತಾರು ವಿಷಯಗಳು, ವಿಚಾರ ಸಂಕಿರಣ, ಕಾರ್ಯಾಗಾರಗಳು, ಸಭೆ, ಚರ್ಚೆ, ಏಕಕಾಲಕ್ಕೆ ಹತ್ತಾರು ಚಟುವಟಿಕೆಗಳು..

ಇವು ಯಾವುವು ತೌಡು ಕುಟ್ಟುವ ಒಣ ಭಾಷಣಗಳಲ್ಲ. ನಿರ್ದಿಷ್ಟ ಚರ್ಚೆ, ನಿಖರ ಮಾಹಿತಿ, ಸಚಿತ್ರ ಪ್ರಾತ್ಯಕ್ಷಿಕೆಗಳು, ಸಾಮ್ರಾಜ್ಯಶಾಹಿಯು ನಡೆಸಿದ ಯುದ್ಧ, ನಡೆಸಿದ ದಾಳಿಗಳ ಸಚಿತ್ರ ಸಾಕ್ಷಿ. ವಿಡಿಯೋ ಪ್ರದರ್ಶನಗಳು, ಫೋಟೋಗಳು.

ಕಟಕಟೆಯಲ್ಲಿ ಸಾಮ್ರಾಜ್ಯಶಾಹಿ :

ಕ್ರೌರ್ಯ ಬಿಡಿಸಿಟ್ಟ ಜೀವಂತ ಸಾಕ್ಷಿಗಳು

ಒಂದು ಹಂತಕ್ಕೆ ವಿಡಿಯೋ, ಫೋಟೋಗಳು ಸಹ ನಿರ್ಜೀವ ಸಾಕ್ಷಿಗಳೇ. ಈ ಉತ್ಸವದಲ್ಲಿ ಸಾಮ್ರಾಜ್ಯಶಾಹಿ ಕ್ರೌರ್ಯಕ್ಕೆ ತುತ್ತಾದ ಹತ್ತಾರು ಜೀವಂತ ಸಾಕ್ಷಿಗಳು ಕಟಕಟೆಯಲ್ಲಿ ಸಾಕ್ಷ್ಯ ನುಡಿದವು. 1976ರಲ್ಲಿ ಕ್ಯೂಬಾದ ನಾಗರೀಕ ವಿಮಾನದ ಮೇಲೆ ಅಮೇರಿಕಾ ಬಾಂಬು ಹಾಕಿ 73 ಜನ ನಿರಪರಾಧಿ ಮುಗ್ಧರ ಮಾರಣ ಹೋಮಗೈದುದಕ್ಕಾಗಿ ಸಾಕ್ಷಿಯಾಗಿ ಈ ಹತ್ಯಾಕಾಂಡದಲ್ಲಿ ತಮ್ಮ ತಂದೆಯನ್ನು ಕಳೆದುಕೊಂಡ ಮಕ್ಕಳು ಇಲ್ಲಿ ಸಾಕ್ಷಿ ನುಡಿದರು.

ಇಸ್ರೇಲಿ ಸೇನೆಯು ಪ್ಯಾಲಿಸ್ತೇನ್ ಜನರ ವಸತಿ ಪ್ರದೇಶಗಳಿಗೆ ನುಗ್ಗಿ ತಮಗೆ ಬೇಕಾದವರನ್ನು ಹೆಕ್ಕಿ ಹೊತ್ತೊಯ್ಯಲು 'ರಕ್ಷಣಾ ಗೋಡೆ'ಯಾಗಿ ಬಳಕೆಯಾದ ಪ್ಯಾಲಿಸ್ತೇನ್ ಮಹಿಳೆಯರು ಕಟಕಟೆಯಲ್ಲಿ ಸಾಮ್ರಾಜ್ಯಶಾಹಿಯ ಕ್ರೂರ ಮುಖವನ್ನು ಬಯಲಿಗೆಳೆದರು.

ಕ್ಯೂಬದ ಮೇಲೆ ಅಮೇರಿಕದ ಘೋರ ಬಾಂಬು ದಾಳಿಗಳ ಕುರಿತು ಮಾತನಾಡಿದ್ದೇ ಅಪರಾಧವಾಗಿ 5 ಜನ ಕ್ಯೂಬನ್ನರನ್ನು ಅಮೇರಿಕ ಜೈಲಿಗಟ್ಟಿದೆ.

ಅಮೇರಿಕದ ಜೈಲಿನಲ್ಲಿರುವ ಕ್ಯೂಬನ್ 5 ಗಳಲ್ಲಿ ಇಬ್ಬರ ಮಕ್ಕಳು ಕಟಕಟೆಯಲ್ಲಿ ನಿಂತು ತಮ್ಮ ತಂದೆಯನ್ನು ಭೇಟಿ ಮಾಡಲು ಸಾವಿರ ನಿರ್ಬಂಧ ಸಾರುವ ಸಾಮ್ರಾಜ್ಯಶಾಹಿ ದುಷ್ಟತನದ ವಿರುದ್ಧ ಸಾಕ್ಷ್ಯ ನುಡಿದರು.

ಅಮೇರಿಕ, ಫ್ರಾನ್ಸ್ ಬೆಂಬಲಿತ ಮೊರಕ್ಕೊ ದೇಶದ ರಾಜಾಡಳಿತದಿಂದ ತಮ್ಮ ದೇಶವೇ ಆಕ್ರಮಣಕ್ಕೆ ಒಳಗಾಗಿರುವ ಪರಿಸ್ಥಿತಿಯಲ್ಲಿ ಮೊರಕ್ಕೊ ಜೈಲುಗಳಲ್ಲಿ ಮೊರಕ್ಕೊ ಸೈನಿಕರಿಂದ ಅತ್ಯಾಚಾರಕ್ಕೊಳಗಾದ ಮಹಿಳೆಯರು, ಸ್ವಂತ ತಮ್ಮ ಮಕ್ಕಳು ತಮ್ಮ ಕಣ್ಣೆದುರೇ ಹೆಣವಾದುದನ್ನು ಕಂಡ ತಾಯಂದಿರು ಅಲ್ಲಿ ನಿಂತು ಸಾಮ್ರಾಜ್ಯಶಾಹಿಯ ಅಮಾನವೀಯತೆಗೆ ಸಾಕ್ಷಿ ನುಡಿದು ಸಾಮ್ರಾಜ್ಯಶಾಹಿಗೆ ಧಿಕ್ಕಾರ ಹಾಕಿದರು.

ಅಮೇರಿಕಾ, ಫ್ರಾನ್ಸ್ ಕುಮ್ಮಕ್ಕಿನೊಂದಿಗೆ ಫಾಸ್ಪೇಟ್ ಖನಿಜ ಶ್ರೀಮಂತ ಪಶ್ಚಿಮ ಸಹರಾ ದೇಶದ ಮೇಲೆ ಮೊರಕ್ಕೋ ದೇಶದ ದಾಳಿ



ಸಾಮ್ರಾಜ್ಯಶಾಹಿ ಪಿತೂರಿ ವಿರುದ್ಧ ಸೆಟೆದು ನಿಂತ ಪಶ್ಚಿಮ ಸಹರಾ ವೀರ ವನಿತೆಯರು



ಮನುಷ್ಯ ಮತ್ತು ಪ್ರಕೃತಿಯ ವಿರುದ್ಧ ದೊಡ್ಡ ಅಪರಾಧಿ, ಯುದ್ಧ ದಾಹಿ ಜಾರ್ಜ್ ಬುಷ್

ನ್ಯಾಯಾಲಯದಲ್ಲಿ ಮಂಡನೆಯಾದ ವಾದ ವಿಚಾರ ಒದಗಿಸಲಾದ ಸಾಕ್ಷಿಗಳನ್ನೆಲ್ಲ ಸಾಮ್ರಾಜ್ಯಶಾಹಿ ವಿರೋಧಿ ನ್ಯಾಯಾಲಯ ಪರಿಶೀಲಿಸಿತು. ಇದು ಏಕಮುಖ ಪ್ರಕ್ರಿಯೆಯಲ್ಲ. ಆರೋಪಿಯ ಪರ ವಹಿಸುವವರಿಗೂ ಈ ನ್ಯಾಯಾಲಯದಲ್ಲಿ ಮಾತನಾಡಲು ಅವಕಾಶವಿತ್ತು. ಉಹುಂ. ಸಾಮ್ರಾಜ್ಯಶಾಹಿಯನ್ನು ಬೆಂಬಲಿಸಿ ಮಾತನಾಡುವವರು ಯಾರೂ ಇಲ್ಲ.

ನ್ಯಾಯಪೀಠ ಘೋಷಿಸಿತು. ಸಾಮ್ರಾಜ್ಯಶಾಹಿಯು ಮಾತುಕತೆಗೆಂದು ಯಾರನ್ನು ಟೇಬಲ್ಲಿಗೆ ಆಹ್ವಾನಿಸುತ್ತಿಲ್ಲ. ಬಂದೂಕು, ಗನ್‌ಗಳ ಮೂಲಕ ಮಾತನಾಡುತ್ತಿದೆ. ಅದು ಬಾಂಬ್‌ಗಳ ಮೂಲಕ ಮಾತನಾಡುತ್ತಿದೆ.

ಜಗತ್ತಿನಾದ್ಯಂತ ಯುವಜನ ಈ ದಾಳಿಗೆ ಮುಖಾಮುಖಿಯಾಗಿದ್ದಾರೆ. ಜನತೆ- ದುಡಿಯುವ ಜನತೆ ಮುಖಾಮುಖಿಯಾಗಿದ್ದಾರೆ. ಸಂಘರ್ಷ ಮುಂದುವರೆಯುತ್ತದೆ.

ನ್ಯಾಯಪೀಠ ಮತ್ತೆ ಘೋಷಿಸಿತು. ಮನುಷ್ಯತ್ವದ ಹಾಗೂ ಪ್ರಕೃತಿಯ ವಿರುದ್ಧ ಹಲವು ಘೋರ ಮತ್ತು ಪಾತಕ ಯುದ್ಧಗಳಿಗೆ ಕಾರಣ ಜಾರ್ಜ್‌ಬುಷ್ ನೀನು ಅಪರಾಧಿ !! ಜಾರ್ಜ್ ಬುಷ್ ನೀನು ಒಬ್ಬ ಕ್ರಿಮಿನಲ್.

ಪಾತಕಿ ಜಾರ್ಜ್‌ಬುಷ್‌ಗೆ ನ್ಯಾಯಾಲಯದಿಂದ 'ಸಿಟಿಜನ್ ಆರೆಸ್ಟ್' ಶಿಕ್ಷೆ ಘೋಷಣೆಯಾಯಿತು. ನ್ಯಾಯಾಲಯ ಆಗ್ರಹಿಸಿತು. ಮನುಷ್ಯತ್ವದ ವಿರುದ್ಧದ ಕ್ರೌರ್ಯಕ್ಕಾಗಿ ಆತ 'ಮೋಸ್ಟ್ ವಾಂಟೆಡೂ' 'ಆತ ಬೇಕಾಗಿದ್ದಾನೆ....' ಎಂದು ನ್ಯಾಯಾಲಯ ಘೋಷಿಸಿತು.

ನ್ಯಾಯಾಲಯದ ನಿರ್ಣಯ ಆಗ್ರಹಿಸಿತು. ಅಮೇರಿಕಾದ ಜೈಲಿನಲ್ಲಿ ಕೊಳೆ ಹಾಕಿರುವ ಐವರು ನಿರಪರಾಧಿ ಕ್ಯೂಬನ್ನರನ್ನು ಕೂಡಲೇ ಬಿಡುಗಡೆ ಮಾಡಬೇಕು. ಅವರ ಸಂಬಂಧಿಕರಿಗೆ ಭೇಟಿಗಾಗಿ ತತ್‌ಕ್ಷಣ ವೀಸಾ ನೀಡಬೇಕು. ಕ್ಯೂಬಾದ ಮೇಲಿನ ಎಲ್ಲ ದಿಗ್ಬಂಧನ ಕೂಡಲೇ ಕೊನೆಯಾಗಬೇಕು.

ಅಮೇರಿಕದ ಬೆಂಬಲದಿಂದ ಪ್ಯಾಲಿಸ್ತೇನ್ ದೇಶವನ್ನು ವಶಪಡಿಸಿಕೊಂಡಿರುವ ಇಸ್ರೇಲ್ ತನ್ನ ಕಬ್ಜಾವನ್ನು ತೆರವು ಮಾಡಬೇಕು. ಪ್ಯಾಲಿಸ್ತೇನ್ ನಿರಾಶ್ರಿತರು ತಮ್ಮ ತಾಯ್ನಾಡಿಗೆ ಮರಳಲು ಅವಕಾಶ ನೀಡಬೇಕು. ಘೋರ ಹತ್ಯಾಕಾಂಡಗಳಿಗೆ ಕೂಡಲೇ ತಡೆಹಾಕಬೇಕು. ಜರ್ಮನ್ ಸೈನ್ಯ ನಮೀಬಿಯಾದಲ್ಲಿ 80 ಸಾವಿರ ಜನರನ್ನು ನಿರ್ದಯವಾಗಿ ಕೊಂದು ನಡೆಸಿದ ಘೋರ ನರಮೇಧಕ್ಕೆ ನೂರು ವರ್ಷ ತುಂಬಿದ ಸಂದರ್ಭ ಹಳತಾಗುತ್ತಿದ್ದರೂ ಸೂಕ್ತ ಪರಿಹಾರಕ್ಕಾಗಿ ನಮೀಬಿಯಾದ ಸಂತ್ರಸ್ತರು ಕಾಯುತ್ತಿರುವುದು ತಪ್ಪಬೇಕು. ತತ್‌ಕ್ಷಣ ಪರಿಹಾರ ಒದಗಿಸಬೇಕು.

ಪಶ್ಚಿಮ ಸಹರಾ ದೇಶದ ಮೇಲಿನ ಆಕ್ರಮಣವನ್ನು ಮೊರಾಕ್ಕೊ ತೆರವುಗೊಳಿಸಬೇಕು. ಉತ್ಸವದಲ್ಲಿ ಹಾಜರಿರಬೇಕಿದ್ದ ಪ್ರತಿನಿಧಿಗಳಲ್ಲಿ ಬಂಧನಕ್ಕೆ ಗುರಿಯಾಗ್ಗಿ ಮೊರಕ್ಕೊದ ಜೈಲಿನಲ್ಲಿರುವ 11 ಜನ ಹೋರಾಟಗಾರರನ್ನು ಬಿಡುಗಡೆ ಮಾಡಬೇಕು. ಮೊರಾಕ್ಕ ರಾಯಬಾರಿಯನ್ನು ದಕ್ಷಿಣ ಆಫ್ರಿಕ ಸರ್ಕಾರ ಉಚ್ಚಾಟಿಸಬೇಕು.

ಭಾರತದಲ್ಲಿ ಬೋಪಾಲ್ ವಿಷಾನಿಲ ದುರಂತ ಹೆಸರಿನ ಹತ್ಯಾಕಾಂಡದಲ್ಲಿ ಸಂತ್ರಸ್ಥರಿಗೆ ಸೂಕ್ತ ಪರಿಹಾರ ಕೊಡಬೇಕು. ಆಂಡರ್‌ಸನ್‌ನನ್ನು ಭಾರತಕ್ಕೆ ಒಪ್ಪಿಸಬೇಕು.....

ಹೀಗೆ ನ್ಯಾಯಾಲಯ ನ್ಯಾಯಾದೇಶದ ಚಾಟಿ ಬೀಸಿದೆ. ಇನ್ನೂ ವಿವರಗಳಿವೆ. ನಿರೀಕ್ಷಿಸಿ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH